ವಿಚಾರಣಾಧಿಕಾರಿಯನ್ನಾಗಿ ನೇಮಿಸಿದ್ದು ಮೂಲ ದಾಖಲೆಗಳ ಕೊರತೆಯಿಂದ ಇಲಾಖಾ ವಿಚಾರಣೆ ಪ್ರಾರಂಭವಾಗಿಲ್ಲ. ಮೂಲ ದಾಖಲಾತಿಗಳನ್ನು ವಿಚಾರಣಾಧಿಕಾರಿಗಳು ಪಡೆದ ನಂತರ ವಿಚಾರಣೆ ಪ್ರಾರಂಭವಾಗುತ್ತದೆ.

ಮೂಲ ದಾಖಲಾತಿಗಳನ್ನು ಶೀಘ್ರವಾಗಿ ಪಡೆದು ವಿಚಾರಣೆಯನ್ನು ಆದಷ್ಟು ಬೇಗೆ ಮುಕ್ತಾಯಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಉಪಾಧ್ಯಕ್ಷರು : ಈಗ ಸಭೆಯನ್ನು ಒಂದು ಗಂಟೆ ಕಾಲ ಮುಂದೂಡಲ್ಪಟ್ಟು ಮತ್ತೆ 3 ಗಂಟೆಗೆ ಸೇರುವುದು.

ಸಭೆಯು ಮಧ್ಯಾಹ್ನ 1-52ಕ್ಕೆ ಮುಂದೂಲ್ಪಟ್ಟು ಪುನಃ 3 ಗಂಟೆಗೆ ಸೇರುವುದಾಗಿ ನಿಶ್ಚಯಿಸಿತು.

ಸಭೆಯು ಮಧ್ಯಾಹ್ನ 3-10ಕ್ಕೆ ಸಮಾವೇಶಗೊಂಡಿತು.

(ಸನ್ಮಾನ್ಯ ಉಪಾಧ್ಯಕ್ಷರು (ಶ್ರೀ ಎಂ.ಎಸ್. ಪಾಟೀಲ್) ರವರು ಅಧ್ಯಕ್ಷ ಪೀಠವನ್ನಲಂಕರಿಸಿದ್ದರು).

ಶಾಸನ ರಚನಾ ಕಾರ್ಯಕಲಾಪ

ಎ) ಪರ್ಯಾಲೋಚನಾ ಪ್ರಸ್ತಾವ.

(1) ಭೂಸುಧಾರಣೆ ತಿದ್ದುಪಡಿ ಮೇಲಿನ ಮುಂದುವರಿದ ಚರ್ಚೆ.

+ ಶ್ರೀ ಜೆ.ಪಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಉಪಾಧ್ಯಕ್ಷರೇ ಕಳೆದ ಸಂದರ್ಭದಲ್ಲಿ ಮಾತನಾಡುತ್ತಾ ಅರ್ಧಕ್ಕೆ ನಿಲ್ಲಿಸಿದ್ದೆ. ಇದರಲ್ಲಿ ಮುಖ್ಯ ಅಂಶ, ಏಕೆಂದರೆ ಕಾನೂನಿನ ಅಂಶಗಳನ್ನೆಲ್ಲಾ ಇಲ್ಲಿ ಮಾತನಾಡಬೇಕಾದ ಅವಶ್ಯಕತೆ ಇಲ್ಲ. ಮುಖ್ಯವಾಗಿ 109 ಸೆಕ್ಷನ್‌ನ ತಿದ್ದುಪಡಿಗೆ ತರತಕ್ಕಂತಹ ಅಂಶಗಳೇನಿವೆ ಎಂದರೆ ಒಂದು, ಸರ್ಕಾರ ತಾನು ಬಯಸಿದಲ್ಲಿ ಎಷ್ಟೇ ಭೂಮಿಯನ್ನಾದರೂ ಪಡೆಯಬಹುದೆಂಬುದಕ್ಕೆ ಅವಕಾಶವೇನಿದೆ ಅದು ನಿಜವಾಗಿಯೂ ಕೂಡ ಬಹಳ ಅಪಾಯಕಾರಿಯಾದು. ಏಕೆಂದರೆ ಇವತ್ತು ಈ ಸರ್ಕಾರ ಇರಬಹುದು ನಾಳೆ ಇನ್ನೊಂದು ಸರ್ಕಾರ ಬರಬಹುದು. ಯಾವುದೇ ಸರ್ಕಾರ ಕೃಷಿ ಭೂಮಿಯನ್ನು ತನಗಿಷ್ಟ ಬಂದರೀತಿಯಲ್ಲಿ ಯಾವುದೇ ಸಂದರ್ಭದಲ್ಲಿ ತೆಗೆದು ಕೊಳ್ಳಬಹುದೆಂಬುದು ಒಂದನೆಯದು ಕೃಷಿ ಕ್ಷೇತ್ರಕ್ಕೆ ಆಗುವ ದೊಡ್ಡ ಆಘಾತ. ಎರಡನೆಯದು ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಉಪಯೋಗಿಸುವುದು ಕೃಷಿ ಉತ್ಪಾದನೆಗಾಗುವ ಇನ್ನೊಂದು ದೊಡ್ಡ ಹೊಡೆತ. ಅದರ ಜೊತೆಯಲ್ಲೇ 109 1ಎ 1, 2ರಲ್ಲಿರುವ ವಿದ್ಯಾಸಂಸ್ಥೆಗಳಿಗೆ ಬೇರೆ ಸಂಸ್ಥೆಗಳಿಗೆ ಇಂತಿಷ್ಟು ಭೂಮಿ ಪಡೆಯಬಹುದೆಂಬ ಅವಕಾಶವಿದೆ. ಈಗಾಗಲೇ ಕರ್ನಾಟಕದಲ್ಲಿ ಹಲವಾರು ಸಂದರ್ಭಗಳಲ್ಲಿ ನಮ್ಮೆಲ್ಲರ ಗಮನಕ್ಕೂ ಬಂದಿರುವ ವಿಷಯ, ವಿದ್ಯಾಸಂಸ್ಥೆಗಳ ಹೆಸರಿನಲ್ಲಿ ಎಕರೆಗಟ್ಟಲೆ ಭೂಮಿಯನ್ನು ಪಡೆದಿದ್ದಾರೆ. ಆದರೆ ಯಾವ ಉದ್ದೇಶಕ್ಕಾಗಿ ಭೂಮಿ ಪಡೆಯುತ್ತಾರೋ ಆ ಉದ್ದೇಶಕ್ಕೋಸ್ಕರ ಉಪಯೋಗಿಸುವ ಪರಿಸ್ಥಿತಿ ಬಹಳ ಕನಿಷ್ಟ. ಬೇರೆ ಬೇರೆ ಉದ್ದೇಶಗಳಿಗೆ ಉಪಯೋಗಿಸುತ್ತಾರೆ. ಆದರೆ ಭೂಮಿಯನ್ನು ಪಡೆದುಕೊಳ್ಳುವುದು ವಿದ್ಯಾಸಂಸ್ಥೆಗಳ ಹೆಸರಿನಲ್ಲಿ.

ಹಾಗೆ ಮಠ ಮಾನ್ಯಗಳಿಗೂ ಆ ರೀತಿ ಭೂಮಿ ಪಡೆಯಲು ಅವಕಾಶ ಮಾಡಿಕೊಡಲಾಗಿದೆ. ಈಗಾಗಲೇ ಭೂಸುಧಾರಣಾ ಕಾನೂನನ್ನು ತಂದ ಸಂದರ್ಭದಲ್ಲೇ ಹಲವಾರು ರಂಗಗಳಿಗೆ ಅದನ್ನು ಎಕ್ಸೆಂಪ್ಟ್ ಮಾಡಲಾಗಿತ್ತು. ಕಾಫಿ, ಟೀ, ಏಲಕ್ಕಿ ಎಸ್ಟೇಟ್ ಬೇರೆ ಬೇರೆ ಎಸ್ಟೇಟುಗಳಿಗೆಲ್ಲಾ ರಿಯಾಯಿತಿ ಮಾಡಲಾಗಿದೆ. ಹಾಗೆ ರಿಯಾಯಿತಿ ಪಡೆದ ಭೂಮಿಯ ನೂರಾರು ಎಕರೆಯನ್ನು ಭೂಮಾಲೀಕರ ತಮ್ಮ ಸ್ವಾಧೀನದಲ್ಲೇ ಇಟ್ಟುಕೊಂಡಿದ್ದಾರೆ. ಆದರೆ ಆ ಎಸ್ಟೇಟುಗಳ ಉದ್ದೇಶವೇನು? ಕಾಫಿ ಟೀ ಏಲಕ್ಕಿಗಳ ಎಸ್ಟೇಟನ ಬೆಳೆ ಉದ್ದೇಶ ಕಡಿಮೆಯಾಗಿ ಬೇರೆ ಬೇರೆ ಉದ್ದೇಶಕ್ಕೆ ಇವತ್ತು ಉಪಯೋಗವಾಗುತ್ತಿದೆ. ನಾಳೆ ದಿವಸ ಹಾರ್ಟಿಕಲ್ಚರ್, ಫ್ಲೋರಿಕಲ್ಚರ್, ಕಲ್ಚರ್‌ಗೋಸ್ಕರ ಭೂಮಿಯನ್ನು ಪಡೆಯಬೇಕು. ನಮ್ಮ ಉತ್ಪಾದನೆಯನ್ನು ಹೆಚ್ಚಿಸಬೇಕು ಮತ್ತು ವಿದೇಶೀ ಮಾರುಕಟ್ಟೆಗಳಲ್ಲಿ ಸ್ಪರ್ಧೆ ಮಾಡತಕ್ಕಂತಹ ರೀತಿಯಲ್ಲಿ ಕೃಷಿ ಉತ್ಪಾದನೆಯಾಗಬೇಕೆಂಬ ಉದ್ದೇಶ ಇದೆ ಎಂದು ಸರಕಾರ ಏನು ಹೇಳುತ್ತಿದೆ ಆ ಉದ್ದೇಶಕ್ಕೆ ಭೂಮಿಯನ್ನು ಪಡೆದರೂ ಕೂಡ ಅದು ಉಪಯೋಗವಾಗುವುದಿಲ್ಲ. ಕನಿಷ್ಟ ಆ ಕ್ಲಾಸನಲ್ಲಿ ಅವರೊಂದು ರೈಡರ್ ಆದರೂ ಹಾಕಬೇಕಾಗಿತ್ತು. ಸಪೋಸ್ ಯಾವುದೇ ಒಬ್ಬ ವ್ಯಕ್ತಿ ಅಥವಾ ಸಂಸ್ಥೆ ಹಾರ್ಟಿಕಲ್ಚರ್ ಭೂಮಿಯನ್ನು ಏನು ಪಡೆದಿರುತ್ತಾರೆ ಅವರು ಆ ಉದ್ದೇಶಕ್ಕೆ ಉಪಯೋಗ ಮಾಡಲಿಲ್ಲವೆಂದು ಹೇಳಿದಾಗ ಅದನ್ನು ಸರಕಾರ ವಾಪಸ್ ಪಡೆಯಬಹುದು ಏನ್ನುವ ಕ್ಲಾಸ್ ಹಾಕದಿದ್ದರೆ ಅದಾದರೂ ಅಂಕಿತವಾಗಿ ಇರುತ್ತಿತ್ತು. ಇದರಲ್ಲಿ ಏನೂ ಇಲ್ಲ. It is totally a sweeping authority conferred by the Government on the private people. ಇದೊಂದು ಕಡೆಯಾದರೆ ಹಿಂದೆ ನಾನು ಮಾತನಾಡತಕ್ಕಂತಹ ಸಂದರ್ಭದಲ್ಲಿ ಹೇಳಿದ್ದೆ. ಭೂ ಪರಿಮಿತಿ ಕಾಯಿದೆಯನ್ನು ತಂದಂತಹ ಉದ್ದೇಶವೇನು ಇದೆ ಆ ಉದ್ದೇಶ ನಮಗೆ ಮುಖ್ಯ. ಇವತ್ತು ಬದಲಾದಂತಹ ಪರಿಸ್ಥಿತಿಯಲ್ಲಿ ಮಾನ್ಯ ಕಂದಾಯ ಮಂತ್ರಿಗಳು ಹೇಳುತ್ತಿದ್ದರು 25 ವರ್ಷಗಳ ಹಿಂದೆ ಭೂ ಸುಧಾರಣಾ ಕಾನೂನು ತರತಕ್ಕಂತಹ ಸಂದರ್ಭದಲ್ಲಿ ಪರಿಸ್ಥಿತಿ ಬೇರೆ ಇತ್ತು ಇವತ್ತು ಪರಿಸ್ಥಿತಿ ಬದಲಾಗಿದೆ. ಆ 25 ವರ್ಷಗಳ ಹಿಂದೆ ತಂದಂತಹ ತಿದ್ದುಪಡಿಯನ್ನೇ ಇವತ್ತು ಇಲ್ಲಿ ಇಟ್ಟು ಈ ದೇಶದಲ್ಲಿ ಕೃಷಿ ರಂಗದಲ್ಲಿ ಉತ್ಪಾದನೆಯು ಹೆಚ್ಚಾಗಲಿಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಿದ್ದರು. ನಾನು ಮಾನ್ಯ ಕಂದಾಯ ಮಂತ್ರಿಗಳಿಗೆ ಸರಕಾರಕ್ಕೆ ಹೇಳುತ್ತಿದ್ದೇನೆ. ಯಾವ ಉದ್ದೇಶಕ್ಕೆ ತಿದ್ದುಪಡಿ ತಂದಿದ್ದರು, ಅಂದರೆ ಕೃಷಿ ಯೋಗ್ಯವಾಗಿರತಕ್ಕಂತಹ ಭೂಮಿಯನ್ನು 80 ಭಾಗ ಭೂಮಿ ಕೇವಲ ಭಾರತ ದೇಶದಲ್ಲಿ ಕೇವಲ 20 ಜನರ ಕೈಯ್ಯಲ್ಲಿತ್ತು. ಇನ್ನು 20 ಪರ್ಸೆಂಟ್ ಕೃಷಿ ಭೂಮಿ 80 ಜನರ ಕೈಯ್ಯಲ್ಲಿತ್ತು. ಆ ಭೂಮಿಯ ಮೇಲಿದ್ದಂತಹ ಒಡೆತನವನ್ನು ಅದರಲ್ಲೂ ಮುಖ್ಯವಾಗಿ ಹಳ್ಳಿಗಾಡಿನ ಪ್ರದೇಶದಲ್ಲಿದ್ದಂತಹ ಊಳಿಗಮಾನ್ಯ ಪ್ರಭುಗಳನ್ನು ಫ್ಯೂಡಲ್ ಲಾರ್ಡ್ಸ ಅನ್ನು ಅವರಿಗೆ ಭೂಮಿಯ ಮೇಲಿದ್ದಂತಹ ಹಿಡಿತವನ್ನು ತಪ್ಪಿಸುವುದಕ್ಕೋಸ್ಕರ ಮತ್ತು ಉಳುವವನಿಗೇ ಭೂಮಿಯಾಗಬೇಕೆಂಬ ಉದ್ದೇಶಕ್ಕೋಸ್ಕರ ಆ ತಿದ್ದುಪಡಿಯನ್ನು ತಂದದ್ದು. ಊಳಿಗಮಾನ್ಯ ವ್ಯವಸ್ಥೆಯನ್ನು ಹಿಡಿತ ತಪ್ಪಿಸುವ ಉದ್ದೇಶ ಇಲ್ಲಿ ಏನು ಅಂದರೆ ಸಾಮಾಜಿಕವಾದಂತಹ ಸಮಾನತೆಯನ್ನು ತರಬೇಕು ಉಳುವವನೇ ಭೂಮಿಯ ಒಡೆಯನಾಗಬೇಕು.

Lend to the tiller was the national slogan between 1972 and 1978, not

only in Karnataka but htorugh out the country. After 1947 every part of the country has participated in the land struggle for the land to the tiller.

ಆ ಬೃಹದಾಕಾರವಾದ ಹೋರಾಟದ ಪ್ರತಿಫಲವಾಗಿ ಭೂ ಸುಧಾರಣೆಯು ಬಂತು ಅಂದರೆ ಉಳುವವನಿಗೇ ಭೂಮಿ ಎನ್ನುವ ಪ್ರಶ್ನೆ ಬಂತು. ಭೂ ಸುಧಾರಣಾ ಕಾನೂನನ್ನು ತಿದ್ದುಪಡಿ ಮಾಡಿ ಉಳುವವನಿಗೇ ಭೂಮಿಯನ್ನು ಕೊಡಬೇಕೆಂದು ಹೇಳಿದರು. ಅದರಿಂದಾಗಿ ಕೃಷಿ ಉತ್ಪಾದನೆ ಹೆಚ್ಚಾಗುತ್ತದೆ ಅದಕ್ಕಿಂತ ಹೆಚ್ಚಾಗಿ ನಮ್ಮ ದೇಶದ ಕೈಗಾರಿಕಾ ರಂಗದಲ್ಲಿ ಉತ್ಪಾದನೆಯಾಗತಕ್ಕಂತಹ ಸರಕುಗಳೇನು ಇದೆ ಆ ಸರಕುಗಳಿಗ ನಮ್ಮ ದೇಶದಲ್ಲಿ ಆಂತರಿಕವಾದ ಮಾರುಕಟ್ಟೆ ಇಲ್ಲ ಇಂಟರನಲ್ ಮಾರ್ಕೆಟ್ ಇಲ್ಲ. Internal market in the country is so week that purchasing power of a common man is going down every day, every year, ever today, not only twenty five years ago. The main intention of introduction of Land Reforms was to increase the purchasing power of the common man. ಏಕೆಂದರೆ ಕೈಗಾರಿಕಾ ರಂಗದಲ್ಲಿ ಉತ್ಪಾದನೆಯಾಗತಕ್ಕಂತಹ ಸರಕುಗಳು ಮಾರಾಟವಾಗಬೇಕಾದರೆ ಆಂತರಿಕ ಮಾರುಕಟ್ಟೆ ಬೇಕು. ಆಂತರಿಕ ಮಾರುಕಟ್ಟೆ ಬೇಕಾದರೆ ಸಾಮಾನ್ಯ ಜನರ ಕೈಯ್ಯಲ್ಲಿ ಹಣ ಸಿಗಬೇಕು. ಸಾಮಾನ್ಯ ಜನರ ಕೈಯ್ಯದಲ್ಲಿ ಹಣ ಸಿಗಬೇಕೆಂದರೆ ಅವರ ಕೈಯಲ್ಲಿ ಭೂಮಿ ಇರತಕ್ಕಂಥಾದ್ದು ಇದೆ; ಸಾಮಾನ್ಯ ಜನರ ಕೈಯಲ್ಲಿ ಭೂಮಿ ಇದ್ದರೆ ಅವರು ಉತ್ಪಾದನೆ ಮಾಡಿದರೆ ಅವರ ಕೈಯಲ್ಲಿ ಹಣ ಸಿಗುತ್ತದೆ ಕೈಗಾರಿಕಾ ರಂಗದಲ್ಲಿ ಉತ್ಪಾದನೆಯಾಗತಕ್ಕಂತಹ ಸರಕುಗಳಿಗೆ ಮಾರ್ಕೆಟ್ ಸಿಗುತ್ತದೆ. ಇವತ್ತು ಕೈಗಾರಿಕಾ ರಂಗದಲ್ಲಿ ಟಿ.ವಿ., ರೇಡಿಯೋ ಏನೆಲ್ಲವನ್ನೂ ಇಲ್ಲಿ ಉತ್ಪಾದನೆ ಮಾಡುತ್ತೇವೆ ಅವೆಲ್ಲವೂ ಮಾರಾಟವಾಗಬೇಕಾದರೆ ಆಂತರಿಕ ಮಾರುಕಟ್ಟೆ ಬೇಕು. ಆಂತರಿಕ ಮಾರುಕಟ್ಟೆ ಇಲ್ಲದೆ ಕೈಗಾರಿಕಾ ರಂಗದಲ್ಲಿ ಉತ್ಪಾದನೆಯಾದಂತಹ ಸರಕುಗಳು ಮಾರಾಟವಾಗಲಿಕ್ಕೆ ಸಾಧ್ಯವಿಲ್ಲ. ಹಾಗೆಯೇ ಕೈಗಾರಿಕಾ ರಂಗಕ್ಕೆ ಬಂಡವಾಳ, ಕಚ್ಚಾ ಸಾಮಗ್ರಿ ಬೇಕು, ಕೈಗಾರಿಕಾ ರಂಗಕ್ಕೆ ಬಂಡವಾಳ ಕಚ್ಚಾ ಸಾಮಗ್ರಿ ಬೇಕೆಂದಾದರೆ ಕೃಷಿ ರಂಗದಲ್ಲಿ ಉತ್ಪಾದನೆ ಹೆಚ್ಚಾದರೆ ಮಾತ್ರ ಕೈಗಾರಿಕಾ ರಂಗಕ್ಕೆ ಬಂಡವಾಳ ದೊರೆಯುತ್ತದೆ. ಕಚ್ಚಾ ಸಾಮಗ್ರಿ ಸಿಗುತ್ತವೆ. ಮೂರನೇ ಅಂಶ ಕೈಗಾರಿಕಾ ರಂಗದಲ್ಲಿ ಆದಂತಹ ಉತ್ಪಾದನೆಗಳಿಗೆ ಮಾರ್ಕೆಟ್ ವಿಶಾಲವಾದರೆ ನಿರುದ್ಯೋಗ ಸಮಸ್ಯೆಗೆ ಪರಿಹಾರಸಿಗುತ್ತದೆ. ಕೈಗಾರಿಕೆಗಳು ಮುಚ್ಚಿದರೆ ನಿರುದ್ಯೋಗ ಸಮಸ್ಯೆ ಉದ್ಭವವಾಗುತ್ತದೆ. ಕೈಗಾರಿಕಾ ಉತ್ಪನ್ನಗಳು ಕಡಿಮೆಯಾಗುತ್ತವೆ. ಇನ್ನೊಂದು ಮುಖ್ಯವಾದ ಅಂಶವನ್ನು ಹೇಳುತ್ತೇನೆ. ಗ್ರಾಮೀಣ ಪ್ರದೇಶದಲ್ಲಿರತಕ್ಕಂತಹ ಅನಕ್ಷರಸ್ಥ ನಿರುದ್ಯೋಗಿಗಳಿಗೆ ನೀವು ಏನು ಕೊಡುತ್ತೀರಿ? ವಿದ್ಯಾವಂತ ನಿರುದ್ಯೋಗಿಗಳು ಕೆಲಸಬೇಕು ಎಂದು ಹೋರಾಟ ಮಾಡುತ್ತಾರೆ. ಗ್ರಾಮೀಣ ಪ್ರದೇಶದಲ್ಲಿನ ಅನಕ್ಷರಸ್ಥರ ಉದ್ಯೋಗವೆಂದರೆ ಅವನಿಗೆ ಕೂಲಿ ಕೊಡುವುದು ಒಂದೇ ದಾರಿ. ಬೇರೆ ಏನೂ ದಾರಿ ಇಲ್ಲ. ಬೇರೆ ಯಾವುದೇ ಮಾರ್ಗದಿಂದ ಅನಕ್ಷರಸ್ಥ, ನಿರುದ್ಯೋಗಿಗೆ ಕೆಲಸ ಕೊಡಲಿಕ್ಕೆ ಸಾಧ್ಯವಿಲ್ಲ. ಇದು ಬಹಳ ಮುಖ್ಯವಾದದು. ಭೂ-ಸುಧಾರಣಾ ಕಾನೂನು ತಿದ್ದುಪಡಿ ಮಾಡಿ ಯಾರು ಎಷ್ಟು ಬೇಕಾದರೂ ಭೂಮಿಯನ್ನು ಪಡೆಯಬಹುದೆಂದಾದರೆ ಯಾರಿಗೆ ಇದರಿಂದ ಅವಕಾಶವಾಗುತ್ತದೆ ಎಂದರೆ ಬ್ಲಾಕ್ ಮಾರ್ಕೆಟ್‌ನಲ್ಲಿ ಬ್ಲಾಕ್ ಹಣ ಸಂಪಾದನೆ

ಮಾಡಿರುವವರು ನೇರವಾಗಿ ಬಂಡವಾಳ ಇದ್ದು ಅದನ್ನು ಉಪಯೋಗಿಸಲಿಕ್ಕೆ ಸಾಧ್ಯವಿಲ್ಲದಿರುವ ಜನ ಭೂಮಿಯನ್ನು ಕೊಂಡು ಕೊಂಡು ಅದರ ಮೇಲೆ ಬಂಡವಾಳ ಹಾಕಿ ಅದನ್ನು ವೈಟ್ ಮನಿ ಮಾಡುವುದಕ್ಕೆ ಅವಕಾಶವಾಗುತ್ತದೆ. ಹಾರ್ಟಿಕಲ್ಚರ್, ಫ್ಲೋರಿಕಲ್ಚರ್, ಅಗ್ರಿಕಲ್ಚರನ ಹೆಸರಿನಲ್ಲಿ ನೂರಾರು ಎಕರೆ ಭೂಮಿಯನ್ನು ಪಡೆದು ಆ ಭೂಮಿಯನ್ನು ಅವರ ಸ್ವಾಧೀನದಲ್ಲಿಟ್ಟುಕೊಂಡು ಫ್ಲೋರಿಕಲ್ಚರ್ ಮಾಡುವುದಿಲ್ಲ ಹಾರ್ಟಿಕಲ್ಚರ್ ಮಾಡುವುದಿಲ್ಲ ಆಕ್ವ ಕಲ್ಚರ್ ಮಾಡುವುದಿಲ್ಲ. ಮುಖ್ಯವಾಗಿ ಕರಾವಳಿ ಪ್ರದೇಶದ ಪ್ರಶ್ನೆಗೆ ಬಂದರೆ ಹಾರ್ಟಿಕಲ್ಚರಗೆ ಸತತವಾಗಿ 8-10 ವರ್ಷ ಉಪಯೋಗ ಮಾಡಿದಂತಹ ಭೂಮಿ ಏನು ಇದೆ ಆ ಭೂಮಿ ಮತ್ತೆ ಎಂದೆಂದಿಗೂ ಕೃಷಿ ಯೋಗ್ಯವಾಗುವುದಿಲ್ಲ. ಅದರ ಫರ್ಟಿಲಿಟಿ ಹೋಗುತ್ತದೆ. ಫರ್ಟಿಲಿಟಿ ಹೋದ ಮೇಲೆ ಅದು ಕೃಷಿಗೆ ಯೋಗ್ಯವಾಗಲಿಕ್ಕೆ ಸಾಧ್ಯವಿಲ್ಲ. ಹಾರ್ಟಿ ಕಲ್ಚರಗೆ ಉಪಯೋಗಿಸಿದಂತಹ ಭೂಮಿ ಅದು. ಫ್ಲೋರಿಕಲ್ಚರ್, ಹಾರ್ಟಿಕಲ್ಚರ್ ಸಣ್ಣ ಸಣ್ಣ ಹಿಡುವಳಿದಾರರೇ ಇರತಕ್ಕಂಥಾದ್ದು. ಕಮರ್ಷಿಯಲ್ ಕ್ರಾಪ್ಸ ಬೆಳೆಯುತ್ತಾರೆ. 10-1520 ಎಕರೆ ಇರತಕ್ಕಂತಹ ಭೂ ಮಾಲೀಕರು ಕಡಿಮೆ.2-3 ಎಕರೆ ಇಟ್ಟುಕೊಂಡಿದ್ದಾರೆ ಅದರಲ್ಲಿ ರೇಷ್ಮೆ ತರಕಾರಿ ಬೆಳೆಯುತ್ತಾರೆ. ಇವತ್ತು ಭೂಮಿಯನ್ನು ಮಾರಾಟ ಮಾಡಬಹುದು ಅದಕ್ಕೆ ಯಾವುದೇ ನಿರ್ಬಂಧ ಇಲ್ಲ ಎನ್ನುವ ಪ್ರಶ್ನೆ ಬಂದಾಗ ಆ ಸಣ್ಣ ಸಣ್ಣ ಹಿಡುವಳಿ ಎಲ್ಲಾ ಹೋಗುತ್ತದೆ. ಕರಾವಳಿ ಪ್ರದೇಶದಲ್ಲೂ ಕೂಡ ದೊಡ್ಡ ಹಿಡುವಳಿದಾರರು ಇಲ್ಲ ಸಣ್ಣ ಹಿಡುವಳಿದಾರರೇ ಇರತಕ್ಕಂಥಾದ್ದು. ಈ ಸಣ್ಣ ಹಿಡುವಳಿದಾರರಿಗೆ ಭೂಮಿ ಕೊಳ್ಳುವಂತಹ ಪರಿಸ್ಥಿತಿ ಬಂದರೆ ಇಡೀ ಕೃಷಿ ಯೋಗ್ಯವಾದ ಭೂಮಿ ಈ ಉದ್ದೇಶಕ್ಕೆ ಹೋದಾಗ ಕೃಷಿ ಉತ್ಪನ್ನ ಅದರಲ್ಲೂ ಮುಖ್ಯವಾಗಿ ಆಹಾರ ಸಾಮಗ್ರಿಗಳ ಉತ್ಪಾದನೆ ತೀವ್ರ ರೀತಿಯಲ್ಲಿ ಕಡಿತವಾಗುತ್ತದೆ. ಈಗ 8ನೇ ಯೋನಜೆಯ ಕೊನೇ ಭಾಗದಲ್ಲಿ ನಾವು ಆಹಾರ ಉತ್ಪಾದನೆಯಾಗಬೇಕಾಗಿದೆ. ಆದರೆ ಅದನ್ನು 65ಕ್ಕೆ ಇಳಿಸಬೇಕಾಗಿ ಬಂತು ಹೆಚ್ಚು ಉತ್ಪಾದನೆಯಾಗಲಿಲ್ಲ. ಇನ್ನು 2000 ವರ್ಷ ದಾಟಿದರೆ ಈಗಿನ ಲೆಕ್ಕದ ಪ್ರಕಾರ ಕರ್ನಾಟಕ ರಾಜ್ಯದ ಜನರಿಗೆ 2 ಹೊತ್ತು ಊಟ ಒದಗಿಸಬೇಕಾದರೆ 1,60,0000 ಟನ್ ಆಹಾರ ಉತ್ಪಾದನೆಯಾದರೆ ಸಂದರ್ಭದಲ್ಲಿ ಭೂ ಪರಿಮಿತಿ ಕಾಯಿದೆಯನ್ನು ತಿದ್ದುಪಡಿ ಮಾಡಿದರೆ ಕೃಷಿ ಉತ್ಪನ್ನಗಳು ಅದರಲ್ಲೂ ಮುಖ್ಯವಾಗಿ ಆಹಾರ ಸಾಮಗ್ರಿಗಳ ಉತ್ಪಾದನೆ ಕಡಿಮೆಯಾಗುತ್ತವೆ. ಉದಾಹರಣೆಗೆ ನಾನು ಸೋಮಾಲಿಯಾವನ್ನು ಕೊಡುತ್ತೇನೆ.ಸೋಮಾಲಿಯದಲ್ಲಿ ಇಡೀ ಬಹುರಾಷ್ಟ್ರೀಯ ಸಂಸ್ಥೆಗಳು ಬಂದು ಆ ಬಹುರಾಷ್ಟ್ರೀಯ ಸಂಸ್ಥೆಗಳು ತಮಗೆ ಬೇಕಾಗಿರತಕ್ಕಂತಹ ಕೃಷಿಯಲ್ಲಿ ಉತ್ಪಾದನೆ ಮಾಡಿದವು. ಉದಾಹರಣೆಗೆ ಹೇಳುವುದಾದರೆ ಸೋಮಾಲಿಯದಲ್ಲಿ ಇವತ್ತು ಬರೀ ಸಕ್ಕರೆ ಕಾರ್ಖಾನೆಗಳೇ ಇವೆ. ಆಹಾರ ಸಾಮಗ್ರಿಗಳ ಉತ್ಪಾದನೆ ಇಲ್ಲ. ಅಲ್ಲಿ ಸಿವಿಲ್ ವಾರ್ ಪ್ರಾರಂಭವಾಯಿತು. ಯು.ಎನ್. ಓ. ದವರು ಮತ್ತು ಬೇರೆ ಬೇರೆ ದೇಶದವರು ವಿಮಾನಗಳಲ್ಲಿ ಹೋಗಿ ಸೋಮಾಲಿಯದಲ್ಲಿ ಆಹಾರ ಪೊಟ್ಟಣಗಳಳನ್ನು ಹಾಕತಕ್ಕಂತಹ ಪರಿಸ್ಥಿತಿ ಬಂದಿರುತಕ್ಕಂಥಾದ್ದು ನಮ್ಮ ಕಣ್ಣ ಮುಂದೆ ಎದುರಗಡೆ ಉದಾಹರಣೆ ಇದೆ. ನಮ್ಮ ಕರ್ನಾಟಕ ಸೋಮಾಲಿಯಾ ಆಗಲಿಕ್ಕೆ ಬಿಡಬೇಕೇ ಇವತ್ತು. ಆಹಾರ ಉತ್ಪಾದನೆ ಕಡಿಮೆಯಾದರೆ ಸಂಪೂರ್ಣವಾಗಿ ನಾವು ನಮ್ಮ ಜನರಲ್ಲಿ ಹಾಹಾಕಾರ ಬೆಳೆಸುವುದಕ್ಕೆ ಅದು ಸಾಧ್ಯವಾಗುತ್ತದೆ. ಕಾರ್ಖಾನೆಗಳನ್ನು ಮತ್ತು ಮನೆಗಳನ್ನು ಕಟ್ಟಲಿಕ್ಕೆ ಭೂಮಿ ಎಲ್ಲಿಂದ ತರುವುದೆಂದು ಮಾನ್ಯ ಕಂದಾಯ ಮಂತ್ರಿಗಳು ಹೇಳಿದರು. ಫ್ಯಾಕ್ಟರಿಯಲ್ಲಿ ಸರಕನ್ನು ಉತ್ಪಾದನೆ

ಮಾಡಿದ ಹಾಗೆ ಭೂಮಿಯನ್ನು ಉತ್ಪಾದನೆ ಮಾಡಲಿಕ್ಕಾಗುವುದಿಲ್ಲ. ಇರತಕ್ಕಂತಹ ಭೂಮಿಯನ್ನು ನಾವು ಎಲ್ಲಾದಕ್ಕೂ ಉಪಯೋಗಿಸಬೇಕಾಗುತ್ತದೆ. ಎಲ್ಲಿ ಕಾರ್ಖಾನೆಗಳನ್ನು ಪ್ರಾರಂಭ ಮಾಡಬೇಕೆಂಬ ಉದ್ದೇಶವಿದೆಯೋ ಅದೇನೂ ಕೆಟ್ಟದ್ದಲ್ಲ. ನಿಮ್ಮ ಕೈಯ್ಯಲ್ಲಿ ಈಗಾಗಲೇ ಭೂಸ್ವಾಧೀನ ಮಾಡಿಕೊಳ್ಳಿ. ಅದಕ್ಕೆ ಆ ಭೂಮಿಯನ್ನು ಸ್ವಾಧೀನ ಮಾಡಿಕೊಂಡಾಗ ರೈತರು ಭೂಮಿ ಕಳೆದುಕೊಳ್ಳುವುದಿಲ್ಲವೇ ಎನ್ನತಕ್ಕ ಪ್ರಶ್ನೆ ಇದು. ಆದರೆ ಎಲ್ಲಾ ಕಡೆ ಕಾರ್ಖಾನೆಗಳಾಗುವುದಿಲ್ಲ. ಕೆಲವು ನಿರ್ದಿಷ್ಟವಾದ ಪ್ರದೇಶದಲ್ಲಿ ಕಾರ್ಖಾನೆಗಳಾಗುತ್ತವೆ. ಆ ನಿರ್ದಿಷ್ಟವಾದ ಪ್ರದೇಶದಲ್ಲಿ ನೀವು ಭೂಮಿಯನ್ನು ಸ್ವಾಧೀನ ಪಡಿಸಿಕೊಂಡಾಗ ಅದಕ್ಕೆ ಹೆಚ್ಚಿನ ಬೆಲೆಯನ್ನು ಕೊಡಿ. ಆಕ್ಷಯನ್ನು ಅಮೆಂಡಮೆಂಟ್ ಮಾಡಿ. ಕೈಗಾರಿಕೆಯನ್ನು ಸ್ಥಾಪನೆ ಮಾಡುವ ಜನರು ಆ ಹಣವನ್ನು ಕೊಡುವ ರೀತಿಯಲ್ಲಿ ಮಾಡಬೇಕು. ಸರಕಾರ ಹಣ ಕೊಡತಕ್ಕಂಥಾದ್ದು ಅಲ್ಲ. ಯಾರು ಕೈಗಾರಿಕೆ ಸ್ಥಾಪನೆ ಮಾಡಲಿಕ್ಕೆ ಬರುತ್ತಾರೋ ಅವರು ಆ ಭೂಮಿಗೆ ಹಣ ಕೊಡಲಿ. ಆ ರೇಟ್ ಆ ಪ್ರದೇಶಕ್ಕೆ ಹೊಂದಿಕೊಂಡಂತೆ ನೀವು ನಿಗದಿ ಮಾಡಿ. ಆಗ ಆ ಕೈಗಾರಿಕಾ ಉದ್ದೇಶಕ್ಕೆ ಭೂಮಿ ಸಿಗುತ್ತದೆ.

ಭೂಮಿ ಕಳೆದುಕೊಂಡಂಥವನಿಗೆ ಹೆಚ್ಚು ಹಣ ಬರುವ ರೀತಿಯಲ್ಲಿ ಅಮೆಂಡಮೆಂಟ್ ಮಾಡಿ. ಏಕೆಂದರೆ ಕರ್ನಾಟಕರಾಜ್ಯದ ಪ್ರತಿಯೊಂದು ತಾಲ್ಲೂಕಿನಲ್ಲೂ ಪ್ರತಿಯೊಂದು ಜಿಲ್ಲೆಯಲ್ಲೂ ನೀವು ಕೈಗಾರಿಕೆಗಳನ್ನು ಮಾಡುವುದಿಲ್ಲ. ಕೈಗಾರಿಕೆಗಳಿಗೆ ನಿರ್ದಿಷ್ಟ ಪ್ರದೇಶಬೇಕು. ಎಲ್ಲಾ ಕಡೆ ಕೈಗಾರಿಕೆಗಳನ್ನು ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಕೈಗಾರಿಕೆಗಳಿಗೆ ಭೂಮಿ ಬೇಕು ಎಂದು ಹೇಳಿ ಇಡೀ ಕರ್ನಾಟಕ ರಾಜ್ಯದಲ್ಲಿರುವ ಭೂಸುಧಾರಣಾ ಕಾಯ್ದೆಯನ್ನು ತಿದ್ದುಪಡಿ ಮಾಡುವುದರ ಬದಲು ನೀವು ಲ್ಯಾಂಡ್ ಆಕ್ವಿಸಿಷನ್ ಆಕ್ಟನ್ನು ಮೋರ್ ಎಫಕ್ಟೀವ್ ಮಾಡಿ ನಿರ್ದಿಷ್ಟ ಪ್ರದೇಶದಲ್ಲಿ ಕಾರ್ಖಾನೆಗಳಿಗೆ ಬೇಕಾಗಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬಹುದು. ಅದೇ ರೀತಿಯಲ್ಲಿ ಆಕ್ವಾಕಲ್ಚರ್, ಹಾರ್ಟಿಕಲ್ಚರ್ ಎಂದು ಹೇಳುತ್ತಾರೆ. ಹಾರ್ಟಿಕಲ್ಚರ್ ಎಲ್ಲಾ ಪ್ರದೇಶದಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ಆಕ್ವಾಕಲ್ಚರ್ ಎಲ್ಲಾ ಪ್ರದೇಶದಲ್ಲೂ ಮಾಡುವುದಕ್ಕಾಗುವುದಿಲ್ಲ. ನೀರಾವರಿ ಸಮಸ್ಯೆ ಇದೆ ನಮಗೆ. ನಿಮ್ಮ ರಾಜ್ಯಪಾಲರ ಭಾಷಣದಲ್ಲೇ ನೀವು ಒಂದು ಕಡೆ ಇಸ್ರೇಲ್ ತಂತ್ರಜ್ಞಾನವನ್ನು ನಾವು ಅಳವಡಿಸಬೇಕು ಎಂದು ಹೇಳಿದ್ದೀರಿ. ಇಸ್ರೇಲ್ ಭೌಗೋಳಿಕ ಪರಿಸ್ಥಿತಿ, ಕರ್ನಾಟಕದ ಭೌಗೋಳಿಕ ಪರಿಸ್ಥಿತಿ ವಿಭಿನ್ನವಾಗಿದೆ. ಇಸ್ರೇಲ್ ನಲ್ಲಿರುವ ರೀತಿಯಲ್ಲಿ ಕಾಫಿ ಹೊಡೆಯುವುದಕ್ಕೆ ಸಾಧ್ಯವಿಲ್ಲ. ಕೆಲವು ಕಡೆ ಹೆಚ್ಚು ನೀರು ಲಭ್ಯ ಇರುವ ಪ್ರದೇಶಗಳು ಇವೆ, ಕೆಲವು ಕಡೆ ಕಡಿಮೆ ನೀರು ಸಿಗುವ ಪ್ರದೇಶಗಳು ಇವೆ. ಎಲ್ಲಾ ಕಡೆ ಒಂದೇ ರೀತಿಯಾಗಿ ಯೂನಿಫಾರಂ ಆಗಿ ಮಾಡುವುದಕ್ಕಾಗುವುದಿಲ್ಲ. ಅಂಥಹ ಹಾರ್ಟಿಕಲ್ಚರನ್ನು ಎಲ್ಲಿ ಮಾಡಬೇಕು ಎಂಬುದನ್ನು ನಿರ್ಧರಿಸಬೇಕು ಮತ್ತು ಎಲ್ಲಿ ಅವಕಾಶ ಇದೆ. ಅಲ್ಲಿ ಅಂಥಹ ಸಂದರ್ಭದಲ್ಲಿ ಕೂಡ ಲ್ಯಾಂಡ್ ಆಕ್ವಿಸಿಷನ್ ಆಕ್ಟನ್ನು ಕೂಡ ಉಪಯೋಗ ಮಾಡಿ ಆ ಪ್ರದೇಶಗಳಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬಹುದು. ಇದರಿಂದ ಮುಖ್ಯವಾದ ಅಂಶವೇನು? ಲ್ಯಾಂಡ್ ರಿಫಾರ್ಮ್ಸ ಬಿಲ್ಲಿನ ಹಿಂದೆ ಇದ್ದಂತ ಉದ್ದೇಶ ಸಾಮಾಜಿಕ ನ್ಯಾಯ. ಸೋಷಿಯಲ್ ಜಸ್ಟೀಸ್ ಬಗ್ಗೆ ಇವತ್ತೂ ನೀವು ಹೇಳುತ್ತಿದ್ದೀರಿ. ಸೋಷಿಯಲ್ ಜಸ್ಟೀಸ್‌ಗೆ ನಮ್ಮ ಸರ್ಕಾರ ಬದ್ಧವಾಗಿದ್ದೇವೆ ನಾವು ಎಂದು ಹೇಳಿ. ಭೂ

ಸಂಬಂಧಗಳ ಬದಲಾವಣೆಯಾದ ಮೇಲೆ ಹಳ್ಳಿಗಾಡಿನ ಪ್ರದೇಶದಲ್ಲಿ ಸಾಮಾಜಿಕ ನ್ಯಾಯದ ಪ್ರಶ್ನೆ ಬರುವುದಿಲ್ಲ. ಏಕೆಂದರೆ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ, ಬಲಹೀನ ವರ್ಗಗಳು, ಹಿಂದುಳಿದವರ ಕೈಯಲ್ಲಿ ನಾಲ್ಕು ಎಕರೆ, ಮೂರು ಎಕರೆ ಭೂಮಿ ಇದ್ದರೆ ಆತನಿಗೆ ಮನಸ್ಥೈರ್ಯ ಬರುತ್ತದೆ. ನನಗೇನೂ ಒಂದು ಆಸ್ತಿ ಇದೆ. ಅದರ ಮೇಲೆ ಜೀವನ ಮಾಡಬಹುದು, ನಾನು ಬದುಕಬಹುದು ಎಂದು ಹೇಳಿ. ಇವತ್ತು ನೀವು ಮಾರಾಟ ಮಾಡಿ ದುಡ್ಡು ತೆಗೆದುಕೊಳ್ಳಿ ಎನ್ನುತ್ತೀರಿ.

ಅವರು ಮಾರಾಟ ಮಾಡಿ ದುಡ್ಡು ತೆಗೆದುಕೊಂಡರೆ ಆ ದುಡ್ಡಿನಿಂದ ಇವತ್ತು ಬದುಕುವುದಕ್ಕೆ ಸಾಧ್ಯವಿಲ್ಲ. ಇದರ ಉದಾಹರಣೆಯನ್ನು ನಾವು ಇವತ್ತು ನೋಡುತ್ತಿದ್ದೇವೆ. ಬೆಂಗಳೂರಿನ ಸುತ್ತಮುತ್ತ ಆಗಬಹುದು, ಮದ್ರಾಸಿನ ಸುತ್ತಮುತ್ತ ಆಗಬಹುದು, ಅಥವಾ ಕಲ್ಕತ್ತಾದ ಉದಾಹರಣೆಯನ್ನು ನಾವು ಇವತ್ತು ತೆಗೆದುಕೊಳ್ಳುವುದಾದರೆ ಅಲ್ಲಿ ಭೂಮಿ ಕಳೆದುಕೊಂಡಿರುವ ಜನರಿಗೆ ಫ್ಯಾಕ್ಟರಿಗಳಲ್ಲಿ ಕೆಲಸ ಕೊಡಲಿಲ್ಲ. ಇವತ್ತು ಈ ಸರ್ಕಾರವೂ ಹೇಳುತ್ತಿದೆ. ಫ್ಯಾಕ್ಟರಿಗಳು ಪ್ರಾರಂಭವಾದರೆ ಯುವಕರಿಗೆ ಕಾರ್ಖಾನೆಯನ್ನು ಪ್ರಾರಂಭ ಮಾಡುವಾಗ ಯಾವುದೇ ಕಾರ್ಖಾನೆಯ ಮಾಲೀಕನೂ ಕೂಡ ನಿರ್ದಿಷ್ಟವಾಗಿ ನಾನು ಇಂತಿಷ್ಟು ಜನಕ್ಕೆ ಕೆಲಸ ಕೊಡುತ್ತೇನೆ, ಇಂಥವರಿಗೆ ಕೆಲಸ ಕೊಡುತ್ತೇನೆ ಎಂದು ಹೇಳುವುದಕ್ಕಾಗುವುದಿಲ್ಲ. ಅವರದೇ ಆದ ಕೆಲವು ಕಾನೂನುಗಳಿರುತ್ತವೆ. ಆ ಕಾನೂನುಗಳ ವ್ಯಾಪ್ತಿಗೊಳಪಟ್ಟೇ ಆತನು ಉದ್ಯೋಗ ಅವಕಾಶಗಳನ್ನು ಸೃಷ್ಟಿಸಬೇಕಾಗುತ್ತದೆ ನಮ್ಮ ಒಪ್ಪಂದದ ಪ್ರಕಾರ ಆತನು ಉದ್ಯೋಗಗಳನ್ನು ಕೊಡಲಿಕ್ಕೆ ಸಾಧ್ಯವಿಲ್ಲ. ಅದು ಅಪ್ರಸ್ತುತ ಆಗುತ್ತದೆ, ಇಂಪ್ರಾಕ್ಟಿಕಲ್ ಆಗುತ್ತದೆ. ಆದ್ದರಿಂದ ನಿರುದ್ಯೋಗ ಸಮಸ್ಯೆಗೆ ಸಹಾಯವಾಗುತ್ತದೆ ಎನ್ನುವ ಪ್ರಶ್ನೆ ಕೂಡ ಇಲ್ಲಿ ಬರುವುದಕ್ಕೆ ಖಂಡಿತಾ ಸಾಧ್ಯವಿಲ್ಲ. ಆದ್ದರಿಂದ, ಭೂಸುಧಾರಣಾ ಕಾನೂನನ್ನು ಇವತ್ತು ಮೆಕ್ಯಾನಿಕಲ್ ಆಗಿ ನೋಡುವುದಿಲ್ಲ, ಯಾಂತ್ರಿಕವಾಗಿ ಅದನ್ನು ನೋಡುವುದಿಲ್ಲ. ಇಡೀ ಸಮಾಜದ ಒಟ್ಟು ದೃಷ್ಟಿಯಲ್ಲಿ ಸಮಗ್ರ ದೃಷ್ಟಿಯಲ್ಲಿ ಅದನ್ನು ನೋಡಬೇಕಾಗುತ್ತದೆ. ಒಂದು ಕಡೆ ಆರ್ಥಿಕ ಉತ್ಪಾದನೆ, ಇನ್ನೊಂದು ಕಡೆ ಸಾಮಾಜಿಕ ನ್ಯಾಯ, ಇನ್ನೊಂದು ಕಡೆ ಆಂತರಿಕ ಮಾರುಕಟ್ಟೆ, ಇನ್ನೊಂದು ಕಡೆ ನಿರುದ್ಯೋಗ ಸಮಸ್ಯೆ, ನೀರಾವರಿ ಇವೆಲ್ಲವನ್ನೂ ಒಟ್ಟು ದೃಷ್ಟಿಯಲ್ಲಿ ನೋಡಿದರೆ ಮಾತ್ರ ಭೂಸುಧಾರಣಾ ಕಾಯ್ದೆಗೆ ಇರುವ ಪ್ರಾಮುಖ್ಯತೆ ಅರ್ಥವಾಗುತ್ತದೆಯೇ ಹೊರತು ಕೇವಲ ಯಾಂತ್ರಿಕವಾಗಿ ನಮಗೆ ಫ್ಯಾಕ್ಟರಿಗಳಿಗೆ ಭೂಮಿ ಬೇಕು, ನಮಗೆ ಹಾರ್ಟಿಕಲ್ಚರ್‌ಗೆ ಭೂಮಿ ಬೇಕು, ನಾವು ಎಲ್ಲಿಂದ ಭೂಮಿಯನ್ನು ತರುವುದು, ಆದುದರಿಂದ ಲ್ಯಾಂಡ್ ರಿಫಾರ್ಮ್ಸ್ ಬಿಲ್ಲನ್ನು ನಾವು ಇವತ್ತು ತರುತ್ತೇವೆ ಎನ್ನುವುದು ಸರಿಯಲ್ಲ. ಈ ಭೂಸುಧಾರಣಾ ಕಾನೂನು ತಿದ್ದುಪಡಿ ಇವತ್ತು ಕೃಷಿರಂಗಕ್ಕೆ ಸಂಪೂರ್ಣವಾಗಿ ಹೊಡೆತ ಆಗುತ್ತದೆ. ಕೃಷಿ ಉತ್ಪಾದನೆ ಕಡಿಮೆಯಾಗುತ್ತದೆ. ಭೂಮಿ ಕಳೆದುಕೊಳ್ಳತಕ್ಕಂಥವರು ಹೆಚ್ಚು ಜನರು ಸಣ್ಣ ರೈತರೇ. ಮಧ್ಯಮ ವರ್ಗದ ರೈತರೇ ಭೂಮಿ ಕಳೆದುಕೊಳ್ಳುವವರು. ಆದ್ದರಿಂದ ಇಡೀ ಭೂಮಿಯ ಮೇಲೆ ಇರುವ ಆ ಸಣ್ಣ ಮತ್ತು ಮಧ್ಯಮವರ್ಗದ ಜನರ ಹಿಡಿತ ಹೋಗುತ್ತದೆ. ಇಡೀ ಕೃಷಿ ಉತ್ಪಾದನೆ ನಾಶವಾಗುತ್ತದೆ. ಆದ್ದರಿಂದ ನಾನು ಸ್ಪಷ್ಟವಾಗಿ ಈ ಭೂಸುಧಾರಣಾ ಕಾನೂನು ತಿದ್ದುಪಡಿಯನ್ನು ವಿರೋಧ ಮಾಡುತ್ತಿದ್ದೇನೆ. ಇದು ಯಾವುದೇ ಕಾರಣದಿಂದ ಜಾರಿಗೆ ಬರಬಾರದು ಎಂದು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

+ಶ್ರೀ ಎಸ್. ಬಂಗಾರಪ್ಪ (ಸೊರಬ) : ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ಭೂಸುಧಾರಣೆ ತಿದ್ದುಪಡಿ ವಿಧೇಯಕವನ್ನು ವಿರೋಧಿಸಿ ಮಾತನಾಡುವುದಕ್ಕೆ ನಾನು ನಿಂತಿದ್ದೇನೆ. ರಾಜ್ಯ, ರಾಷ್ಟ್ರದಲ್ಲಿ ಕರ್ನಾಟಕದೆ ಭೂಮಿಯನ್ನು ಒಳಗೊಂಡಂತೆ ಸುಧಾರಣೆ ಮಾಡಬೇಕು ಎನ್ನತಕ್ಕಂಥದ್ದು. ಇದರ ಹೆಸರೇ ಸುಧಾರಣೆ. ಇವತ್ತು ಉಳುವವನೇ ಹೊಲದೊಡೆಯನಾಗಬೇಕು or in English, the Tiller should become the onwer of the land. That was the slogan before all these things were thought of and were brought well within the legal framework through legislative measures. ನನಗೆ ನೆನಪಿರುವ ಹಾಗೆ ಕರಾಚಿ ಕಾಂಗ್ರೆಸ್ ಅಧಿವೇಶನದಲ್ಲಿ ಪೂಜ್ಯ ಮಹಾತ್ಮಗಾಂಧಿಯವರ ಕಾಲದಲ್ಲಿ ನಿರ್ಣಯ ಮಾಡಿ ಆಗಿನ ಆಂಗ್ಲರ ಆಳ್ವಿಕೆಯ ಪದ್ಧತಿಯಲ್ಲಿ ಭೂಮಿ ಮಾಲೀಕ ವರ್ಗ ಅದು ಸಂಪೂರ್ಣವಾಗಿ ಆಗಿನ ಸರ್ಕಾರದ ಕೃಪಾಪೋಷಣೆಯಲ್ಲಿದ್ದುದರಿಂದ ಸಹಜವಾಗಿ ಭೂಮಿಯನ್ನು ಉಳುಮೆ ಮಾಡುವ ವರ್ಗದ ಜನರು ಅವರಾಗಿರಲಿಲ್ಲ. ಮಾಡತಕ್ಕಂಥವರು ಉಳುಮೆ ಮಾಡಿ ಹಲವಾರು ವಿಧವಾಗಿರುವ ಬೆಳೆಗಳು ಇವುಗಳನ್ನು ಎಲ್ಲಾ ಬೆಳೆಯುವ ವರ್ಗದ ಜನರು, ಹೆಚ್ಚಾಗಿ ಕಡು ಬಡವರು, ಸಮಾಜದಲ್ಲಿ ಕೆಳ ಮಟ್ಟದಲ್ಲಿರತಕ್ಕಂಥವರು. ಅದರಲ್ಲೂ ಕೂಡ ಸೋಷಿಯಲ್ ಹೈರಾರ್ಕಿ ಕೆಳಮಟ್ಟದಲ್ಲಿರುವ ಈ ವರ್ಗಕ್ಕೆ ಸೇರಿರುವ ಜನ ಅವರು ಯಾವಾಗಲೂ ಇನ್ನೊಬ್ಬರ ಒಡೆತನಕ್ಕೆ ಸೇರಿರುವ ಭೂಮಿಯಲ್ಲಿ ಊಳಿಗದ ಆಳಾಗಿ ಗೇಣಿದಾರರು ಎನ್ನುವ ಹೆಸರನ್ನು ಪಡೆದು ಸಾಗುವಳಿ ಮಾಡುತ್ತಿದ್ದರು. ಗೇಣಿ ಎನ್ನತಕ್ಕಂಥ ಮಾತಿನ ಅರ್ಥ ಹಣ ಅಥವಾ ಕಾಳು ರೂಪದಲ್ಲಿರುವ ವ್ಯವಸ್ಥೆಯೂ ಕೂಡ ಆಗಿನ ಕಾಲದಲ್ಲಿದ್ದರೂ ಕೂಡ ಹೆಚ್ಚಾಗಿ ಕಾಳಿನ ರೂಪದಲ್ಲಿ ಪಾವತಿಯಾಗತಕ್ಕಂಥ ಪದ್ಧತಿ ಕೂಡ ಬೃಹದಾಕರವಾಗಿ ಇತ್ತು. ಇದೊಂದು ಹಿನ್ನೆಲೆ. ನಾನು ವಿವರವಾಗಿರುವ ಚರ್ಚೆಗೆ ಹೋಗುವ ಅವಶ್ಯಕತೆ ಇದೆ ಎಂದು ಭಾವಿಸಿಲ್ಲ. ಭೂಸುಧಾರಣಾ ಕಾಯ್ದೆ, ಕಾಯ್ದೆಗೆ ಸಂಬಂಧಪಟ್ಟಂತೆ ಅಥವಾ ವಿಚಾರಕ್ಕೆ ಸಂಬಂಧಪಟ್ಟಂತೆ ಈ ರಾಷ್ಟ್ರದಲ್ಲಿರುವ ಎಲ್ಲಾ ರಾಜಕೀಯ ಪಕ್ಷಗಳು ಕೂಡ ಒಂದೇ ರೀತಿಯ ವಿಚಾರವನ್ನು ಎತ್ತಿದ್ದಾರೆ ಎಂದು ನಾನು ಭಾವಿಸಿಲ್ಲ. ಆ ಕಾಲವೇ ಇರಬಹುದು ಅಥವಾ ಈ ಕಾಲವೇ ಇರಬಹುದು. ವ್ಯತ್ಯಾಸದೊಂದಿಗೆ ಸುಧಾರಣೆ ತರುವ ಪ್ರಯತ್ನ ಕೂಡ ಮಾಡಿದರು. ನಮ್ಮರಾಜ್ಯವನ್ನೇ ತೆಗೆದುಕೊಳ್ಳೋಣ ಉದಾಹರಣೆಗೆ, 1966 ಎಂದು ಕಾಣುತ್ತದೆ. ಕರ್ನಾಟಕ ಭೂಸುಧಾರಣಾ ಕಾಯ್ದೆ, ಈಗ ನಾವು ತಿದ್ದುಪಡಿ ತರುವುದೇ ಅದೇ ಕಾಯ್ದೆಗೆ 1961ರ ಆಕ್ಟ ಅದು, ಜಾರಿ ಕೊಟ್ಟಿರುವುದು 1966 ನನಗೆ ಗೊತ್ತಿರುವ ಹಾಗೆ. ಕಡಿದಾಳ್ ಮಂಜಪ್ಪನವರನ್ನು ನಾವು ಆ ಕಾಲದಲ್ಲಿ ನೆನೆಸಿಕೊಳ್ಳಿಬೇಕು. ಅವರು He was the Minister incharge including Land Reforms. ಆ ಕಾಲದಲ್ಲಿ ಗೇಣಿದಾರರನ್ನು ಬಿಡಿಸಿಬಿಡುತ್ತಾರೆ ಎನ್ನುವುದಕ್ಕೋಸ್ಕರವೇ Tenancy Protection Act 1961 came into force. ನನಗೆ ಅದೆಲ್ಲಾ ನೆನಪು. ನಾವೆಲ್ಲಾ ಶಾಸನಸಭಾ ಸದಸ್ಯರಾಗಿ ಆಯ್ಕೆಯಾಗಿ ಬರುವುದಕ್ಕೆ ನಮ್ಮ ಶಿವಮೊಗ್ಗ ಜಿಲ್ಲೆಯೂ ಕೂಡ ಒಂದು ಕಾರಣ. ಕಾಗೋಡು ಸತ್ಯಾಗ್ರಹ. ತಿಮ್ಮಪ್ಪನವರ ಊರು ಅದು. ಸತ್ಯಾಗ್ರಹ ನಡೆಯಿತು. ಉಳುವವನೇ ಹೊಲದ ಒಡೆಯ ಆಗಬೇಕು ಎನ್ನುವ ವಿಚಾರ ಪ್ರಸ್ತಾಪಕ್ಕೆ ಅನಂತರ ಬಂದರೂ ಕೂಡ ಗೇಣಿ ಕೊಡುವ ಪದ್ಧತಿ ಪ್ರಮಾಣದ ಬಗ್ಗೆ ಗಲಾಟೆ ಶುರುವಾಗಿದ್ದು ಭೂ

ಸುಧಾರಣಾ ಕಾನೂನು ಅತೀ ಶೀಘ್ರವಾಗಿ ಜಾರಿಗೆ ಬರುವುದಕ್ಕೆ ಅದೂ ಕೂಡ ಒಂದು ಕಾರಣವಾಯಿತು ಕರ್ನಾಟಕ ರಾಜ್ಯದಲ್ಲಿ ತಮಗೆ ಗೊತ್ತಿರುವ ಹಾಗೆ ಇದು ಚರಿತ್ರೆಯ ವಿಚಾರಗಳು. ಆ ಕಾಲದಲ್ಲಿ ಡಾ॥ ರಾಮಮನೋಹರ ಲೋಹಿಯಾರವರು, ಜಯಪ್ರಕಾಶ್ ನಾರಾಯಣ್‌ರವರು ಲಕ್ಷಾಂತರ ಜನರ ಜೊತೆಗೂಡಿ ಭೂಮಿಯನ್ನು ಉಳುಮೆ ಮಾಡುವ ಗೇಣಿದಾರ ಎನಿಸಿಕೊಳ್ಳುವ ವರ್ಗದ ಪರವಾಗಿ ಹೋರಾಟವನ್ನು ನಡೆಸಿ ಜನರು ಜೈಲಿಗೆ ಹೋದರು. ಅದಕ್ಕೆ ಮುಂದಾಳತ್ವವನ್ನು ಜೈಲಿನ ಹೊರಗಡೆಗೆ ಮತ್ತು ಜೈಲಿನ ಒಳಗಡೆಗೂ ಕೂಡ ಮುಂದಾಳತ್ವವನ್ನು ಇವರೆಲ್ಲಾ ಕೊಟ್ಟರು. ಅರೆಸ್ಟ್ ಆದರು. ಕೋರ್ಟಿಗೆ ಹೋಗಿ ಅಪರಾಧಿ ಸ್ಥಾನದಲ್ಲಿ ನಿಂತರು. ಇವೆಲ್ಲವನ್ನೂ ನಾವು ನೋಡುವುದಕ್ಕೆ ಆ ಕಾಲದಲ್ಲಿ ಹೈಸ್ಕೂಲ್ ಅಥವಾ ಮಿಡ್ಲಸ್ಕೂಲಿನ ವಿದ್ಯಾರ್ಥಿಗಳು ನಾವು. ಅಷ್ಟೊಂದು ಅರ್ಥವಾಗದೇ ಇರುವ ಸಂದರ್ಭಗಳು ಇವು. ಇದರ ಅರ್ಥವೇನೆಂದರೆ ಉಳುವವನೇ ಹೊಲದೊಡೆಯನಾಗಬೇಕು or the Tiller should become owner of the land which he is cultivating. ಬಗ್ಗೆ ಪೂಜ್ಯ ಮಹಾತ್ಮಗಾಂಧಿಯವರ ಕಾಲದಲ್ಲಿ ವಿಚಾರ ಮಾಡಿದ್ದಾರೆ. ಆಂಗ್ಲರ ಆಳ್ವಿಕೆಯ ಕಾಲದಲ್ಲಿ ಇದ್ದಂಥ ಪದ್ಧತಿಯನ್ನು ನಿರ್ಮೂಲನ ಮಾಡಬೇಕು.

3.40 ಪಿ.ಎಂ.

ಇದು ಬರೀ ಒಬ್ಬ ವ್ಯಕ್ತಿಯಿಂದ ಭೂಮಿಯನ್ನು ಖಾತೆ ತೆಗೆದು ಓನರಶಿಪ್ ತೆಗೆದು ಮತ್ತೊಬ್ಬರಿಗೆ ಕೊಡತಕ್ಕ ಉದ್ದೇಶ ಅಲ್ಲ. Landlord of that particular piece of land ಎನ್ನತಕ್ಕ ಮಾತನ್ನು ನಾವು ಏನು ಕಡೆಯುತ್ತೇವೆ, ಅವನು ಎಲ್ಲೋ ಇರುತ್ತಾನೆ. ಆ ಗ್ರಾಮದಲ್ಲಿದ್ದ ಪಕ್ಕದ ಹಳ್ಳಿಯಲ್ಲಿ ಅವನು ಗೇಣಿದಾರನಾಗಿದ್ದರೆ ಭೂ ಮಾಲೀಕ He can absent himself from that particular area where he is owning that land cultivated by someone else ಅವನು ಎಲ್ಲೋ ಇರಬಹುದು. in the name of the tenant ಏನು ಎಲ್ಲೋ ಇದ್ದು ನೌಕರಿ ಮಾಡಬಹುದು, ಬಿಸಿನೆಸ್ ಮಾಡಬಹುದು. ಮತ್ತೊಂದು ಏನಾದರೂ ಕೂಡ ಮಾಡಿಕೊಂಡು ಹೋಗಿರತಕ್ಕ ಪದ್ಧತಿ. ಇದು ಆಂಗ್ಲರ ಆಳ್ವಿಕೆಯ ಕಾಲದಲ್ಲಿ ಬೆಂಬಲವನ್ನು ಪಡೆದಿರತಕ್ಕ ಪದ್ಧತಿ. ಜಮೀನುದಾರರ ಬೆಂಬಲ ಆಗಿನ ಆಂಗ್ಲರ ಸರ್ಕಾರಕ್ಕೆ ಬೇಕಾಗಿತ್ತು. ಅದಕ್ಕಾಗಿ ಅವರು ಸಂಪೂರ್ಣವಾದ ಬೆಂಬಲವನ್ನು ಕೊಟ್ಟರು. ಗೇಣಿದಾರರ ಪದ್ಧತಿಗೆ ಬೇಕಾದಷ್ಟು ಬೆಂಬಲವನ್ನು ಆ ಕಾಲದಲ್ಲಿ ಕೊಟ್ಟರು. ನಾನು ಈ ಚರಿತ್ರೆಯನ್ನು ಹೇಳುವುದಕ್ಕೆ ಏನು ಕಾರಣ ಅಂದರೆ ಇವತ್ತು ಉಳುವವನೇ ಹೊಲದ ಒಡೆಯನಾಗಬೇಕು ಎನ್ನುವ ಸದುದ್ದೇಶ ಬರೀ ಕಾನೂನಿನಲ್ಲಿದ್ದರೆ ಸಾಲದು. ವಿಭಿನ್ನವಾಗಿರತಕ್ಕ ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ, ಪಕ್ಷಗಳ ಹೆಸರಿನಲ್ಲಿ, ಪಕ್ಷೇತರ ಹೆಸರಿನಲ್ಲಿ ನಾವಿದ್ದರೂ ಕೂಡ ಅಧಿಕಾರಕ್ಕೆ ಹೋದಾಗ ಅಮೂಲಾಗ್ರವಾಗಿ ಅಪಾದಮಸ್ತಕವಾಗಿ ಅಡಿಯಿಂದ ಮುಡಿಯವರೆಗೆ ಜಾರಿಗೆ ಕೊಡತಕ್ಕಂಥ ವ್ಯವಸ್ಥೆಯನ್ನು ತರಬೇಕು ಎನ್ನತಕ್ಕ ಮಧುರ ಹೃದಯ ಶ್ರೀಮಂತಿಕೆ ಅದರ ಬಗ್ಗೆ What we call the commitment at our command ಸಂಪೂರ್ಣವಾಗಿದ್ದರೆ ಮಾತ್ರ ಸಾಧ್ಯವಾಗುತ್ತದೆ. ಇಲ್ಲದೇ ಇದ್ದರೆ ಸಾಧ್ಯವಾಗುವುದಿಲ್ಲ. ಕರ್ನಾಟಕ ರಾಜ್ಯದಲ್ಲಿ ಸುಮಾರು ಏಳು ಲಕ್ಷ ಎಂಟು ಲಕ್ಷ ಎಂದು

ಕಾಣುತ್ತದೆ ಅರ್ಜಿಗಳು ಬಂದು ಬಿದ್ದವು ಆ ಕಾಲದಲ್ಲಿ 1.3.1974ರಲ್ಲಿ ನಾನು ದಿವಂಗತ ದೇವರಾಜ ಅರಸ್ ಅವರನ್ನು ನೆನಪಿಕೊಳ್ಳಬೇಕು. ನಿಜವಾಗಿಯೂ ಆ ಕಾಲದಲ್ಲಿ ದೊಡ್ಡ ಹೃದಯದ ವ್ಯಕ್ತಿ, ಅಜಾನುಬಾಹು. ಅಷ್ಟೇ ದೊಡ್ಡ ಹೃದಯ ಬಡ ವರ್ಗದ ಬಗ್ಗೆ. ಸಮಾಜದ ತುಳಿತಕ್ಕೆ ಸಿಕ್ಕಂತಹ ವರ್ಗಗಳಿಗೆ ಯಾವಾಗಲೂ ಸಹೃದಯ ಅಥವಾ ತಮ್ಮ ಕರುಳು ಮಿಡಿಯುತ್ತಿರತಕ್ಕ ಒಂದು ವಿಚಾರಧಾರೆ ಅವರಲ್ಲಿತ್ತು. ಸಂಪೂರ್ಣವಾದಂತಹ ಬೆಂಬಲವನ್ನು ಆಗಿನ ಕಾಲದಲ್ಲಿ ಶ್ರೀಮತಿ ಇಂದಿರಾಗಾಂಧಿಜಿಯವರಿಗೆ ಕೂಡ ಬೆಂಬಲ ಕೊಟ್ಟರು. ಇದು ಒಂದೇ ರಾಜ್ಯದಲ್ಲಿ ಮಾತ್ರವಲ್ಲ ಇಡೀ ರಾಷ್ಟ್ರಮಟ್ಟದಲ್ಲಿ ಭೂ ಸುಧಾರಣಾ ಕಾನೂನು ವ್ಯಾಪಕವಾಗಿ ಚರ್ಚೆ ಆಗಬೇಕು. ಶಾಸನಸಭೆಗಳಲ್ಲಿ ಪಾರ್ಲಿಮೆಂಟಗಳಲ್ಲಿ ಜಾರಿಗೆ ಬರಬೇಕು ಎನ್ನತಕ್ಕದ್ದು. ಕೇರಳ ರಾಜ್ಯದಲ್ಲಿಯೂ ಕೂಡ ಅಷ್ಟೇ ವ್ಯವಸ್ಥಿತವಾಗಿ ಕಮ್ಯುನಿಸ್ಟ್ ಪಕ್ಷದ ಸರ್ಕಾರ ನಂಬೂದರಿ ಪಾಡ್, ಅಚ್ಯುತ್ ಮೆನನ್ ಇತ್ಯಾದಿಯವರ ಕಾಲದಲ್ಲಿ ಕೂಡ ಉಳುವವನನ್ನೇ ಹೊಲದೊಡೆಯನನ್ನಾಗಿ ಮಾಡತಕ್ಕ ವಿಚಾರದಲ್ಲಿ ಅಷ್ಟೇ ಪ್ರಾಮಾಣಿಕವಾದ ಕೆಲಸವನ್ನು ಕೇರಳ ರಾಜ್ಯ ಶಕ್ತಿ ಮೀರಿ ಮಾಡಿದ್ದಾರೆ. ಅದೇ ರೀತಿಯಲ್ಲಿ ಪಶ್ಚಿಮ ಬಂಗಾಳದಲ್ಲಿ ಈಗಿರತಕ್ಕ ಜ್ಯೋತಿ ಬಸು ಅವರು 18 ವರ್ಷದಿಂದ ಮುಖ್ಯಮಂತ್ರಿಯಾಗಿದ್ದಾರೆ. ಅವರ ಕಾಲದಲ್ಲಿ ಭೂ ಸುಧಾರಣೆ ಜಾರಿಗೆ ಬರತಕ್ಕ ವಿಚಾರದಲ್ಲಿ ಮೊನ್ನೆ ಮದ್ರಾಸನಲ್ಲಿ ನಾವಿಬ್ಬರೂ ಸೇರಿದಾಗ ಈ ವಿಚಾರ ಚರ್ಚೆಗೆ ಬಂತು. ನಾವು ಕುಳಿತು ಕೊಂಡು ಹಲವಾರು ವಿಚಾರವನ್ನು ಚರ್ಚೆಮಾಡುವಂತಹ ಕಾಲದಲ್ಲಿ ಭೂಸುಧಾರಣಾ ಕಾನೂನು ಚರ್ಚೆಗೆ ಬಂದಂತಹ ಕಾಲದಲ್ಲಿ ದೇವರಾಜ್-ಅರಸ್ ಅವರನ್ನು ಅವರು ನೆನೆಪಿಕೊಂಡರು. ಅವರು ಹೇಳಿದರು ನಿಜವಾಗಿಯೂ ಆ ಒಬ್ಬ ವ್ಯಕ್ತಿ ಬಡ ವರ್ಗದ ಬಗ್ಗೆ ಅವರು ಹೋರಾಡುವಂಥ ಒಂದು ವಿಚಾರತನ ಅವರಲ್ಲಿತ್ತು ಎನ್ನತಕ್ಕ ಮಾತನ್ನು ಅವರು ಆಡುತ್ತಿದ್ದರು. ಆದ್ದರಿಂದಲೇ, ಈ ಭೂಸುಧಾರಣಾ ಕಾನೂನನ್ನು ಅಪಾದಮಸ್ತಕವಾಗಿ ಜಾರಿಗೆ ಕೊಡಬೇಕು. ಉಳಿದಿರತಕ್ಕ ಕೇಸಗಳನ್ನು ತಕ್ಷಣ ಇತ್ಯರ್ಥಗೊಳಿಸಬೇಕು. ಒಬ್ಬ ವ್ಯಕ್ತಿಯ ಹಕ್ಕನ್ನು ಭೂಮಿಯ ಮಾಲೀಕತ್ವವನ್ನು ಗೇಣಿದಾರರಿಗೆ ಕೊಡಬೇಕು ಎನ್ನತಕ್ಕ ವಿಚಾರವೇ 20 ಅಂಶದ ಆರ್ಥಿಕ ಕಾರ್ಯಕ್ರಮದಲ್ಲಿ ಅಡಗಿರತಕ್ಕ ಪ್ರಾಮುಖ್ಯವಾದ ಅಂಶ ಕೂಡ ಹೌದು. ಇವತ್ತು ಕೇಂದ್ರ ಸರ್ಕಾರ ಉದಾಹರಣೆಯನ್ನು ತೆಗೆದುಕೊಳ್ಳಿ. ಸರ್ಕಾರಗಳು ಬದಲಾವಣೆ ಆಗಿರಬಹುದು. ಪ್ರಧಾನ ಮಂತ್ರಿ ಬದಲಾವಣೆ ಆಗಿರಬಹುದು. ಜನತಾ ಸರ್ಕಾರ ಬಂತು, ಚಂದ್ರಶೇಖರ್ ಸರ್ಕಾರ ಬಂತು. ಅನಂತರ ವಿಪಿ ಸಿಂಗ್ ಅವರ ಸರ್ಕಾರ ಬಂತು. ಬೇರೆ ಬೇರೆ ಸರ್ಕಾರಗಳು ಬಂದವು. ಆದರೆ 20 ಅಂಶದ ಆರ್ಥಿಕ ಕಾರ್ಯಕ್ರಮದಲ್ಲಿರತಕ್ಕ ಭೂ ಸುಧಾರಣಾ ಕಾನೂನನ್ನು ಜಾರಿಗೆ ಕೊಡತಕ್ಕ ವಿಚಾರದಲ್ಲಿ ಯಾರೂ ಕೂಡ ಅದನ್ನು ಹಿಂದಕ್ಕೆ ತೆಗೆದುಕೊಳ್ಳಲಾಗಲಿಲ್ಲ. ಏಕೆಂದರೆ commitment was there on the part of all these concerned political parties. ನನಗೆ ಗೊತ್ತಿರುವ ಹಾಗೆ ನೀವು ಇದಕ್ಕೆ ವಿರುದ್ಧವಾಗಿದ್ದೀರಿ ಈಗ ಎನ್ನತಕ್ಕ ದೃಷ್ಟಿಯಿಂದ ನಾನು ಮಾತನಾಡುತ್ತಿಲ್ಲ ಕಮಿಟಮೆಂಟ್ ವಿಚಾರದಲ್ಲಿ ಮಾತನಾಡಿದರೆ ಇವತ್ತು ತಿದ್ದುಪಡಿ ತಂದರೆ ಇದರ ಪರಿಣಾಮ ಸಮಾಜದಲ್ಲಿರುವ ಆ ವರ್ಗದ ಮೇಲೆ ಮಾನಸಿಕವಾಗಿ ಏನು ಆಗುತ್ತದೆ ಎನ್ನುವ ವಿಚಾರ ನೀವು ಮಾಡಬೇಕು. ಇನ್ನೂ ಇತ್ಯರ್ಥವಾಗದೇ ಇರತಕ್ಕ ಪ್ರಕರಣಗಳು ಅಂದರೆ ಕೇಸುಗಳು ಇವೆ. they are

pending in various Tribunals constituted by the State Governments. ಇನ್ನೂ ಕೂಡ ಬೆಳಕನ್ನು ಕಾಣದೇ ಇರತಕ್ಕ ಕೇಸ್‌ಗಳು ಇವೆ. ನಮ್ಮ ಸೊರಬ ತಾಲ್ಲೂಕನ್ನು ತೆಗೆದುಕೊಳ್ಳೋಣ. ನಾನು ನಿಮ್ಮ ಹತ್ತಿರ ಕೂಡ ಮಾತನಾಡಿದೆ. ಮಾನ್ಯ ಜಾಲಪ್ಪನವರಿಗೆ ಇದೆಲ್ಲಾ ಗೊತ್ತಿದೆ. ಒಂದು ಸಾವಿರದ ಚಿಲ್ಲರೆ ಕೇಸಗಳು ರಿಮ್ಯಾಂಡ್ ಆಗಿ ಬಂದವು. ಮತ್ತೆ ಅಲ್ಲಿ ಏನಾದರೂ ಬಾಕಿ ಇದ್ದವು ಇರಬಹುದು. ನಾನೇ ಸ್ವತಃ ಟ್ರಿಬ್ಯುನಲ್ ಮೆಂಬರ್ ಆಗಿ ಕುಳಿತುಕೊಂಡಿದ್ದೇನೆ. ದೇವರಾಜ್ ಅರಸ್ ಅವರ ಕಾಲದಲ್ಲಿ before I become a Minister in the State Government. ಆಮೇಲೆ ನಾನು ಕುಳಿತುಕೊಳ್ಳಲಿಕ್ಕೆ ಹೋಗಲಿಲ್ಲ. ನನ್ನ ಪರವಾಗಿ ಬೇರೆ ಬೇರೆ ರೆವಿನ್ಯೂ ಸಚಿವರು ಕೇಸು ಇತ್ಯರ್ಥ ಮಾಡುವ ಕಾನೂನು ಇದೆ, ನಾವು ಅಲ್ಲಿ ವ್ಯವಸ್ಥೆ ಮಾಡುತ್ತಾ ಬಂದಿದ್ದೇವೆ. ನಮ್ಮ ಉದ್ದೇಶ ಉಳುವವನೇ ಹೊಲದೊಡೆಯ ಆಗಬೇಕು ಎಂದು ಇದ್ದರೆ ಇವತ್ತು ಅವನಿಗೆ ಪಹಣಿ ದಾಖಲೆ we say something about the actual possession of the land which he is cultivating ಅದು ಇರಲೇ ಬೇಕು ಎಂದೇನೂ ಇಲ್ಲ. ಉದಾಹರಣೆಗೆ ನೀವು ದಕ್ಷಿಣ ಕನ್ನಡ ಜಿಲ್ಲೆಯನ್ನು ತೆಗೆದುಕೊಂಡರೆ ಅಲ್ಲಿ ಅರ್ಧ ಎಕರೆ, ಕಾಲು ಎಕರೆ, ಸೆಂಟ್ಸ್, ನಮ್ಮ ಹಾಗೆ ದೊಡ್ಡ ದೊಡ್ಡ ಪ್ರದೇಶ ಸಿಕ್ಕುವುದಿಲ್ಲ. ನಮ್ಮ ಕಡೆಗೆಲ್ಲಾ ಎರಡು ಎಕರೆ, ಮೂರು ಎಕರೆ, ನಾಲ್ಕು, ಐದು ಆರು ಎಕರೆ ಸಿಕ್ಕರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಕಾರವಾರ ಜಿಲ್ಲೆಯ, ಘಟ್ಟದ ಕೆಳಗಡೆ ಇರತಕ್ಕ ಪ್ರದೇಶದಲ್ಲಿ ಭಟ್ಕಳ್, ಖಾನಾವರ-ಕುಮುಟಾ, ಅಂಕೋಲಾ, ಕಾರವಾರ, ಆಕಡೆಗೆ, ಎಲ್ಲಾ ಸಮುದ್ರದ ದಂಡೆಯಲ್ಲಿರತಕ್ಕ ಪ್ರದೇಶದಲ್ಲಿರತಕ್ಕಂಥ ಸಮುದ್ರದ ಕಿನಾರೆಗಳಲ್ಲಿರತಕ್ಕಂಥ ಪ್ರದೇಶಗಳಲ್ಲಿ ವಿಸ್ತೀರ್ಣ ಗೇಣಿದಾರರಿಗೆ ಮಾಡತಕ್ಕದ್ದು, ಭೂ ಮಾರ್ಗ ಇರತಕ್ಕ ವಿಸ್ತೀರ್ಣ ಬಹಳ ಕಡಿಮೆ ಇದೆ. ಈ ದೃಷ್ಟಿಯಿಂದ ಯಾವ ಪ್ರದೇಶದಲ್ಲಿ ಭೂಮಿಯನ್ನು ಗೇಣಿದಾರನಾಗಿ ಭೂಮಿಯನ್ನು ಸಾಗುವಳಿ ಮಾಡುತ್ತಿದ್ದಾನೆ, ಅವನಿಗೆ ಹಕ್ಕು ಕೊಡುವ ವಿಚಾರದಲ್ಲಿ ಸತತವಾಗಿ ದೇವರಾಜ್ ಅರಸ್ ಅನಂತರ ಬಂದಿರತಕ್ಕ ಸರ್ಕಾರಗಳು, ನಾನು ಒಳಗೊಂಡಂತೆ ಮುಖ್ಯಮಂತ್ರಿಯಾಗಿರತಕ್ಕ ಸಂದರ್ಭದಲ್ಲಿ ಅದನ್ನು ಪ್ರಾಮಾಣಿಕವಾಗಿ ಜಾರಿಗೆ ಕೊಡತಕ್ಕ ಪ್ರದರ್ಶನವನ್ನು ಮಾಡಿದ್ದೇನೆ. ನಾನೇ ಎರಡು ಬಾರಿ ಕಂದಾಯ ಸಚಿವನಾಗಿ ಕೆಲಸ ಮಾಡಿದ್ದೆ. ಶ್ರೀಮಾನ್ ಗುಂಡೂರಾವ್ ಅವರ ಕಾಲದಲ್ಲಿ ಮಂತ್ರಿ ಮಂಡಲದಲ್ಲಿ ರೆವಿನ್ಯೂ ಅಂಡ್ ಅಗ್ರಿಕಲ್ಚರ್ ಮಿನಿಸ್ಟರ್ ಆಗಿದ್ದಾಗಲೂ ಕೂಡ ನಾವು ಚರ್ಚೆ ಮಾಡಿದ್ದೇವೆ. I was also a Minister of State for Home in the Devaraj Urs Ministry for 8 months. But the point I would like to stress is, when I was the Minister of State for Home, I gave all protection to the tenants class which was not having this Pahani accounts in their respective names, except Bombay-Karnataka area. Today, I must recall the services rendered by the then Government of Bombay, erstwhile Bombay State, ಮೊರಾರ್ಜಿ ದೇಸಾಯಿ ಅವರ ಕಾಲದಲ್ಲಿ ತಮಗೆಲ್ಲಾ ಗೊತ್ತಿದೆ. ಬಾಂಬೆ ಕರ್ನಾಟಕ ಏರಿಯಾ ಬೆಳಗಾಂ ಬಿಜಾಪುರ, ಕಾರವಾರ ಅಂಡ್ ಧಾರವಾಡ ಈ ನಾಲ್ಕು ಜಿಲ್ಲೆಗಳಲ್ಲಿ ಸಂಬಂಧಪಟ್ಟಂತೆ ಅಲ್ಲಿರತಕ್ಕ ಗೇಣಿದಾರರಿಗೆ ಪಹಣಿ ಬರೆಯಲೇ ಬೇಕು ಎಂದು ಕಾನೂನು

ಮಾಡಿಟ್ಟಿದ್ದರಿಂದ I think it was 95 to 98% ಬಹಳ ಚೆನ್ನಾಗಿತ್ತು. ನಮ್ಮ ರಾಜ್ಯ ಸರ್ಕಾರಕ್ಕೆ ಭೂ ಸುಧಾರಣಾ ಕಾನೂನು ಜಾರಿಗೆ ಕೊಡಲು ಬಹು ಸುಲಭ ಆಯಿತು whereas in the Old Mysore State, it was the horrible state of affairs ನಾವು ಅದಕ್ಕಾಗಿ ಕಾನೂನು ಮಾಡಬೇಕಾದರೆ ದೇವರಾಜ್ ಅರಸ ರವರ ಕಾಲದಲ್ಲಿ ಏನು ಮಾಡಿದ್ದೇವೆ ಎಂದರೆ ಪಹಣಿ ಅಕಾಂಟ್ಸ ಇರಲೇಬೇಕು ಎಂದಿಲ್ಲ. ಅಕ್ಚುಯಲ್ ಪೊಸಿಷನ್ ಇದ್ದು ಬಿಟ್ಟರೆ ಅವರು ಯಾವುದೇ ಒಬ್ಬ ಗೇಣಿದಾರ ಇರಬಹುದು, ಅವನಿಗೆ ಅದರ ಮಾಲೀಕತ್ವವನ್ನು ಆಕ್ಯುಪೆನ್ಸ್ ರೈಟ್‌ನ್ನು ಮತ್ತು ಭೂ-ಹಿಡುವಳಿ ಹಕ್ಕನ್ನು ಅವನಿಗೆ ಕೊಡತಕ್ಕ ವಿಚಾರವನ್ನು ನಾವು ಮಾಡಿ ಆ ಸೆಕ್ಷನ್ ಕೂಡ ಭೂ ಸುಧಾರಣಾ ಕಾಯಿದೆಯಲ್ಲಿ ಹಾಕಿದ್ದೇವೆ. ಅದು ಇವತ್ತಿಗೂ ಕೂಡ ಅದೇ ಕಾನೂನು ಇದೆ. ಇದರ ಅರ್ಥ ನಾನು ಏತಕ್ಕಾಗಿ ಹೇಳುತ್ತಿದ್ದೇನೆ ಅಂದರೆ ಆಂಗ್ಲರ ಆಳ್ವಿಕೆಯ ಪದ್ಧತಿಯಿಂದ ನಾವು ವಿಭಿನ್ನವಾಗಿರತಕ್ಕದ್ದು. ಒಂದು ವರ್ಗ ಜಮೀನ್ದಾರಿ ವರ್ಗ including the absentee landlords ಇದ್ದರೆ ಇನ್ನೊಂದು ವರ್ಗ ಕಷ್ಟಪಟ್ಟು ಬೆವರು ಸುರಿಸಿ ಸುಸ್ತಾಗಿರತಕ್ಕ ವರ್ಗ. The main object of the Land Reforms Act is to cut off this kind of system and eradicate this system that was prevailing and still prevailing. ಅಂದರೆ ಇನ್ನೂ ಜಮೀನುದಾರತ್ವ ಉಳಿದುಕೊಂಡಿದ್ದಾರಲ್ಲಾ, ಇನ್ನೂ ಕೇಸಸ್ ಇರುವುದರಿಂದ ಈ ಪದ್ಧತಿಯನ್ನು ಧ್ವಂಸ ಮಾಡುವ ಮೂಲ ಉದ್ದೇಶವೇ ಕರ್ನಾಟಕ ಭೂ ಸುಧಾರಣಾ ಕಾನೂನು ಉದ್ದೇಶ. ಇನ್ನೊಂದು ಉದ್ದೇಶ ಭೂ ಸುಧಾರಣಾ ಕಾನೂನಿನಲ್ಲಿ ಜಮೀನ್ದಾರಿ ಪದ್ಧತಿಯಲ್ಲಿ ಜಮೀನ್ದಾರರನ್ನು ಕೇವಲ ವಜಾ ಮಾಡಿ ಹಾಕಿಬಿಟ್ಟರೆ ಈ ಜಮೀನು ಯಾರಿಗೆ ಹೋಗಬೇಕುಎಂಬುದು ಇವೊತ್ತು ಎಕ್ಸಸ್ ಲ್ಯಾಂಡ್ ಆದರೆ ಸರ್ಕಾರಕ್ಕೆ ಬರತಕ್ಕ ನಾವು ಒಂದು ಕಲಮು ಇಟ್ಟಿದ್ದರೆ ಗೇಣಿದಾರ ಆತನ ಸ್ವಾಧೀನದಲ್ಲಿಟ್ಟುಕೊಂಡು ಸಾಗುವಳಿ ಮಾಡುತ್ತಿದ್ದವನಿಗೆ ಹಿಡುವಳಿ ಹಕ್ಕನ್ನು ಕೊಡುವಂಥ ವಿಚಾರ ಮಾಡುತ್ತೇವೆ. ಇವೊತ್ತು ಏನಾಗಿದೆಯೆಂದರೆ, ಕೆಲವು ಕಡೆಗಳಲ್ಲಿ ಈ ಅರ್ಜಿಗಳನ್ನು ಸಲ್ಲಿಸುವುದಕ್ಕೆ ಬಿಡಲಿಲ್ಲ, ಸಮಯವನ್ನು ವಿಸ್ತರಿಸುತ್ತಾ ಹೋದೆವು. ದೇವರಾಜ ಅರಸುರವರ ಕಾಲದಲ್ಲಿ ಸುಮಾರು ಆರು ತಿಂಗಳು, ಆರು ತಿಂಗಳು ಹೀಗೆ ಸಮಯವನ್ನು ಕೊಡುತ್ತಾಹೋದೆವು ಎಂಬುದು ತಮಗೆಲ್ಲರಿಗೂ ಗೊತ್ತಿದೆ. ಕೊನೆಗೆ duplicity of all of these litigations or applications ಆಗಿಬಿಡುತ್ತದೆನ್ನುವ ದೃಷ್ಟಿಯಿಂದ ಕೊನೇ ಗಳಿಗೆಯಲ್ಲಿ ಅದನ್ನು ನಿಲ್ಲಿಸುವ ತೀರ್ಮಾನವನ್ನು ದೇವರಾಜ ಅರಸುರವರು ಮುಖ್ಯಮಂತ್ರಿಗಳಾಗಿದ್ದಂಥ ಕಾಲದಲ್ಲಿ ಮಾಡಿದೆವು ಮತ್ತು ಏನು ಕೆಲವು ಡೂಪ್ಲಿಕೇಟ್ ಅಪ್ಲಿಕೇಷನ್ಸ ಗಳಿದ್ದವು ಅವುಗಳನ್ನು ತೆಗೆದುಹಾಕಿದರೂ ಕೂಡ ಸುಮಾರು ಏಳು ಲಕ್ಷ ಚಿಲ್ಲರೆಯಷ್ಟು ಅರ್ಜಿಗಳು ಕರ್ನಾಟಕ ರಾಜ್ಯದ ವಿವಿಧ ಟ್ರಿಬ್ಯೂನಲ್‌ಗಳ ಮುಂದೆ ಬಿದ್ದವು. ಆ ಕಾಲದಲ್ಲಿ ಅವರೆಲ್ಲಾ ಉಚ್ಚ ನ್ಯಾಯಾಲಯಕ್ಕೆ ಹೋಗಿರುವುದು ತಮಗೆ ಗೊತ್ತಿದೆ. ಈ ಮಧ್ಯೆ ನಿಮ್ಮ ಸರ್ಕಾರವಿದ್ದಂಥ ಕಾಲದಲ್ಲಿ ಇಂಟರ್‌ಮೀಡಿಯಂ ಎಂದು ಒಂದು ಕೋರ್ಟ್ ತಂದು ಹಾಕಿದಿರಿ, ಹೈಕೋರ್ಟ ಮುಂದಿರತಕ್ಕ ಎಲ್ಲಾ ಕೇಸುಗಳನ್ನು ತಂದು `They must stand transferred to this court'. ಎಂದು ಮಾಡಿದ್ದು ಅನ್ಯಾಯದ ಪರಮಾವಧಿ. ಸದ್ಯಕ್ಕೆ ಅದು ಹೋಯಿತು. ಅದನ್ನು ತೆಗೆದುಹಾಕಿದ್ದಾಯಿತು, ನಮಗೆ ಸಂತೋಷವಾಯಿತು. ಈಗ ಏನು ಟ್ರಿಬ್ಯೂನಲ್

9521-50

ಇದೆ, ಈ ಪದ್ಧತಿಯೇ ವಾಸಿ. ಏಕೆಂದರೆ, ಟ್ರಿಬ್ಯೂನಲ್‌ನಲ್ಲಿ ಆಯಾ ಕ್ಷೇತ್ರದ ಶಾಸಕರುಗಳಿರುತ್ತಾರೆ. ಅಲ್ಲದೆ, ಹರಿಜನ ಹಾಗೂ ಗಿರಿಜನ ವರ್ಗಕ್ಕೆ ಸೇರಿದ ಒಬ್ಬ ಸದಸ್ಯರಿರುತ್ತಾರೆ, ಎ.ಸಿ.ಯವರು ಅಧ್ಯಕ್ಷರಿರುತ್ತಾರೆ. ಈ ನೀತಿಯನ್ನು ನಾವು ಒಪ್ಪಿಕೊಂಡಿದ್ದೇವೆ. ನಾವು ಮತ್ತು ನೀವು ಅಧಿಕಾರದಲ್ಲಿದ್ದಂಥ ಕಾಲದಲ್ಲೂ ಈ ಬಗ್ಗೆ ದೂರುಗಳು ಬಂದಿದ್ದರೂ ಅನೇಕ ಕಡೆಗಳಲ್ಲಿ ಇದರ ಹಕ್ಕು ಸಿಕ್ಕಿದೆಯೆಂಬ ವಿಚಾರವನ್ನು ನಾವು ಮರೆಯಬಾರದು. ಆ ದೃಷ್ಟಿಯಿಂದ ಈಗಿನ ಪದ್ಧತಿಯನ್ನು ಮುಂದುವರೆಸಿಕೊಂಡು ಹೋಗಲು ನಮ್ಮದೇನೂ ಅಭ್ಯಂತರವಿಲ್ಲ. ಇದರ ಚರಿತ್ರೆಯನ್ನು ನಾನು ಏಕೆ ಹೇಳಿದೆನೆಂದರೆ, ಇವೊತ್ತು 'ಭೂಮಿ ಒಡೆತನ' ಉಳುವವನಿಗೆ ದೊರಕಬೇಕೆನ್ನುವ ಮೂಲ ಉದ್ದೇಶ ಇದರಲ್ಲಿರುವುದರಿಂದ ಈ ಭೂಮಿಯನ್ನು ಆದಷ್ಟುಮಟ್ಟಿಗೆ ಆತನಿಗೋಸ್ಕರ ಉಳಿಸಬೇಕೆಂಬ ವಿಚಾರವಿಟ್ಟು ಕೊಂಡೇ ನಾವು ಮಾಡಿದ್ದೇವೆ. ನಿಜ, ಕೆಲವು ಸಾರಿ ತಿದ್ದುಪಡಿ ತರಬೇಕಾಗುತ್ತದೆ, ಕಾಲ ಬದಲಾವಣೆಯಾಗುತ್ತದೆ. ಇವೊತ್ತು ಬೆಂಗಳೂರು ನಗರದಲ್ಲಿ ಎಷ್ಟು ಲಕ್ಷ ಜನಸಂಖ್ಯೆ ಇದೆಯೆಂಬುದು ಗೊತ್ತಿಲ್ಲ. ಸುಮಾರು 45 ರಿಂದ 50 ಲಕ್ಷ ಜನಸಂಖ್ಯೆಯಿರಬಹುದು. ವರ್ಷೇ ವರ್ಷೇ ಲಕ್ಷಾಂತರ ಜನರು ಬೆಂಗಳೂರಿಗೆ ಬಂದು ನೆಲೆಸುತ್ತಿದ್ದಾರೆ. ಬೆಂಗಳೂರಿನ ಸುತ್ತಮುತ್ತಲಿದ್ದ 'ಹಸಿರು ವಲಯ ಪಟ್ಟಿ' ಎಲ್ಲವೂ ಹೋಯಿತು. ನಮ್ಮ ಸೊಂಟಕ್ಕೆ ಉಡಿದಾರವಿದ್ದಂತೆ ಬೆಂಗಳೂರು ನಗರಕ್ಕೆ ಸುತ್ತಮುತ್ತ ಇರತಕ್ಕ ಉಡಿದಾರ, ಈ ಉಡಿದಾರ ಕಿತ್ತುಕೊಂಡು ಹೋಗಿ, ಭೂಮಿಯ ಬೆಲೆ ಯದ್ವಾತದ್ವಾ ಗಗನಕ್ಕೆ ಮುಟ್ಟಿದೆ ಯಾರು ಎಲ್ಲಿದ್ದೇವೆ? ಇದರ ಬಗ್ಗೆ ಏನು ಮಾಡಬೇಕೆಂಬ ಗೊಂದಲದಲ್ಲಿ ಸಮಾಜದ ಎಲ್ಲಾ ವರ್ಗದ ಜನರೂ ಇದ್ದಾರೆ. ಈ ಪರಿಸ್ಥಿತಿಯನ್ನು ಯಾರು ನಿಭಾಯಿಸುತ್ತಿದ್ದಾರೆಂದರೆ ಯಾರು ದೊಡ್ಡ ದೊಡ್ಡ ವ್ಯಾಪಾರಸ್ಥರು ಶಕ್ತಿವಂತರಿದ್ದಾರೋ ಅವರುಗಳು ಮಾತ್ರ ಹುಷಾರಾಗಿ, ಬುದ್ಧಿವಂತಿಕೆಯಿಂದ ನಿಭಾಯಿಸುವ ಶಕ್ತಿ ಅವರಿಗೆ ಇದೆಯೇ ಬಡ ಗೇಣಿದಾರರಲ್ಲ. ಈ ತರಹ ವ್ಯವಹರಿಸುವ ಶಕ್ತಿ ಯಾವ ರಾಜಕಾರಣಿಗೂ ಇಲ್ಲ. ಎಲ್ಲಿಯಾದರೂ ಯಾರೋ ಒಬ್ಬ ರಾಜಕಾರಣಿ ಜಮೀನು ತೆಗೆದುಕೊಂಡಿದ್ದೇವೆ ಅದರ ಉದಾಹರಣೆ ಕೊಟ್ಟು ಅದರ ಬಗ್ಗೆಯೇ ಇವೊತ್ತು ಬರೀ ಭಾಷಣ ಮಾಡುವ ಪದ್ಧತಿಯನ್ನು ಈ ದೇಶದಲ್ಲಿ ಬಿಡಬೇಕು ಅಥವಾ ಮಧ್ಯಮ ವರ್ಗದವರ ಬಗ್ಗೆ ಕೇಳುತ್ತೇನೆ. ಹಿಂದೆ ಈ ದೇಶದಲ್ಲಿ ಹಲವಾರು ಪ್ರಧಾನಮಂತ್ರಿಗಳು ಆಗಿಹೋಗಿದ್ದಾರೆ. ಗುಲ್ಜಾರಿಲಾಲ್ ನಂದಾ ಎಂಬ ಮಾಜಿ ಪ್ರಧಾನಿಗಳು ಈಗಲೂ ಇದ್ದಾರೆಂಬುದು ತಮಗೆಲ್ಲಾ ಗೊತ್ತಿದೆ. ಮೊನ್ನೆ ಅವರ ವಿಚಾರವಾಗಿ ದೂರದರ್ಶನದಲ್ಲಿ ಬಂತು, ನನಗೆ ಅವರ ಬಗ್ಗೆ ಅಪಾರವಾದ ಗೌರವವಿದೆ. ಇವೊತ್ತು ಪ್ರಧಾನಮಂತ್ರಿಗಳಾಗಿರುವವರನ್ನು ಭಾರಿ ದೊಡ್ಡ ಪ್ರಧಾನಿಯನ್ನಾಗಿ ಮಾಡಿ ಇಟ್ಟುಕೊಂಡಿದ್ದೀರಿ. ನಮ್ಮ ರಾಜ್ಯದಲ್ಲಿ ಹಲವಾರು ಉತ್ತಮ ಮುಖ್ಯಮಂತ್ರಿಗಳು ಆಗಿ ಹೋಗಿದ್ದಾರೆ. ಅವರ ಹೆಸರುಗಳನ್ನು ನಾನು ಹೇಳಲು ಹೋಗುವುದಿಲ್ಲ. ಒಂದು ವೇಳೆ ಅವರ ಬಗ್ಗೆ ಹೇಳಿ ಅದು ಪತ್ರಿಕೆ ಗಳಲ್ಲಿ ಪ್ರಕಟಗೊಂಡು ಅವರ ಮನಸ್ಸಿಗೆ ನೋವಾಗುತ್ತದೆನ್ನುವ ವಿಚಾರವನ್ನು ತಡೆಹಿಡಿದು ಮಾತನಾಡುತ್ತಿದ್ದೇನೆ. ಇವೊತ್ತು ಯಾರು ಮುಖ್ಯಮಂತ್ರಿಗಳಾಗಿದ್ದಾರೋ ಅವರೇನು ಭಾರಿ ಆಸ್ತಿ ಮಾಡಿಟ್ಟುಕೊಂಡಿದ್ದಾರೆಯೇ? ಯಾರ್ಯಾರು ಸಚಿವರಾಗಿದ್ದಾರೆ, ಯಾರ್ಯಾರು ಯಾವ್ಯಾವ ಪಾರ್ಟಿಯಲ್ಲಿದ್ದಾರೋ ಅವರೆಲ್ಲಾ ಆಸ್ತಿಯನ್ನು ತಂದು ತುಂಬಿಟ್ಟು ಕೊಂಡಿದ್ದಾರೆಯೇ? ನಾನು ಕೇಳುತ್ತೇನೆ. ಈ ಸಂಪೂರ್ಣ ವ್ಯವಸ್ಥೆಯ ಅರಿವನ್ನು

ನೀವು-ನಾವು ಗಮನದಲ್ಲಿಟ್ಟುಕೊಂಡು ಪಕ್ಷಾತೀತವಾಗಿ ವಿಚಾರ ಮಾಡದೇ ಇದ್ದರೆ ನಾಳೆ ಇಡೀ ವ್ಯವಸ್ಥೆ ಕುಸಿದು ಬೀಳುವ ಸಂದರ್ಭ ಬರಬಹುದು ಎಂದು ನನ್ನ ಮನಸ್ಸಿಗೆ ಅನ್ನಿಸುತ್ತದೆ. ಏಕೆ ಎಂದು ದಯವಿಟ್ಟು ಕಾರಣ ಕೇಳಬೇಡಿ. ಇತ್ತೀಚೆಗೆ ಆಗುತ್ತಿರುವ ಬೆಳವಣಿಗೆಗಳನ್ನು ನೋಡಿದಾಗ, ಯಾವ ಬೆಳವಣಿಗೆ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ, ಇದರ ಪರಿಸ್ಥಿತಿ ವಿಕೋಪಕ್ಕೆ ಹೋಗುವ ಸಂದರ್ಭ ಬರಬಹುದು. ಪಕ್ಷಾತೀತವಾಗಿ ಹೇಳಬೇಕೆನ್ನುವ ವಿಚಾರವನ್ನು ನಾನು ಸೂಕ್ಷ್ಮವಾಗಿ ಪ್ರಸ್ತಾಪಿಸಿದ್ದೇನೆ, ನಾನು ಏನು ಅದರ ವಿವರಗಳಿಗೆ ಹೋಗಿದ್ದೇನೆ, ಅದಕ್ಕೂ ಈ ತಿದ್ದುಪಡಿಗೂ ಸಂಬಂಧವಿಲ್ಲ. ಆದಕಾರಣ, ಆ ವಿಷಯವನ್ನು ಅಲ್ಲಿಗೆ ನಿಲ್ಲಿಸುತ್ತೇನೆ. ಆದರೆ, ಇವೊತ್ತು ಇರತಕ್ಕಂಥ ಪದ್ಧತಿಯಲ್ಲಿ ನಾವ್ಯಾರೂ ಕೂಡ ಹ್ಯಾಂಡಲ್ ಮಾಡುವುದಕ್ಕಾಗುವುದಿಲ್ಲ. ಭೂಮಿಯ ಬೆಲೆ ಹೆಚ್ಚಾದರೂ ಕೂಡ ಕೋಟಿಗಟ್ಟಲೆ ಕ್ಕೊಳ್ಳುವ ಶಕ್ತಿ ಇರುವವನು ಮಾತ್ರ ಕೊಳ್ಳುತ್ತಾನೆ. ಆತ ಕರ್ನಾಟಕದವನಂತೂ ಅಲ್ಲ. ಯಾರು ಬೆಂಗಳೂರಿಗೆ ಬಂದು ಅಬ್‌ನಾರ್ಮಲ್ ರೇಟಿಗೆ ಕೊಳ್ಳುತ್ತಿದ್ದಾರೋ ಅವರು ಕರ್ನಾಟಕದವರಲ್ಲ ಎಂಬುದನ್ನು ಮಾನ್ಯ ಕಂದಾಯ ಸಚಿವರಾದ ಜಾಲಪ್ಪನವರ ಗಮನಕ್ಕೆ ತರುತ್ತಿದ್ದೇನೆ. ತಮಗೆಲ್ಲಾ ಗೊತ್ತಿರುವಂತೆ ದೊಡ್ಡಬಳ್ಳಾಪುರದವರು ಬೆಂಗಳೂರಿಗೆ ಬಂದು ಜಮೀನು ಕೊಂಡುಕೊಂಡು ಇಟ್ಟುಕೊಳ್ಳುವುದಕ್ಕಾಗುವುದಿಲ್ಲ, ಅದೇ ರೀತಿ ಶಿವಮೊಗ್ಗದವರು ಬಂದು ಜಮೀನು ಕೊಂಡುಕೊಳ್ಳುವುದಕ್ಕಾಗುವುದಿಲ್ಲ. ಕರ್ನಾಟಕದವರು ಯಾವುದೋ ಭಾಗದಲ್ಲಿದ್ದಾರೆ, ಮತ್ತೊಬ್ಬರು ಕೂಡ ಬರುವುದಕ್ಕಾಗುವುದಿಲ್ಲ. ಕರ್ನಾಟಕದವರು ಯಾವುದೋ ಭಾಗದಲ್ಲಿದ್ದಾರೆ, ಮತ್ತೊಬ್ಬರು ಕೂಡ ಬರುವುದಕ್ಕಾಗುವುದಿಲ್ಲ. ಯಾರು ಹಣವಂತರಿದ್ದಾರೋ, ಯಾರು ಹಣವನ್ನು ಹ್ಯಾಂಡಲ್ ಮಾಡಬಲ್ಲವರಾಗಿರುತ್ತಾರೋ ಅವರು ಮಾತ್ರ ಈ ವಿಚಾರವಾಗಿ ವ್ಯವಹರಿಸುತ್ತಾರೆ. ನಾನು ಅದರ ವಿವರಗಳಿಗೆ ಹೋಗುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ಬೆಂಗಳೂರಿನ ಹತ್ತಿರವಿರುವ ಕರಿಯಣ್ಣ ಎಂಬ ಒಬ್ಬ ಭೂಮಿ ಮಾಲೀಕನಿರುತ್ತಾನೆಂದು ಇಟ್ಟುಕೊಳ್ಳೋಣ. ಆತನಿಗೆ ಭೂ ಸುಧಾರಣೆ ಕೋಟಾದಲ್ಲಿ ಎರಡು ಎಕರೆಗಳಷ್ಟು ಜಮೀನು ಖಾತೆಯಾಗಿದ್ದು, ಅಥವಾ ದೊಡ್ಡಬಳ್ಳಾಪುರದ ಹತ್ತಿರವೋ ಅಥವಾ ಅನೇಕಲ್, ಹೊಸಕೋಟೆ ಅಥವಾ ಉತ್ತರಹಳ್ಳಿ ಕಡೆಯ ಪ್ರದೇಶದಲ್ಲಿದ್ದರೆ ಒಳ್ಳೆಯ ಬೆಲೆ ಬಂದಿರಬಹುದು, ಬೆಲೆ ಬಂದಿದೆಯೆಂದು ನಾನೂ ಒಪ್ಪುತ್ತೇನೆ. ಮತ್ತು ಭೂ ಮಿತಿಯನ್ನು ಎಕ್ಸೆಟೆಂಡ್ ಮಾಡಿ ಜಾಸ್ತಿ ಮಾಡತಕ್ಕಂಥ ವಿಚಾರಕ್ಕೆ ಹೋದರೆ ಕೊಳ್ಳತಕ್ಕಂಥ ಶಕ್ತಿ ಇರುವವನ ಹೊಟ್ಟೆಗೆ ಆ ಭೂಮಿ ಹೋಗುತ್ತದೆ. ಸಣ್ಣ-ಪುಟ್ಟ ಭೂಮಿ ಮಾಲೀಕನಿಗೆ ಅಬನಾರ್ಮಲ್ ರೇಟಿಗೆ ಹಣ ಕೂಡ ಸಿಕ್ಕಿದೆ, ಆ ವಿಚಾರದಲ್ಲಿ ಸ್ವಲ್ಪ ಸತ್ಯವಿದೆ, ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ, ದುಡ್ಡು ಒಂದೇ ಬಾರಿಗೆ ಹೇರಳವಾಗಿ, ಚೆನ್ನಾಗಿ ಸಿಗುವುದರಿಂದ ಈ ಗೇಣಿದಾರರಿಗೆ ಸಿಗಬಹುದೆಂಬ ಮಿತಿಯನ್ನು ಕೊಡತಕ್ಕಂಥ ವಿಚಾರವಿಟ್ಟುಕೊಂಡು ಇವೊತ್ತು ಭೂಮಿಯನ್ನು ಮಾರಾಟ ಮಾಡಿದರೆ ಬಡವರ ಕೈಗೆ ಹಣ ಹೋದರೆ ಏನಾಗುತ್ತದೆಂಬುದು ತಮಗೆಲ್ಲರಿಗೂ ಗೊತ್ತಿದೆ. ಶರಾವತಿ ಮತ್ತು ಹೇಮಾವತಿ ಪ್ರಾಜೆಕ್ಟ್‌ನಲ್ಲಿ ಭೂಮಿ ಮುಳುಗಡೆಯಾಯಿತು. ಹಾಗೆಯೇ ಕೃಷ್ಣಾ ಅಥವಾ ಕಾವೇರಿ ಯೋಜನಾ ಪ್ರದೇಶವಿರಬಹುದು, ಮತ್ತೊಂದಿರಬಹುದು. ಭೂ ಸ್ವಾಧೀನಪಡಿಸಿಕೊಂಡು ಪರಿಹಾರವಾಗಿ ಸಂಬಂಧಿಸಿದವರಿಗೆ ಹಣವನ್ನು ಕೊಡುವ ವಿಚಾರ ತಮಗೆ ಗೊತ್ತಿದೆ. ಅದೇ ರೀತಿ ತುಂಗಭದ್ರಾ

ಜಲಾಶಯ ಯೋಜನೆ ಇರಬಹುದು. ಪರಿಹಾರವಾಗಿ ಹಣವನ್ನು ತೆಗೆದುಕೊಂಡವರಿಗೆ ಖರ್ಚು ಮಾಡುವುದಕ್ಕೆ ಇಪ್ಪತ್ತೆಂಟು ದಾರಿಗಳಿರುತ್ತವೆ. ಬಡವರಿಗೆ ದುಡ್ಡು ಸಿಕ್ಕಿದ ತಕ್ಷಣ ಖರ್ಚು ಮಾಡಲು ಅದರ ಮೇಲೆ ಅವರಿಗೆ ಹಿಡಿತ ಇಲ್ಲದಿರುವುದರಿಂದ.. ಪಾಪ! ಬ್ಯಾಂಕಿನಲ್ಲಿ ಠೇವಣಿಯಾಗಿಟ್ಟರೆ ಎಷ್ಟು ಶೇಕಡಾದಷ್ಟು ಬಡ್ಡಿ ಬರುತ್ತಬೆಂಬ ವಿಚಾರ ಬಡವರಿಗೆ ಗೊತ್ತಿಲ್ಲ. ಇಂತಹ ಸಂದರ್ಭದಲ್ಲಿ ಹಠಾತ್ತಾಗಿ ಕೆಲವರ ಕೈಗೆ ಹಣ ಸಿಕ್ಕಿದರೆ ಆ ಹಣ ಸದುಪಯೋಗವಾಗದೆ ವೇಸ್ಟ್ ಆಗಿಹೋಗುತ್ತದೆ. ಹೀಗಾಗಿ ಹಣ ಸದುಪಯೋಗವಾಗದೆ ಒಂದು ಕಡೆ ಭೂಮಿ ಹೋದರೆ ಮತ್ತೊಂದು ಕಡೆ ಹಣವೂ ಹೋಗುತ್ತದೆ. ಪರಿಹಾರವಾಗಿ ಕೊಟ್ಟಂಥ ಹಣ ಸದುಪಯೋಗವಾಗಲು ಕಡ್ಡಾಯವಾಗಿ ಠೇವಣಿ ಇಡಬೇಕೆಂಬ ವಿಚಾರದಲ್ಲಿ ಕಾನೂನನ್ನು ತರುತ್ತಿದ್ದೀರಿ? Because it is his onw money, he has got every right to sell his land under the terms of the Property Act and under other respective laws. He has a right. You cannot put any law to sell away his own land. The moment you empower him to sell away the land,ತೆಗೆದುಕೊಂಡು ಹೋಗಿ ಕೊಡುತ್ತಾರೆ. 10-15 ವರ್ಷಗಳವರೆಗೆ ಮಾರಾಟ ಮಾಡಬಾರದೆಂಬ ಷರತ್ತನ್ನು ಸಡಿಲಿಸುವಂತಾದ್ದು, ಮತ್ತು ಮಿತಿ ಹಾಕಿರುವ ಭೂಮಿಯನ್ನು ಖರೀದಿಸಬಾರದೆಂಬ ಷರತ್ತನ್ನು ನಿಯಮವನ್ನು ಸಡಿಲಿಸುವುದರಿಂದ ಇವೆಲ್ಲವೂ ಕೂಡ ಬೇರೆ ವಿಚಾರಗಳಿಗೆ ಎಡೆ ಮಾಡಿಕೊಡಬಹುದೆಂಬುದು ನನ್ನ ಮನಸ್ಸಿಗೆ ಅನ್ನಿಸುತ್ತದೆ. 1991 ರಲ್ಲಿ ನಾವೂ ಕೂಡ ಇದರ ಬಗ್ಗೆ ಮಾತನಾಡಿದ್ದೇವೆ. I am highly thankful to him. ಇನ್ನು ಸೀಗಡಿ ಹಾಗೂ ಮೀನುಗಾರಿಕೆ ವಿಚಾರವಾಗಿ ಹೇಳುವುದಾದರೆ ದಕ್ಷಿಣ ಕನ್ನಡ ಜಿಲ್ಲೆಗೆ ಇದು ನೇರವಾಗಿ ಸಂಬಂಧಪಡುತ್ತದೆ.

ಸೀಗಡಿ ಉದ್ಯಮ ಅಥವಾ ಮೀನುಗಾರಿಕಾ ಉದ್ಯಮಕ್ಕೆ ಸಂಬಂಧಿಸಿದಂತೆ ಅಲ್ಲಿ ಏನಾದರೂ ಬೆಳೆ ಬೆಳೆಯಲು ಜನರಿಗೆ ಬರುವ ಹಾಗಿಲ್ಲವೆನ್ನುವ ವಿಚಾರದ ವರದಿ ನಾನು ಮುಖ್ಯಮಂತ್ರಿಯಾಗಿದ್ದಂಥ ಕಾಲದಲ್ಲಿ ಬಂತು. ನನಗೆ ಗೊತ್ತಿರುವಂತೆ 1991 ರಲ್ಲಿ ಆಕ್ವಾಕಲ್ಚರ್‌ಗೆ ಸಂಬಂಧಿಸಿದಂತೆ ಅದರ ಇತಿ-ಮಿತಿ ವಿಚಾರ ಬಂದಾಗ ಅದಕ್ಕೆ ಬೇರೆ ರೀತಿಯ ಹಣಕಾಸು, ವಿಶ್ವ ಬ್ಯಾಂಕ್‌ನಿಂದ ಇರಬಹುದು ಏಷಿಯಾ ಡೆವಲಪಮೆಂಟ್ ಬ್ಯಾಂಕ್‌ನಿಂದ ಇರಬಹುದು, ಅಥವಾ ನನಗೆ ಗೊತ್ತಿರುವಂತೆ ಕೇಂದ್ರ ಸರ್ಕಾರದ ಯೋಜನೆಯಿಂದ ಇದನ್ನು ಉಪಯೋಗಿಸಿಕೊಳ್ಳಬಹುದು. ಉಪ್ಪು ನೀರಿನ ಸಮುದ್ರ ವಿರುವುದರಿಂದ ಎಷ್ಟೇ ಬೆಳೆತೆಗೆದರೂ ಒಳ್ಳೆಯ ಬೆಳೆ ಬೆಳೆಯುವುದಕ್ಕಾಗುವುದಿಲ್ಲವೆಂದು ಇವಕ್ಕೆ ವಿನಾಯಿತಿ ಕೊಡತಕ್ಕಂಥ ಅವಶ್ಯಕತೆಯಿದೆಯೆಂಬ ಟಿಪ್ಪಣಿ ಬಂದಾಗ ನಮ್ಮ ಕಾಲದಲ್ಲಿಯೇ ಆ ಕುರಿತ ಸಚಿವ ಸಂಪುಟದ ತೀರ್ಮಾನ ಕೂಡ ತೆಗೆದುಕೊಂಡಿದ್ದೇವೆ. ಇಂತಹ ವಾತಾವರಣದಲ್ಲಿ ವಾಸಿಸುತ್ತಿರುವ ಜನರಿಗೆ ಅಲ್ಲಿಯೇ ಉದ್ಯೋಗ ಸಿಗಬೇಕು ಹಾಗೂ ಅಲ್ಲಿರುವವರು ಉದ್ಯೋಗಸ್ಥರಾಗಬೇಕೆಂಬುದಕ್ಕೆ ಯಾವ ರೀತಿಯ ನಿಯಮಗಳು, ಷರತ್ತುಗಳನ್ನು ಮಾಡಬೇಕೆನ್ನುವ ವಿಚಾರದಲ್ಲಿ ಸಚಿವ ಸಂಪುಟ ತೆಗೆದುಕೊಂಡಂಥ ನಿರ್ಣಯದಲ್ಲಿ ತಿಳಿಸಿದ್ದೇವೆ. ಈ ಷರತ್ತು ಫುಲಫಿಲ್ ಆಗದೇ ಇದನ್ನು ಜಾರಿಗೆ ಕೊಡಬಾರದು, ಇಲ್ಲದಿದ್ದರೆ, ಭೂಮಿ ಆತನ ಕೈ ತಪ್ಪಿಹೋಗುತ್ತದೆನ್ನುವ ಕಾರಣಕ್ಕಾಗಿ ಬೇರೆ ಹಣಕಾಸು ಸಂಸ್ಥೆಯಿಂದ, ಕೇಂದ್ರ ಸರ್ಕಾರದ ಯೋಜನೆಯಿಂದ ಅದನ್ನು ಉಪಯೋಗಿಸಿಕೊಳ್ಳೋಣವೆಂದು,

ಅಲ್ಲಿ ತಯಾರಾಗುವ ಉತ್ಪಾದನೆಗೆ ಈ ದೇಶ ಹಾಗೂ ಹೊರದೇಶಗಳಲ್ಲಿ ಬೇಡಿಕೆಗಳಿರಬಹುದು, ಆದುದರಿಂದ, ಅಲ್ಲಿರುವವರು ಪುನಃ ಅದೇ ಉದ್ಯಮದಲ್ಲಿ ನಿರತರಾಗಲೆನ್ನುವ ದೃಷ್ಟಿಯಿಂದ ಆ ರೀತಿ ಮಾಡಿದ್ದೆವು ಎಂಬುದು ನನ್ನ ಗಮನದಲ್ಲಿದೆ. ಆದರೆ, ಅದರ ವಿವರಗಳನ್ನು ನಾನು ಮರೆತಿದ್ದೇನೆ. ಆದುದರಿಂದ, ಭೂ ಸುಧಾರಣೆ ಕಾನೂನನ್ನು ವಾಟರಡೌನ್ ಮಾಡತಕ್ಕಂಥಾದ್ದು ಆಗಲಿ ಗೇಣಿದಾರನಿಗೆ ಇರತ್ಕಕಂಥ ರಕ್ಷಣೆಯನ್ನು ಆ ಭೂಮಿಯನ್ನು ಆತನಿಗೇ ಉಳಿಸುವ ವಿಚಾರದಲ್ಲೂ ಕೂಡ ನಾವು ಎಂದೂ ಕೂಡ ಒಂದು ಸೆಕೆಂಡ್ ಥಾಟ್ ಮಾಡಿರುವ ಜನ ನಾವಲ್ಲ ಅದನ್ನೇ ಉದಾಹರಣೆಯಾಗಿ ಕೊಟ್ಟು ನೀವು 1991 ರಲ್ಲಿ ನಿಮ್ಮ ಕಾಲದಲ್ಲಿ ಆಕ್ಟಾ-ಕಲ್ಚರ್‌ಗೆ ಈ ರೀತಿ ಮಾಡಿದ್ದೀರಿ ಎಂದು then why not for the floriculture. Then why not for horticulture ಎಂದು ಹೇಳುತ್ತಾ ಹೋದರೆ ಇದು ಕರ್ನಾಟಕ ರಾಜ್ಯದ ಮಟ್ಟಿಗೆ ಬಹಳ ದೊಡ್ಡ ಪೆಟ್ಟು ಬೀಳುತ್ತದೆ.

ನಾನು ತಮ್ಮ ಗಮನಕ್ಕೆ ತರುವ ಒಂದು ವಿಚಾರವೇನೆಂದರೆ, ನಿಮ್ಮ ಬಿಲ್ಲಿನಲ್ಲಿ ಕೊನೆಯ ಪಕ್ಷ for argument sake at least ಬೆಂಗಳೂರಿನ ಸುತ್ತಮುತ್ತೂ value of the land has gone sky-highಎಂಬ ವಿಚಾರ ಇದ್ದಿದ್ದರೆ ಹಾಗೂ ಒಂದು ಪ್ರದೇಶಕ್ಕೇ ಇದನ್ನು ಸೀಮಿತಗೊಳಿಸಿ, ಅಲ್ಪಸ್ವಲ್ಪ ಮಿತಿಯೊಳಗೆ ಒಳಪಡಿಸಿ ನಿಮ್ಮ ಅಮೆಂಡಮೆಂಟ್ಸ್ ತಂದಿದ್ದರೆ that, I would have had a second thought about this. ಈಗ ತಾವು ಅದರ ಬಗ್ಗೆ ತಿದ್ದುಪಡಿಯಲ್ಲಿ ಏನನ್ನೂ ಹೇಳಿಲ್ಲ, ಇಡೀ ಕರ್ನಾಟಕ ರಾಜ್ಯಕ್ಕೆ ಅದನ್ನು ಅನ್ವಯ ಮಾಡಲು ಹೊರಟಿದ್ದೀರಿ. ಇದರಿಂದ ಏನಾಗುತ್ತದೆಂದರೆ, ದೂರದಲ್ಲಿರತಕ್ಕ ಜನರಿಗೆ, ಮೂಲೆಯಲ್ಲಿರತಕ್ಕ ಜನರಿಗೆ ಅನ್ಯಾಯವಾಗುತ್ತದೆ. ನಾನು ಹೇಳುವುದೇನೆಂದರೆ the rural economy has gone to dogs, Where 70% own people are living. ನಮ್ಮ ಜನರಿಗೆ ಯಾವುದೇ ಹಣ ಸಿಕ್ಕಿದರೆ ಸಾಕು ಎಂಬ ಮಟ್ಟಕ್ಕೆ ಹೋಗಿದ್ದಾರೆ, ಸೊಸೈಟಿ ಹಣವನ್ನು ಎಲ್ಲಾರು ದುರುಪಯೋಗ ಮಾಡಿಕೊಂಡಿದ್ದಾರೆಂದು ನಾನು ಹೇಳುತ್ತಿಲ್ಲ ಮಳೆ ಬೆಳೆಯು ಸರಿಯಾಗಿಲ್ಲ, ಹಣ ಸಿಗುತ್ತಿಲ್ಲ, ನಮ್ಮ ಜನರು ಯಾರೂ ತೆಗೆದುಕೊಂಡ ಸಾಲವನ್ನು ಕಟ್ಟಬಾರದೆಂದು ಬೇಕೆಂದು ಸುಮ್ಮನಿಲ್ಲ, ಅವರಿಗೆ ಕಟ್ಟಲು ಸಾಧ್ಯವಾಗುತ್ತಿಲ್ಲ, The economic conditions in the rural areas, year by year, day by day, it is dwindling and going down the rate of velocity is very very fast. This is just for your kind information. ಈ ಸಮಯದಲ್ಲಿ ಮಾರಾಟ ಮಾಡಲು ಅನುಮತಿಯನ್ನು ಕೊಟ್ಟರೆ, ಮತ್ತೊಬ್ಬರು ಕೊಂಡುಕೊಳ್ಳಲು ಅನುಮತಿಯನ್ನು ಕೊಟ್ಟರೆ ರೂರಲ್ ಎಕಾನಮಿ ಇನ್ನೂ ಸಹdwindle ಆಗಿ ನಾಶವಾಗತಕ್ಕ ಸಂದರ್ಭ ಬಂದುಬಿಡಬಹುದು. ಆದ್ದರಿಂದ ನಾನು ಏನು ಸಲಹೆ ಮಾಡುತ್ತೇನೆಂದರೆ, therefore, in case you are very serious about the floriculute I would suggest one thingಆದ್ದರಿಂದ ನಾನು ಹೇಳುವುದೇನೆಂದರೆ, ಶಿವಮೊಗ್ಗ ಜಿಲ್ಲೆಯಲ್ಲಿ ಫ್ಲೋರಿ-ಕಲ್ಚರ್ ಮಾಡಿ ಬೆಂಗಳೂರಿಗೆ ಆ ಹೂವುಗಳನ್ನು ತರೆದು ವಿಮಾನದಲ್ಲಿ ಹೊರ ದೇಶಗಳಿಗೆ ಕಳುಹಿಸಲು ಆಗುವುದಿಲ್ಲ. ಏಕೆಂದರೆ ಅದನ್ನು ಇಲ್ಲಿಗೆ ತರುವುದಕ್ಕೆ ಸಾರಿಗೆಯ ವೆಚ್ಚವನ್ನು ಲೆಕ್ಕ ಹಾಕಿದರೆ ಇದು ಗೊತ್ತಾಗುತ್ತದೆ. ಉದಾಹರಣೆಗೆ ತರಕಾರಿಗಳನ್ನು ಗ್ರಾಮಾಂತರ ಪ್ರದೇಶದಲ್ಲಿ ಬೆಳೆದು ನಗರಕ್ಕೆ ತರಬೇಕಾದರೆ ಏನು ಸಾರಿಗೆ ವೆಚ್ಚ ತಗಲುತ್ತದೆ ಎಂಬುದು ನಮಗೆಲ್ಲ

ಗೊತ್ತಿದೆ. ನಾನೇ ಕೃಷಿ ಮತ್ತು ತೋಟಗಾರಿಕೆ ಸಚಿವನಾಗಿದ್ದಾಗ ಅದನ್ನು ನೋಡಿದ್ದೇನೆ. ಇವತ್ತು ಬಿಜಾಪುರದಲ್ಲಿ ದ್ರಾಕ್ಷಿ ಮತ್ತು ದಾಳಿಂಬೆಯನ್ನು ಬೆಳೆಯುತ್ತಾರೆ. ಅದು ಬೆಂಗಳೂರಿನ ದ್ರಾಕ್ಷಿಯನ್ನು ಮೀರಿಸುತ್ತದೆ. ಬಿಜಾಪುರದ ದ್ರಾಕ್ಷಿಗೆ ಬಹಳ ಬೇಡಿಕೆ ಇದೆ. ಆದರೆ ಬಿಜಾಪುರದಿಂದ ದ್ರಾಕ್ಷಿಯನ್ನು ತರಿಸಲು ಸಾರಿಗೆ ವೆಚ್ಚ ಬಹಳ ಜಾಸ್ತಿಯಾಗುತ್ತಿದೆ. ಏಕೆಂದರೆ ಮಾರುಕಟ್ಟೆಯ ಅನುಕೂಲತೆಯನ್ನು ನಾವು ಮಾಡುವುದಕ್ಕಾಗುವುದಿಲ್ಲ. ಆ ರೀತಿಯಾದ ಪೆರಿಶಬಲ್ ಆರ್ಟಿಕಲ್ಸಗಳೇ ಕೋಲ್ಡ್ ಸ್ಟೋರೇಜ್ ವ್ಯವಸ್ಥೆಯನ್ನು ಮಾಡದಿದ್ದರೆ ನೀವು ಇಂಥದಕ್ಕೆ ಯಾವ ರೀತಿಯಿಂದಲೂ ಅಭಿವೃದ್ಧಿ ಮಾಡಿ ಬೆಂಬಲ ಕೊಡುವುದಕ್ಕಾಗುವುದಿಲ್ಲ. ವಿಶ್ವಬ್ಯಾಂಕ್ ಅಥವಾ ಬೇರೆ ಮೂಲಗಳಿಂದ ಸಹಾಯಧನವನ್ನು ಪಡೆದುಕೊಂಡು ಕೋಲ್ಡ್ ಸ್ಟೋರೇಜ್ ಸೌಲಭ್ಯವನ್ನು ಮಾಡಿಕೊಳ್ಳಲೇಬೇಕಾಗುತ್ತದೆ. ಆದ್ದರಿಂದ ಇರತಕ್ಕ ಭೂಮಿ ಅಲ್ಲಿಯೇ ಇರಲಿ. ನಾನು ಕಂದಾಯ ಸಚಿವರಾದ ಮಾನ್ಯ ಜಾಲಪ್ಪನವರಿಗೆ ಹೇಳುವುದೇನೆಂದರೆ, ರೂರಲ್ ಎಕಾನಮಿ ಬೇಸ್ ಅನ್ನು ಬೆಳೆಸಬೇಕು. since our economy is in agriculture in unlike a western country like America or a far eastern country like Japan or any other European country or in any of the countries where agriculture economy is secondary to the industtrial economy, Whereas in our country agriculture economy has got the first place here and industrial economy is in the second place to the agriculture economy, because majority of our population lives in the rural areas and not in the urban areas. It is an area somewhere nearer to 80% ರೂರಲ್ ಎಕಾನಮಿ dwindle ಆಗತಕ್ಕ ಸಂದರ್ಭದಲ್ಲಿ ನಾವು ಈ ರೀತಿ ಕಾನೂನನ್ನು ತಂದುಬಿಟ್ಟರೆ ನಾಳೆದಿವಸ ಪೆಟ್ಟಾಗುತ್ತದೆ ಎನ್ನತಕ್ಕ ವಿಚಾರ ನನ್ನ ಮನಸ್ಸಿಗೆ ಪದೇ ಪದೇ ಬರುತ್ತಿದೆ. ಆದ್ದರಿಂದ ಜನಸಾಮಾನ್ಯರು, ಬಡವರು, ಹರಿಜನ ಗಿರಿಜನರು, ಲಂಬಾಣಿಯವರು, ಬೋವಿ ಕೋಮಿನವರು, ಹಿಂದುಳಿದ ವರ್ಗದಲ್ಲಿರತಕ್ಕವರು, ಹೆಚ್ಚಾಗಿ ಅರ್ಜಿಯನ್ನು ಹಾಕಿರುವವರಾಗಿದ್ದಾರೆ. ಆದ್ದರಿಂದ irrespective of the caste, creed or the religion to which one many belong ಅಂಥ ಎಲ್ಲಾ ವರ್ಗದ ಜನರಿಗೆ ಇದರಿಂದ ಪೆಟ್ಟು ಬೀಳುತ್ತದೆ ಎನ್ನತಕ್ಕ ಅಂಶವನ್ನು ತಮ್ಮಗಳ ಗಮನಕ್ಕೆ ತರುತ್ತಿದ್ದೇನೆ. ನಾನು ಮಾನ್ಯ ಕಂದಾಯ ಸಚಿವರಿಗೆ ಒಂದೇ ಒಂದು ಸಲಹೆಯನ್ನು ಕೊಡುವುದೇನೆಂದರೆ I understand your good intention. I appreciate it.

I am not trying to find fault with your intention at all But, the net result of bringing about certain legislation and paving way for a wider selling out of lands and purchasing capacity of the people ಏನಿದ್ದಾರೆ ಅವರಿಗೆ ಅವಕಾಶ ಮಾಡಿಕೊಟ್ಟರೆ ಬಕಾಸುರನ ಬಾಯಿಗೆ ಲಕ್ಷಾಂತರ ಜನರನ್ನು ನೂಕಿದಂತಾಗುತ್ತದೆ. ಬಂಡವಾಳ ಷಾಹಿಗಳ ಬಾಯಿಗೆ ಇಂತಹ ಗ್ರಾಮಾಂತರ ಭಾಗದಲ್ಲಿರತಕ್ಕ ಜನಸಾಮಾನ್ಯರನ್ನು ನೂಕಿ ನಾವು ಯಾವುದೋ ಎಕಾನಮಿಯನ್ನು ಬೆಳೆಸುತ್ತೇವೆಂದು ಉದಾಹರಣೆಯನ್ನು ಕೊಟ್ಟು ಹೇಳತಕ್ಕ ವಿಚಾರಧಾರೆ ಸಮಂಜಸವಾಗಲಾರದೆಂದು ನನ್ನ ಸಲಹೆ. ದಯವಿಟ್ಟು ತಾವು ಇದರ ಬಗ್ಗೆ ವಿಚಾರ ಮಾಡಬೇಕು.

ನಾನು ಈ ಬಿಲ್ಲನ್ನು ವಿರೋಧ ಮಾಡುತ್ತೇನೆ ಎನ್ನತಕ್ಕ ಮಾತನ್ನಾಡಿದೆ ನಿಜ. ಇದನ್ನು ಹರಿಬರಿಯಲ್ಲಿ ಜಾರಿಗೆ ತರಲು ಹೋಗಬೇಡಿ. ದಯವಿಟ್ಟು ಇದರ ಬಗ್ಗೆ ವಿಚಾರ ಮಾಡಿ. ಏಕೆಂದರೆ this has got the longest possible history.

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) : ಯಾವಾಗ ಏನೇನನ್ನು ಮಾಡಿದ್ದಾರೆ ಅದು ಈಗಾಗಲೇ ಮುಗಿದುಹೋಗಿದೆ. ನಾವು ಈಗ ತಂದಿರತಕ್ಕದ್ದು 109ನಲ್ಲಿ 1ಎ ಬಗ್ಗೆ. ಹಿಂದೆ ಒರಿಜನಲ್ ಆಕ್ಟ್‌ನಲ್ಲಿ subject to the Town and Country Planning Act ಎಂದು ಇತ್ತು. ನಾವು ಅದನ್ನು ಅಮೆಂಡ್‌ಮೆಂಟ್ ಮಾಡಿದಾಗ ಅದನ್ನು ತೆಗೆದುಬಿಟ್ಟು ಅನ್ ಲಿಮಿಟೆಡ್ ಪವರ್ಸ್‌ನ್ನು ತೆಗೆದುಕೊಂಡಿದ್ದಾರೆಂದು ತಮ್ಮಿಂದ ಮತ್ತು ಪತ್ರಿಕೆಗಳವರಿಂದ ಟೀಕೆಗಳು ಬಂದಿದ್ದರಿಂದ ಹಿಂದೆ ಏನು ಆಕ್ಟ್ ಇತ್ತು ಅದನ್ನೇ ಈಗ ಮಾಡಿದ್ದೇವೆ. ಆದರೆ ಇದೇ ಸಂದರ್ಭವನ್ನು ಬಳಸಿಕೊಂಡು ನಿಮ್ಮ ಗೈರುಹಾಜರಿಯಲ್ಲಿ ನಾವೇನು ತೀರ್ಮಾನ ಮಾಡಿದ್ದೆವೊ ಅದರ ಬಗ್ಗೆ ತಾವು ಈಗ ಮಾತನಾಡುತ್ತಿದ್ದೀರಿ. ಆದರೆ ನಾವು ಇದರಿಂದ ಹಿಂದೆ ಸರಿಯಲು ಆಗುವುದಿಲ್ಲ. ಆದರೂ ಸಹ ತಾವೇನು ಹೇಳಿದ್ದೀರಿ ಅದರ ಬಗ್ಗೆ ಕನವಿನ್ಸ್ ಮಾಡಲು ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಈ ಬಿಲ್ಲಿನಲ್ಲಿ ಸಂಖ್ಯೆ: 2ರಲ್ಲಿನ 109ರ ಪ್ರಕರಣದ ಬಗ್ಗೆ ತಿದ್ದುಪಡಿಯೆಂದು ನೀವೇ ಬರೆದಿದ್ದೀರಿ. 63, 79 ಎ, 79ಬಿ ಪ್ರಾಮುಖ್ಯವಾಗಿರತಕ್ಕದ್ದು. ಯಾವುದೇ ವಿಸ್ತೀರ್ಣದ ಭೂಮಿಗೆ ವಿನಾಯಿತಿಯನ್ನು ನೀಡಬಹುದೆಂದಿದೆ. ನೀವು ಈ ಬಿಲ್ಲಿನಲ್ಲಿಯೂ ಸಹ ಅದಕ್ಕೆ ಸಂಬಂಧಪಟ್ಟಂತೆ ವಿಷಯವನ್ನಿಟ್ಟಿದ್ದೀರಿ. ಇಲ್ಲದಿದ್ದರೆ ನಾನೇಕೆ ಇದರ ಬಗ್ಗೆ ಭಾಷಣ ಮಾಡಬೇಕಾಗಿತ್ತು? ಅದು ಇದ್ದದ್ದರಿಂದ ನಾನು ಮಾತನಾಡಬೇಕಾಯಿತು. ನಾನು ಹೇಳುವುದೇನೆಂದರೆ ಇದು ಮುಗಿದುಹೋಗಿದೆ ಎಂದು ಹರಿಬರಿಯಲ್ಲಿ ಹೋಗಬೇಡಿ. ನಾವು ಹಿಂದೆ ಮಾಡಿರತಕ್ಕ ಅನೇಕ ಬಿಲ್ಲುಗಳನ್ನು ಹಿಂದಕ್ಕೆ ತೆಗೆದುಕೊಂಡಿದ್ದೇವೆ. ಹಿಂದಕ್ಕೆ ತೆಗೆದುಕೊಂಡು ಪುನಃ ತಿದ್ದುಪಡಿಯನ್ನು ತಂದಿದ್ದೇವೆ. ನೀವು ಇದರ ಬಗ್ಗೆ ಪುನಃ ಯೋಚನೆ ಮಾಡಿದರೆ ಒಳ್ಳೆಯದು. ಏಕೆಂದರೆ ನೀವು ಆ ವರ್ಗದ ಹಿತಚಿಂತಕರಾಗಬೇಕು, ನೀವು ಆ ವರ್ಗದವರ ನಾಯಕತ್ವವನ್ನು ವಹಿಸಬೇಕು. ನಮ್ಮ ಚಿಂತನೆ ಮತ್ತು ನಾಯಕತ್ವವನ್ನು ವಹಿಸದಿದ್ದರೆ ಇವುಗಳೆಲ್ಲ ಆಗುವುದಿಲ್ಲ. ನಾವು ಸಾರ್ವಜನಿಕ ಭಾಷಣದಲ್ಲಿ ಹೇಳುವುದಕ್ಕೂ, ಶಾಸನ ಸಭೆಯಲ್ಲಿ ಕಾನೂನನ್ನು ಮಾಡಿ ಸಮಾಜದ ಮೇಲೆ ಅಪಾರ ಪರಿಣಾಮವಾದ ವಿಚಾರವನ್ನು ಮಾಡಿ ಕಾನೂನು ತರುವುದಕ್ಕೂ ಬಹಳ ವ್ಯತ್ಯಾಸವಿದೆ. ಆದ್ದರಿಂದ ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ, ನಮ್ಮ ಅನೇಕ ಮಿತ್ರರೇನು ಸಲಹೆಯನ್ನು ಕೊಟ್ಟಿದ್ದಾರೆ ಅದೊಂದು ಮಾತ್ರವಲ್ಲ ಇನ್ನೂ ಅನೇಕ ವಿಚಾರವನ್ನು ಒಳಗೊಂಡಂತೆ ಈ ಬಿಲ್ಲನ್ನು ಸೀಮಿತಗೊಳಿಸಿ ಇದನ್ನು ಜಾಯಿಂಟ್ ಸೆಲೆಕ್ಟ್ ಸಮಿತಿಗೆ ವಹಿಸಿಕೊಡಿ ಆ ಸಂದರ್ಭದಲ್ಲಿ ನೀವು ಬೇರೆ ಯಾವುದೇ ಇದಕ್ಕೆ ಸಂಬಂಧಪಟ್ಟಂತೆ ವಿಚಾರವನ್ನು ಕೊಡಿ ಚರ್ಚೆ ಮಾಡೋಣ.

ಶ್ರೀ ಆರ್.ಎಲ್. ಜಾಲಪ್ಪ : ತಾವು ಮುಖ್ಯಮಂತ್ರಿಗಳಾಗಿದ್ದಾಗ ನಿಯಮ 109ಕ್ಕೆ ಕೆಲವು ತಿದ್ದುಪಡಿಯನ್ನು ತಂದಿದ್ದಿರಿ. ಎರಡು ಯೂನಿಟ್ ಕೈಗಾರಿಕೆಗಳಿಗೆ, ಒಂದು ಯೂನಿಟ್ ಶಿಕ್ಷಣ ಸಂಸ್ಥೆಗಳಿಗೆ ಕೊಡಬೇಕೆಂದು ಬಿಲ್ಲನ್ನು ತಂದಾಗ

"Certain land to be exempted from certain provisions:

Subject to the provision of Karnataka Town and Country Planning Act, 1961 and such conditions and restrictions as may be specified, the State Government may, by notification, exempt from the provisions of section 79(A), 79(B) or Section 80 any land in any area to be used for industrial development;

Or in the case of educational institution recognised by the State or Central Government from the provisions of Section 79(A) or 79(B) or Section 80 Land in any area be used for non-agricultural purpose provided that the extent of land in respect of...

4.10 ಪಿ.ಎಂ

ಇನ್ನು ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರು ಕ್ಲಾಸ್ ಏನಾದರೂ ಇರಬೇಕಾಗಿತ್ತು, ರಿಸ್ಟ್ರಿಕ್ಷನ್ಸ್ ಇರಬೇಕಾಗಿತ್ತು ಎಂದು ಹೇಳಿದರು. It exists as it is. This Section was already there, and it is already there. This need not be brought in once again.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವು ತಂದಿರತಕ್ಕದ್ದರಲ್ಲಿ ಅದು ಇಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ಅದನ್ನೇನೂ ತರಬೇಕಾದದ್ದು ಇಲ್ಲ. ಅದು ಹಿಂದೆಯೇ ಇದೆ.

This section was already there and it is already there. This need not be brought in once again. That is section 109(2):

"Where-any/condition or restriction specified in the notification under sub-section (1) has been contravened, the State Government may after holding an enquiry as it deems fit cancel the exemption granted under such sub-section and the land in respect of such cancellation has been made shall, as peanalty be forfeited to and vested in State Government free from all encumbrances, no amount is payable thereof``.

That Section is already there.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಸೆಕ್ಷನ್ 109ರಲ್ಲಿ ಓನ್ಲಿ ಟೂ ಸ್ಮಾಲ್ ಅಮೆಂಡ್‌ಮೆಂಟ್ಸ್ ಆಗಿತ್ತು. ಅವು ಯಾವುವೆಂದರೆ, ಒಂದು ಯೂನಿಟ್ ಎಜ್ಯುಕೇಷನಲ್ ಇನ್ಸಟಿಟ್ಯೂಷನ್‌ಗೆ, ಎರಡು ಯೂನಿಟ್ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್‌ಗೆ. ಇದಕ್ಕೆ ಕಾರಣ ಅವರು 'ವಿಶ್ವ' ಎಂಬ ಒಂದು ಹೊಸ

ವಿಲೇಜ್ ಅಂಡ್ ಕಾಟೇಜ್ ಇಂಡಸ್ಟ್ರೀಸ್ ಪ್ರೋಗ್ರಾಂ ಮಾಡಬೇಕು ಎನ್ನತಕ್ಕ ದೃಷ್ಟಿಯಿಂದ, ಅದಕ್ಕೆ ಅವಕಾಶ ಮಾಡಿಕೊಡಬೇಕೆಂಬ ದೃಷ್ಟಿಯಿಂದ ಒಂದು ಯೂನಿಟ್ ಎಜುಕೇಷನ್ ಇನ್ಸ್‌ಟಿಟ್ಯೂಷನ್‌ಗೆ, ಎರಡು ಯೂನಿಟ್ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಎಂದು ತಿದ್ದುಪಡಿ ತಂದರು. ಈ ಎರಡು ದೃಷ್ಟಿ ಮಾತ್ರ ಅದರಲ್ಲಿ ಇತ್ತು.

ಶ್ರೀ ಆರ್. ಎಲ್. ಜಾಲಪ್ಪ : ಇದು ಎರಡಕ್ಕೆ ಮಾತ್ರ ಸೀಮಿತವಾಗಿ ಇಲ್ಲ. ಎರಡು ದೃಷ್ಟಿಯಿಂದ ಮಾತ್ರ ಅವತ್ತು ನೀವು ತಿದ್ದುಪಡಿ ತೆಗೆದುಕೊಂಡು ಬಂದಿರೋ ? Amendment of this Act shall not only benefit.

SRI M. MALLIKARJUNA KHARGE : You have extended further 30 units. ನೀವು ತರುವುದು 20 ಯೂನಿಟ್, 40 ಯೂನಿಟ್ಸ್. ಅಂದರೆ ಎಕರೆ, 200 ಎಕರೆ, 54 ಎಕರೆ, ಈ ರೀತಿಯಾಗಿ ತಾವು ಕೊಡುತ್ತಿದ್ದೀರಿ. ಅದು ಫ್ಲೋರಿಕಲ್ಚರ್ ಇರಬಹುದು, ಹಾರ್ಟಿಕಲ್ಚರ್ ಇರಬಹುದು, ಮಂದಿರ ಇರಬಹುದು, ಮಸೀದಿ ಇರಬಹುದು, ಗುಡಿ ಇರಬಹುದು. ಅದಕ್ಕೆ ಒಂದೊಂದು ಯೂನಿಟ್ ತಂದಿರಿ. ನಿಮ್ಮ ಆಕ್ಷನ್ ಅನ್ನು ಜಸ್ಟಿಫೈ ಮಾಡುವುದಕ್ಕೋಸ್ಕರ ಯಾವುದೋ ತಂದು ಅದಕ್ಕೆ ಹಚ್ಚ ಬೇಡಿ. ಇದು ಸರಿಯಲ್ಲ. ಅದು ಯಾವ ಉದ್ದೇಶಕ್ಕೆ ಮಾಡಿತ್ತು ನೀವು ತಂದಂತಹ ತಿದ್ದುಪಡಿ ಯಾವ ಉದ್ದೇಶಕ್ಕೆ ಆಗಿದೆ, ಅದಕ್ಕೆ ಇದಕ್ಕೆ ಬಹಳ ವ್ಯತ್ಯಾಸ ಇದೆ. ಅದೇ ಒಂದು ನೆಪದಲ್ಲಿ, 'ನೀವು ಮಾಡಿದ್ದೀರಿ' ಎಂದು ಹೇಳಿ, ಅದೇ ರೀತಿ 100 ಎಕರೆ, 200 ಎಕರೆ ಕೊಡುತ್ತೇವೆ ಎನ್ನುವುದು ಬೇಡ. please don't extend your scope to injure other farmers....

ಶ್ರೀ ಆರ್.ಎಲ್. ಜಾಲಪ್ಪ : ನೀವು ಆ ರೀತಿ ತಿದ್ದುಪಡಿ ಮಾಡಿದಿರಿ ಎಂದು ಹೇಳಿ ಅದರ ಕೆಳಗಡೆ ನಾನೇನೂ ಪ್ರೊಟೆಕ್ಷನ್ ತೆಗೆದುಕೊಳ್ಳಬೇಕಾದುದು ಅನಾವಶ್ಯಕ. 'ನಾನು ಅಂದರೆ ನನ್ನ ಸರ್ಕಾರ.' ಇದನ್ನು ನಮ್ಮ ಸರ್ಕಾರ ಬಹಳ ದೀರ್ಘವಾಗಿ ಯೋಚನೆ ಮಾಡಿ ಏನು ಆಗಬೇಕೆಂದು ಯೋಚಿಸಿ ತಂದಿದ್ದೇವೆ, ನೀವು ಈ ಚಿಂತನೆ ಮಾಡಿದ್ದಿರಿ that was a sagacious decision of yours also ಎಂದು ಹೇಳಿದೆ. ಅದು ಅಲ್ಲ ಅಂದರೆ ಬಿಡಿ, ಅದಕ್ಕೆ ನನ್ನದೇನೂ ಅಭ್ಯಂತರ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಜಾಲಪ್ಪನವರೇ ಒಂದು ನಿಮಿಷ. ತಮಗೆ ಮಾನ್ಯ ಬಂಗಾರಪ್ಪನವರು ಸಲಹೆ ಕೊಟ್ಟಂತೆ ನೀವು ಸದುದ್ದೇಶದಿಂದ ಈ ತಿದ್ದುಪಡಿ ತಂದಿದ್ದರೆ ನಾವು ಒಪ್ಪುತ್ತಿದ್ದೆವು. ನಾವು ಬಿ.ಎ.ಸಿ. ಮೀಟಿಂಗ್‌ನಲ್ಲಿ ಏನು ಸಲಹೆ ಕೊಟ್ಟಿದ್ದೆವು. ಅಲ್ಲಿ ನಾವೆಲ್ಲರೂ ಇದ್ದೆವು, ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿಕೊಡಿ, ದೀರ್ಘವಾಗಿ ನೋಡೋಣ, ಇಲ್ಲಿ ಏನೇನು ತಪ್ಪಿವೆ ಇದರಲ್ಲಿ ಏನೇನು ಕೊರತೆಗಳಿವೆ, ಅದರ ದುಷ್ಪರಿಣಾಮಗಳು ಏನಿವೆ ಅದರ ಬಗ್ಗೆ ಮಾತನಾಡೋಣ. ಅದರ ಆಧಾರದ ಮೇಲೆ ನೀವು ಡಿಸಿಷನ್ ತೆಗೆದುಕೊಳ್ಳಿ ಎಂದು ನಾವು ಹೇಳಿದ್ದೆವು. ಈಗ ನೀವೇನು 109ರ ಪ್ರಕಾರ ಈ ಒಂದು ತಿದ್ದುಪಡಿಯನ್ನು ತರಲಿಕ್ಕೆ ಹೊರಟಿದ್ದೀರಿ, 20 ಯೂನಿಟ್, 40 ಯೂನಿಟ್ ಮಾಡುವುದರ ಬದಲು ಇಡೀ ಕರ್ನಾಟಕವನ್ನೇ ಮಾರಬಹುದಲ್ಲಾ ಜಾಲಪ್ಪನವರೇ. ಬರೀ ನಮ್ಮ ರಾಜ್ಯ ಅಲ್ಲ, ನಮ್ಮ ದೇಶ ಅಲ್ಲ, ಯಾವನು ಬೇಕಾದರೂ ಇಲ್ಲಿ ಬಂದು

ಯೂನಿಟಗಳನ್ನು ಕೊಂಡುಕೊಡು ಇವತ್ತು ಮಜಾಮಾಡಿಕೊಂಡು ಹೋಗಬಹುದು. ನೀವು ಅದನ್ನು ಮಾಡಿದಂತಾಗಲಿಲ್ಲವೇ?

ಶ್ರೀ ಆರ್.ಎಲ್. ಜಾಲಪ್ಪ : ದುರದೃಷ್ಟವಶಾತ್ ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಏನು ನಡೆಯುತ್ತಿದೆ ಎಂಬುದರ ಪೂರ್ಣ ಅರಿವು ಇಲ್ಲ. ನಾನು ಹೀಗೆ ಹೇಳುತ್ತೇನೆ ಎಂದು ತಾವು ಬೇಜಾರು ಮಾಡಿಕೊಳ್ಳಬೇಡಿ. ಇವತ್ತು ಕರ್ನಾಟಕ ಒಂದೇ ಅಲ್ಲ, ಇಡೀ ರಾಷ್ಟ್ರದಲ್ಲಿ ಎಲ್ಲಿ ಯಾವ ರಾಜ್ಯದಿಂದ ಎಲ್ಲಿಗೆ ಹೋದರೂ ಜಮೀನು ಕೊಂಡುಕೊಳ್ಳಬಹುದು. ಜಮ್ಮು ಅಂಡ್ ಕಾಶ್ಮೀರ ಅನ್ನು ಬಿಟ್ಟು ಉಳಿದೆಲ್ಲಾ ರಾಜ್ಯಗಳಿಗೆ ಇದು ಅನ್ವಯಿಸುತ್ತದೆ. ಕರ್ನಾಟಕದಲ್ಲೂ ಯಾರು ಬೇಕಾದರೂ - ಜಮೀನು ಕೊಳ್ಳುವವನು ಬಂದು ಕೊಂಡುಕೊಳ್ಳಬಹುದು. ಇದಕ್ಕೆ ಅವನು ಏನು ಕೊಡಬೇಕಾಗಿರುವುದು ಎಂದರೆ, ಹಿಂದೆ 50 ಸಾವಿರ ರೂ.ಗಳಿಗೆ ಆದಾಯ ಮಿತಿ ಇರುವುದು ಕಡಿಮೆ ಇದೆ ಎಂದು ನಾವು ಅದನ್ನು ಈಗ 2 ಲಕ್ಷ ಮಾಡಿದ್ದೇವೆ. ಕೊಂಡುಕೊಳ್ಳುವವನು 'ನಾನು ಜಮೀನುದಾರ' ಎನ್ನುವುದಕ್ಕೆ ಒಂದು ಪುರಾವೆ ಕೊಡಬೇಕು. ಮತ್ತು ಪಹಣಿ ಕಾಪಿ ಕೊಡಬೇಕು. ಇಷ್ಟು ಕೊಟ್ಟು ಬಿಟ್ಟರೆ ಅವನು ಪರ್ಚೇಸ್ ಮಾಡಬಹುದು. ಇವತ್ತಿಗೂ ಪರ್ಚೇಸ್ ಮಾಡಬಹುದು. ಏನೂ ರಿಸ್ಟ್ರಿಕ್ಷನ್ಸ್ ಇಲ್ಲ. ನೀವು ಯಾವುದೇ ರಾಜ್ಯಕ್ಕೆ ಹೋದರೂ ಈ ರೀತಿ ಇದೆ. ನಮ್ಮ ಹತ್ತಿರ 5-6 ರಾಜ್ಯಗಳ ವಿಧೇಯಕಗಳ ಪ್ರತಿ ಇದೆ, ನಾನು ಅದನ್ನು ತರಿಸಿದ್ದೇನೆ. ಯಾರು ಎಲ್ಲಿಗೆ ಬೇಕಾದರೂ ಹೋಗಿ ಜಮೀನು ಕೊಳ್ಳಬಹುದು, ಜಮ್ಮು ಅಂಡ್ ಕಾಶ್ಮೀರ ಬಿಟ್ಟು.

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾವ ಖಾಸಗಿ ಕಂಪನಿಗಳು ಎಲ್ಲಿಗೆ ಬೇಕಾದರೂ ಹೋಗಿ ಭೂಮಿ ಕೊಂಡುಕೊಳ್ಳಬಹುದು ಎಂಬ ಪ್ರಾವಿಷನ್ ಯಾವ ರಾಜ್ಯದಲ್ಲಿ ಮಾಡಿದ್ದಾರೆ ಎಂಬುದನ್ನು ಹೇಳಿ ನೋಡೋಣ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವು ಸಂವಿಧಾನಬದ್ಧವಾದ ಹಕ್ಕುಗಳ ಬಗ್ಗೆ ಹೇಳುತ್ತಿದ್ದೀರಿ. ಎಲ್ಲಿ ಯಾರೂ ಬೇಕಾದರೂ ಜಮೀನು ತೆಗೆದುಕೊಳ್ಳಬಹುದು ಅಂತ. ಅದೇನು ರಿಸ್ಟ್ರೀಕ್ಷನ್ಸ್ ಇಲ್ಲ, ಎಲ್ಲೂ ಕೂಡ. ಇಲ್ಲಿ ಪ್ರಶ್ನೆ ಬಂದಿರತಕ್ಕದ್ದು, ಕೃಷಿ, ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕೋಸ್ಕರ ಬಳಸತಕ್ಕ ಪ್ರಶ್ನೆ ಮೊದಲನೆಯದು. ಎರಡನೆಯದು ಇಲ್ಲಿರತಕ್ಕದ್ದು ಕಾನೂನು ಮತ್ತು ಲಾಜಿಕ್ ಅಲ್ಲ. It is not the question of law and logic. It is the question of humanity and justice. It is not only the point of law and logic, it is the question of justice and humanity. ಯಾರೂ ಬಂದು ಕೊಂಡುಕೊಳ್ಳಬಹುದು ಎಂಬ ರಿಸ್ಟ್ರೀಕ್ಷನ್ಸ್ ಇರಲಿಲ್ಲ. ಆದರೆ ಈ ಭೂ ಸುಧಾರಣಾ ಕಾನೂನಿಗೆ ಒಂದು ನಿರ್ದಿಷ್ಟವಾದಂತಹ ಉದ್ದೇಶ ಇದೆ. ಅದಕ್ಕೋಸ್ಕರ ಇಲ್ಲಿ ಪ್ರಶ್ನೆ ಇರತಕ್ಕದ್ದು. ಕಾರ್ಖಾನೆ ಸ್ಥಾಪನೆ ಆಗಬೇಕು ಅಂತಲ್ಲ. ಇದಕ್ಕೆ ಮೊದಲು ಹಾಗಾದರೆ ಕಾರ್ಖಾನೆಗಳಿರಲಿಲ್ಲವೇ? ಈ ತಿದ್ದುಪಡಿ ಆಗುವುದಕ್ಕೆ ಮೊದಲು ಬೆಂಗಳೂರು ನಗರದ ಸುತ್ತಮುತ್ತಲೂ ಯಾವ ಕಾರ್ಖಾನೆಗಳು ಸ್ಥಾಪನೆಯಾಗಿರಲಿಲ್ಲವೇ ಅಥವಾ ಇಡೀ ರಾಷ್ಟ್ರದಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ಕಾರ್ಖಾನೆಗಳು ಸ್ಥಾಪನೆಯಾಗಿರಲಿಲ್ಲವೇ? ಅಲ್ಲಿ ಭೂಮಿ ಹೇಗೆ ಸಿಕ್ಕಿತ್ತು? ಈ ಮಧ್ಯೆ ಈ ತಿದ್ದುಪಡಿ ತರುವುದಕ್ಕೆ

ಮೊದಲು 1991-95ರ ನಡುವೆ ಕಾರ್ಖಾನೆಗಳು ಸ್ಥಾಪನೆಯಾಗಿರಲಿಲ್ಲವೇ? ಅವರಿಗೆ ಭೂಮಿ ಎಲ್ಲಿಂದ ಬಂದಿತು? ಅವರಿಗೋಸ್ಕರ ಮಾತ್ರ ಇವತ್ತು ತಿದ್ದುಪಡಿ ತರತಕ್ಕಂತಹ ಅವಶ್ಯಕತೆ ಏನಿದೆ? ಇಲ್ಲಿರತಕ್ಕ ಪ್ರಶ್ನೆ ಇದು. ಬರೀ ಕಾನೂನು ಮತ್ತು ಲಾಜಿಕ್ ಎಂದು ಹೇಳತಕ್ಕಂತದ್ದಲ್ಲ. ಇಲ್ಲಿ ಹ್ಯೂಮಾನಿಟಿ ಮತ್ತು ಜಸ್ಟೀಸ್ ಪ್ರಶ್ನೆ ಇದೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಉಪಾಧ್ಯಕ್ಷರೇ, ಅದಕ್ಕಾಗಿ ನಾನು ಈ ವಿಷಯವನ್ನು ತಿಳಿಸುತ್ತಿದ್ದೆ. ಪ್ರಾಮುಖ್ಯವಾದಂತಹ ವಿಷಯಗಳು ಈ ತಿದ್ದುಪಡಿಯಲ್ಲಿ ಬಂದಿರತಕ್ಕ ಅಂಶಗಳಾಗಿವೆ. ಇದಕ್ಕೆ ಸಂಬಂಧಪಟ್ಟಂತಹ ಒಂದು ಪೂರ್ವ ಇತಿಹಾಸ ಸ್ಪಷ್ಟನೆ ನಮಗೆ ಮೂಲತಃ ಇಲ್ಲದಿದ್ದರೆ, ಈ ಉದ್ದೇಶ ಅಳಿದು ಹೋಗಬಹುದು ಎನ್ನತಕ್ಕ ಅಂಶ ಗಮನದಲ್ಲಿರಲಿ ಎನ್ನುವ ಸದುದ್ದೇಶದಿಂದ ನಾವು ಈ ವಿಚಾರವನ್ನು ತಮ್ಮ ಗಮನಕ್ಕೆ ತಂದಿದ್ದೇವೆ. The net result of all these amendmens is going to have a lot of impact on the whole system itself. ಅದಕ್ಕೆ ನಾನೇನು ಸಲಹೆ ಮಾಡುತ್ತೇನೆ ಎಂದರೆ ಇದಕ್ಕೆ ಒಂದು ಜಾಯಿಂಟ್ ಸೆಲೆಕ್ಟ್ ಕಮಿಟಿ ಮಾಡಿದರೆ ಅದರಿಂದೇನೂ ತಪ್ಪು ಆಗುವುದಿಲ್ಲ. ನೀವು ಅನ್ನಬಹುದು, ಈ ತಿದ್ದುಪಡಿಯಲ್ಲಿರುವುದು ಒಂದೇ ಸೆಕ್ಷನ್ ಎಂದು. ಹಾಗೆ ಏಕೆ ಮಾಡಲಿಕ್ಕೆ ಹೋಗುತ್ತೀರಿ? ಅಮೂಲಾಗ್ರವಾಗಿ ನಾವು ಚರ್ಚೆ ಮಾಡೋಣ. ಆಮೇಲೆ ಬನ್ನಿ. ಜಂಟಿ ಸದನ ಸಮಿತಿ ಕೊಡುವ ವರದಿ ಚೆನ್ನಾಗಿ ಬಂದು, ನಿಜ ಒಳ್ಳೆಯ ಉದ್ದೇಶ ಈ ತಿದ್ದುಪಡಿಗೆ ಇದೆ ಎಂಬ ಅಭಿಪ್ರಾಯ ಅದರಲ್ಲಿ ಬಂದರೆ, ಆಗ ಈ ತಿದ್ದುಪಡಿ ಜಾರಿಗೆ ತರತಕ್ಕದ್ದು ಸೂಕ್ತವೆದು ನನಗನಿಸುತ್ತದೆ. ಈ ದೃಷ್ಟಿಯಿಂದ ನಾನು ಈ ಸಲಹೆ ಕೊಟ್ಟಿದ್ದೇನೆ. ಸ್ವಲ್ಪ ದಯವಿಟ್ಟು ಈ ಬಗ್ಗೆ ವಿಚಾರ ಮಾಡಿ. ಆದರೆ ಇದರ ಮೂಲ ಉದ್ದೇಶವೇ ಅಳಿದು ಹೋಗವುದರಿಂದಾಗಿ ಇದನ್ನು ನಾನು ವಿರೋಧ ಮಾಡುತ್ತೇನೆ ಎಂಬ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ.

+ ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಉಪಾಧ್ಯಕ್ಷರೇ, ನಮ್ಮ ಕರ್ನಾಟಕ ರಾಜ್ಯದಲ್ಲಿ ಭೂ ಸುಧಾರಣೆ ವಿಚಾರದಲ್ಲಿ ಕಳೆದ 50 ವರ್ಷಗಳಿಂದ ರಾಜಕೀಯ ಪಕ್ಷಗಳು ಅವರವರ ಸಿದ್ಧಾಂತಗಳ ಮೇಲೆ ಬೆಳಕನ್ನು ಚೆಲ್ಲಿದ್ದಾರೆ. ಹಾಗೆಯೇ ವ್ಯಕ್ತಿಗಳೂ ಸಹ ಈ ಭೂ-ಸುಧಾರಣೆ ವಿಚಾರದಲ್ಲಿ ಅವರವರ ಅನುಭವ, ಅವರವರ ಪ್ರದೇಶಕ್ಕೆ ಅನುಗುಣವಾಗಿರತಕ್ಕ ವಾಸ್ತವಾಂಶಗಳನ್ನು ಒಳಗೊಂಡ ವಿಚಾರಗಳ ಬಗ್ಗೆ ತಿದ್ದುಪಡಿಯಾಗಲೀ ಅಥವಾ ಮೂಲಭೂತವಾದಂತಹ ತಿದ್ದುಪಡಿಗಳ ಬಗ್ಗೆಯಾಗಲೀ ಅವರ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಇದೊಂದು ಬಹಳ ಮಹತ್ತವಾದಂತಹ ತಿದ್ದುಪಡಿಯಾದ್ದರಿಂದ, ಇಲ್ಲಿರತಕ್ಕ ನಾವೆಲ್ಲರೂ ಸಹ ಹೆಚ್ಚಾಗಿ ಕೃಷಿ ಸಮಾಜದಿಂದ ಬಂದಿರತಕ್ಕವರೇ ಆಗಿರುವುದರಿಂದ ಈ ಬಗ್ಗೆ ಭಿನ್ನಾಭಿಪ್ರಾಯಗಳು ಬರತಕ್ಕದ್ದು ಸಹಜ. ಆ ಭಿನ್ನಾಭಿಪ್ರಾಯಗಳು ಆಯಾ ಪ್ರದೇಶಕ್ಕೆ ಅನುಗುಣವಾಗಿರಬಹುದು ಅಥವಾ ಆ ವ್ಯಕ್ತಿಗಳ ಸಿದ್ಧಾಂತಕ್ಕೆ ಅನುಗುಣವಾಗಿರಬಹುದು ಅಥವಾ ರಾಜಕೀಯ ಪಕ್ಷಗಳ ಸಿದ್ಧಾಂತಕ್ಕೆ ಅನುಗುಣವಾಗಿ ಸಹ ಇರಬಹುದು. ನಾವೂ ಸಹ 1972 ರಿಂದ ದಿವಂಗತ ದೇವರಾಜ್ ಅರಸ್, ಹುಚ್ಚಮಾಸ್ತಿಗೌಡ, ಬಾಲಸುಬ್ರಮಣ್ಯರಂತಹವರು ಕಂದಾಯ ಸಚಿವರಾಗಿ ಹಾಗೂ ಕಂದಾಯ ಕಾರ್ಯದರ್ಶಿಗಳಾಗಿ ಕೆಲಸ ಮಾಡಿದಂತಹ ಅನೇಕ ಜನರು ಈ ಭೂ

ಸುಧಾರಣಾ ವಿಚಾರದಲ್ಲಿ ಬಹಳಷ್ಟು ಚರ್ಚೆ ಮಾಡಿದ ದಿನಗಳನ್ನು ನೋಡಿದ್ದೇವೆ. ಈ ಭೂ ಸುಧಾರಣೆ ಮುಖ್ಯವಾಗಿ ಮೂರು ಹಂತಗಳಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲಿ ತಲೆದೋರಿತು ಎಂದು ನಾನು ಅಂದುಕೊಂಡಿರುತ್ತೇನೆ. ಮಾನ್ಯ ಕಡಿದಾಳ್ ಮಂಜಪ್ಪನವರು ಈ ಕಾಯ್ದೆಯನ್ನು 1961ರಲ್ಲಿ ತಂದು 1966ರಲ್ಲಿ ಜಾರಿಗೆ ಕೊಟ್ಟರು. ಆ ಭೂ ಸುಧಾರಣೆಯ ಉದ್ದೇಶವೇ ಬೇರೆ ಇತ್ತು. ಅದನ್ನು ಆಗಲೇ ನಮ್ಮ ಅನೇಕ ಹಿರಿಯ ಸ್ನೇಹಿತರುಗಳು, ಕಂದಾಯ ಮಂತ್ರಿಗಳಾಗಿ ಕೆಲಸ ಮಾಡಿದಂತಹವರು, ಇನ್ನಿತರ ಮುಖಂಡರುಗಳು ಅವರವರ ಸಿದ್ಧಾಂತಗಳ ಮೇಲೆ ಹೇಳಿದ್ದಾರೆ. ಮಾನ್ಯ ಕಡಿದಾಳ್ ಮಂಜಪ್ಪನವರ 1961-1996ರ ನಡುವಿನ ಭೂ ಸುಧಾರಣೆ ಬಗೆಗೆ ಗೇಣಿದಾರರ ಹೋರಾಟ ಆ ದಿನಕ್ಕೆ ಯಾವ ರೀತಿ ಹೊಂದಾಣಿಗೆ ಆಗಿತ್ತು ಎಂದರೆ, ಆ ದಿವಸ ಅಷ್ಟು ಜಾಸ್ತಿ ಜನ ಗೇಣಿ ಮಾಡುತ್ತಿದ್ದರು. ಇದು ಮೊದಲನೇ ಹಂತದ ಭೂ ಸುಧಾರಣೆ. ಎರಡನೇ ಹಂತದ ಭೂ ಸುಧಾರಣೆ ಏನೆಂದರೆ ದಿವಂಗತ ದೇವರಾಜಅರಸ್, ಹುಚ್ಚಮಾಸ್ತಿಗೌಡ ಬಾಲಸುಬ್ರಮಣ್ಯಂರವರು ತಂದಂತಹ ಭೂ ಸುಧಾರಣೆ. ಆ ಭೂ ಸುಧಾರಣೆಯಲ್ಲಿ ಒಂದು ಸಾಮಾಜಿಕವಾದಂತಹ...

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ...

ಶ್ರೀ ಕೆ.ಎನ್. ನಾಗೇಗೌಡ : ತಾವು ಆಗಲೇ ಮಾತನಾಡಿದ್ದೀರಿ. ನಾವು ಮಾತನಾಡುವುದು ಸ್ವಲ್ಪ ನೀವು ಕೇಳಬೇಕು. ಈ ಬಿಲ್ ವಿಚಾರದಲ್ಲಿ ಒಬ್ಬೊಬ್ಬರು ಅವರವರ ಸಿದ್ಧಾಂತಗಳ ಮೇಲೆ ಹೇಳಿದ್ದಾರೆ. ಮಾನ್ಯ ಸದಸ್ಯರಾದ ವೈ.ರಾಮಕೃಷ್ಣರವರು ಈ ಬಗ್ಗೆ ಮಾತನಾಡುತ್ತಾ, ಈ ಬಗ್ಗೆ ಒಂದು ನ್ಯಾಷನಲ್ ಪಾಲಿಸಿ ಮಾಡಬೇಕೆಂದು ಹೇಳಿದರು. ನ್ಯಾಷನಲ್ ಪಾಲಿಸಿ ಮಾಡಬೇಕೆನ್ನುವ ಬಗ್ಗೆ ಡಿಸ್ಕಷನ್ ಮಾಡುವಾಗ ಪ್ರಾರಂಭದಲ್ಲಿ ಅವರು ಆ ರೀತಿ ಹೇಳಿದರು. ಬ್ಯಾಂಕಗಳ ರಾಷ್ಟ್ರೀಕರಣ, ಪಬ್ಲಿಕ್ ಸೆಕ್ಟರ್‌ಗಳ ರಾಷ್ಟ್ರೀಕರಣ ಏನಾಗಿದೆ, ಅದೇ ರೀತಿ ಈ ಭೂಮಿಯನ್ನು ರಾಷ್ಟ್ರೀಕರಣ ಮಾಡಬೇಕು, ಈ ಬಗ್ಗೆ ನ್ಯಾಷನಲ್ ಪಾಲಿಸಿ ಮಾಡಬೇಕು ಎಂಬ ಸಿದ್ಧಾಂತವನ್ನು ಮಾನ್ಯ ರಾಮಕೃಷ್ಣರವರು ಮಾತನಾಡುತ್ತಾ ಹೇಳಿದರು. ಆ ಸಿದ್ಧಾಂತವೇ ಬೇರೆ. 1961-66ರಲ್ಲಿ ಮಾನ್ಯ ಕಡಿದಾಳ್ ಮಂಜಪ್ಪನವರು ಮಾಡಿದ ವಿಚಾರಗಳೇ ಬೇರೆ.

1974ರಲ್ಲಿ ಶ್ರೀಮಾನ್ ದೇವರಾಜ್ ಅರಸರವರು ಮಾಡಿದ ವಿಚಾರ ಬೇರೆ. ತದನಂತರ ಸುಮಾರು 30-40 ಸಾರಿ ತಿದ್ದುಪಡಿ ಆಗಿದೆ. ಭೂಸುಧಾರಣೆ ಕಾಯಿದೆಗೆ ಹೊಸ ತಿದ್ದುಪಡಿ ಏನೂ ಅಲ್ಲ. ಕಾನೂನು ಎಷ್ಟು ಸಾರಿ ತಿದ್ದುಪಡಿ ಆಗಿದೆ, ಅದರಿಂದ ಒಬ್ಬೊಬ್ಬರು ಒಂದೊಂದು ನೀತಿಯನ್ನು ಹೇಳುತ್ತಾರೆ. ಎರಡು ಹಂತದಲ್ಲಿ ನಾವು ವಿಚಾರ ಮಾಡಬೇಕಾಗಿದೆ. ಆಡಳಿತ ಒಂದನೆಯ ಹಂತ ಆದರೆ, ಎರಡನೆಯ ಹಂತ ದೇವರಾಜ ಅರಸರವರ ಕಾಲದಲ್ಲಿ ಆಯಿತು. ಆದರಲ್ಲಿ ಒಳ್ಳೆಯದನ್ನು ನಾವು ನೋಡಿದ್ದೇವೆ. ಲ್ಯಾಂಡ್ ಟ್ರಿಬ್ಯುನಲ್ ಬಂದಿತು. ಅಲ್ಲಿ ನಾವು 100 ಕ್ಕೆ 70 ಭಾಗ 80 ಭಾಗ ಒಳ್ಳೆಯದನ್ನು ನೋಡಿದ್ದೇವೆ, ಕೆಟ್ಟದ್ದನ್ನೂ ನಾವು ನೋಡಿದ್ದೇವೆ. ನಾವು ಗೇಣಿದಾರರು ಎಂದು ಕರೆದುಕೊಂಡು, ಬಡವರು ಭೂಮಿ ಕಳೆದು ಕೊಳ್ಳುತ್ತಾರೆ, ಶ್ರೀಮಂತರು ಭೂಮಿ ಕಳೆದುಕೊಳ್ಳುತ್ತಾರೆ, ಎನ್ನತಕ್ಕಂತಹ ದೂರುಗಳನ್ನು ತಾವುಕೇಳಿದ್ದೀರಿ. ನಮ್ಮ ಶ್ರೀರಂಗಪಟ್ಟಣದ ಸದಸ್ಯರಾದ ಶ್ರೀಮತಿ

ವಿಜಯಲಕ್ಷ್ಮಿ ಬಂಡಿಸಿದ್ದೇಗೌಡರು ಕುಳಿತಿದ್ದಾರೆ. ಈ ಸಂದರ್ಭದಲ್ಲಿ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್‌ನಲ್ಲಿ ಎಡವರೇ ಭೂಮಿ ಕಳೆದುಕೊಂಡಿದ್ದಾರೆ, ಶ್ರೀಮಂತರು ಭೂಮಿ ಉಳಿಸಿಕೊಂಡಿರತಕ್ಕಂಥದ್ದನ್ನು ನಾವು ನೋಡಿದ್ದೇವೆ. ಹೀಗೆ ನಡಿದಿದೆ, ಇದು ಬೇರೆ ವಿಚಾರ. ಇದರಲ್ಲಿ 10 ಪರ್ಸೆಂಟ್ ಇರಬಹುದು, 90 ಪರ್ಸೆಂಟ್ ಗೇಣಿದಾರರು ಇರಬಹುದು. ನಿಜ ಅದಕ್ಕೆ ಉತ್ತರ ಕನ್ನಡ ಜಿಲ್ಲೆಗೆ ಅಥವಾ ನಾರ್ತ್ ಕರ್ನಾಟಕ ಜಿಲ್ಲೆಗಳಿಗೆ ಹೋಲಿಸಿದಾಗ ಅತ್ಯಂತ ಸಮರ್ಪಕವಾದ ಭೂಸುಧಾರಣಾ ಕಾಯಿದೆಯನ್ನು ತಂದಿದ್ದೇವೆ. ಅದೇ ರೀತಿಯಲ್ಲಿ ಚಿಕ್ಕಮಗಳೂರು ಆಗುವುದಿಲ್ಲ. ಒಂದೊಂದು ಜಿಲ್ಲೆಗೆ ಒಂದೊಂದು ಪರಿಸರಕ್ಕೆ, ವ್ಯವಸ್ಥೆಗೆ ಅನುಗುಣವಾಗಿ ಈಸುಧಾರಣೆಗಳನ್ನು ನಾವು ನೋಡಿಕೊಂಡು ಬಂದಿದ್ದೇವೆ. ಅದು ಎರಡನೇ ಹಂತದಲ್ಲಿ ದೇವರಾಜಅರಸ್ ರವರಿಗೂ ಒತ್ತಾಯ ತಂದಿದ್ದೆ. ಈಗ ನಮ್ಮ ಸರ್ಕಾರದವರು ತಂದಿರುವುದು ಮೂರನೇ ಹಂತದ ಸುಧಾರಣೆ. ಇದು ಒಳ್ಳೆಯದು ನಿಜ. ನಮ್ಮ ಸ್ನೇಹಿತರು ಮಾತನಾಡಿದ ರೀತಿಯಲ್ಲಿ ಅತ್ಯಂತ ಮಹತ್ತರವಾದ ಬದಲಾವಣೆ ಇದು. ಇದರಲ್ಲಿ ಎರಡು ಮಾತಿಲ್ಲ. ಈ ಬದಲಾವಣೆಯಲ್ಲಿ ಪ್ರಯೋಜನ ಎಷ್ಟು ಅಪ್ರಯೋಜನ ಎಷ್ಟು ಎಂಬುದನ್ನು ನೋಡಬೇಕು. ಯಾವುದೇ ಕಾನೂನು, ಯಾವುದೇ ಕಾಯಿದೆ ಇದ್ದರೂ ಪಾಸಿಟೀವ್ ಇರುತ್ತದೆ, ನೆಗೇಟಿವ್ ಕೂಡ ಇರುತ್ತದೆ. ಅಡವಾಂಟೇಜಸ್ ಇರುತ್ತವೆ, ಡಿಸ್-ಅಡವಾಂಟೇಜಸ್ ಇರುತ್ತವೆ. ಎರಡನ್ನೂ ನಾವು ಆಲೋಚನೆ ಮಾಡಬೇಕಾಗುತ್ತದೆ. ಹೌದು ಇವತ್ತಿನ ದಿವಸ ಸಹಸ್ರಾರು ಜನ ಸಣ್ಣ ರೈತರು ಭೂಮಿಯನ್ನು ಕಳೆದುಕೊಳ್ಳುತ್ತಾರೆನ್ನುವ ಮಾತನ್ನು ಅಡಿದರು. ನಾನು ಒಂದು ಅಂಕಿ ಅಂಶವನ್ನು ತಮಗೆ ಕೊಡುವುದಾದರೆ 1961 ರಲ್ಲಿ ನಮ್ಮ ರೈತರು ಸಣ್ಣ ರೈತರು 54 ಪರ್ಸೆಂಟ್ ಎಷ್ಟು ಜನ ರೈತರು ಇದ್ದಾರೆ ಇವರಲ್ಲಿ 54 ಪರ್ಸೆಂಟ್ ಸ್ಮಾಲ್ ಫಾರ್ಮರ್ಸ ಇದ್ದಾರೆ. 1961ರ ಸೆನ್ಸಸ್‌ನಲ್ಲಿ 39 ಪರ್ಸೆಂಟಗೆ ಬಂದರು. ಆದರೆ ಸಣ್ಣ ರೈತರು ಯಾರಿದ್ದಾರೆ ಅವರು ನ್ಯಾಚುರಲ್ಲಾಗಿ ಡಿಕ್ರೀಸ್ ಆಗುತ್ತಾರೆ. ಇವತ್ತು ಜಾಲಪ್ಪನವರು ತಂದ ಬಿಲ್‌ನಲ್ಲಿ ಡಿಕ್ರೀಸ್ ಆಗುವುದಿಲ್ಲ. ಅದು ಯಾವಾಗ ಕುಟುಂಬಗಳು ಒಡೆದು 3-4 ಮಕ್ಕಳು ಆಗುತ್ತಾರೆ, ಮಕ್ಕಳು ಆದ ಮೇಲೆ ಮೊಮ್ಮಕ್ಕಳು ಆಗುತ್ತಾರೆ, ಮೊಮ್ಮಕ್ಕಳು ಆದ ಮೇಲೆ ಮರಿ ಮೊಮ್ಮಕ್ಕಳು ಆಗುತ್ತಾರೆ. ಜಮೀನು ಪಾಲು ಹಂಚಿಕೆ ಆಗುತ್ತಾ ನಮ್ಮ ಮುತ್ತಾತನ ಕಾಲದಲ್ಲಿ100ಎಕರೆ ಇದ್ದರೆ ನಮ್ಮತಂದೆ ಕಾಲದಲ್ಲಿ20ಎಕರೆ ಬಂದಿತು. ನಿಮ್ಮಕಾಲದಲ್ಲಿ ಐದು ಎಕರೆಗೆ ಬರುತ್ತಿದೆ. ನಮ್ಮ ಮಕ್ಕಳ ಕಾಲಕ್ಕೆ ಕಡಿಮೆಯಾಗುತ್ತದೆ. ಈ ಸಣ್ಣ ಹಿಡುವಳಿದಾರರು ರೆಡ್ಯೂಸ್ ಆಗತಕ್ಕಂಥದ್ದು ಸೆನ್ಸಸನಲ್ಲಿ ಬಂದು ಬಿಟ್ಟಿದೆ. 1961ರಿಂದ 1991ರಲ್ಲಿ 23ಪರ್ಸೆಂಟ್ ಸಣ್ಣ ರೈತರು ಕಡಿಮೆ ಆಗಿರತಕ್ಕಂಥದ್ದನ್ನು ನಮ್ಮ ಮಾಹಿತಿ ಪ್ರಕಾರ ಗೊತ್ತಾಗುತ್ತದೆ. ಆದರಿಂದ ಈ ಕಾಯಿದೆಯಿಂದ ಸಣ್ಣ ರೈತರು ಜಾಸ್ತಿಯಾಗುತ್ತಾರೆ, ಜಮೀನು ಕಳೆದುಕೊಳ್ಳುತ್ತಾರೆ ಎನ್ನತಕ್ಕಂಥದ್ದು ಅಲ್ಲ. ಈ ಜಮೀನು ಕಳೆದುಕೊಂಡು ಕಾರ್ಮಿಕರು ಬೀದಿ ಪಾಲಾಗಿದ್ದಾರೆ ಎಂದು ಹೇಳುತ್ತೇವೆ ನಿಜ. ಅದರ ಒಂದು ಅಂಕಿ ಅಂಶವನ್ನು ನಾನು ಕೊಡುತ್ತೇನೆ. ಈ ಭೂ ಹಿಡುವಳಿ ಕಾರ್ಮಿಕರು 1961ರಲ್ಲಿ 16 ಪರ್ಸೆಂಟ್ ಇದ್ದರು, ಜಾಸ್ತಿಯಾದುದು 24 ಪರ್ಸೆಂಟ್ 1991ರಲ್ಲಿ 26 ಪರ್ಸೆಂಟ್ ಅಗ್ರಿಕಲ್ಚರ್ ಲೇಬರ್ ಇನಕ್ರೀಸ್ ಆಗಿದ್ದಾರೆ. ಅದು ಅಗ್ರಿಕಲ್ಚರ್ ಲೇಬರ್ ಇನಕ್ರೀಸ್ ಆಗುತ್ತಿದೆ. ಸ್ಮಾಲ್ ಫಾರ್ಮರ್ಸ ಡಿಕ್ರೀಸ್ ಆಗುತ್ತಿದ್ದಾರೆ. ಈ ಕಾಯಿದೆ ಬಂದ ಮೇಲೆ ಆಗಿಲ್ಲ,1961ರಿಂದ 1991ರವರೆಗೆ

ಕಾಯಿದೆ ಬಂದು ಇವತ್ತಿನವರೆಗೂ ಅದು ಆಗುತ್ತಿದೆ ಅಂದರೆ ಅರ್ಥ ಏನೆಂದರೆ ನಮ್ಮ ರೈತರು ಎಂದರೆ ಏನು ಹಿಂದಿನ ಕಾಲದಲ್ಲಿ ಮಹಿಳೆಯರು ಮಕ್ಕಳನ್ನು ಹಿಡಿಯತಕ್ಕಂಥ ಯಂತ್ರ ತಿಳಿದು ಕೊಂಡಿದ್ದರೋ ಇವತ್ತು ಅದು ಏನು ಇಲ್ಲಿ ಅದೇ ರೈತರು ಎಂದರೆ ಕುಳಿತುಕೊಂಡು ತಿನ್ನುವವರಿಗೆ ಯಾರು ಪಟ್ಟಣವಾಸಿಗಳು, ವ್ಯಾಪಾರಸ್ಥರಿಗೆ, ಯಾರೋ ಒಬ್ಬರಿಗೆ ಭತ್ತ ಬೆಳೆದುಕೊಡುವವರು, ರಾಗಿ ಬೆಳೆದು ಕೊಡುವವರು, ಹಾರ್ಟಿಕಲ್ಚರ್ ಬೆಳೆದು ಕೊಡತಕ್ಕಂಥವರು, ಇವರ ಸುಖಕ್ಕೆ ಅವರು ಬೆಳೆದು ಕೊಡಬೇಕು. ಅವರು ಬೆವರು ಸುರಿಸಬೇಕು ಇವರು ತಿನ್ನಬೇಕು. ನಾವು ಏನು ಹೇಳುತ್ತೇವೆ, ಒಂದು ವಾದ ಏನೆಂದರೆ, ಈ ರೀತಿ ಭೂಮಿ ಹಂಚುತ್ತಾ ಹೋದರೆ ನಿಮಗೆ ಭೂಮಿ ಕಡಿಮೆ ಆದಾಗ ಉತ್ಪನ್ನ ಕಡಿಮೆಯಾಗುತ್ತದೆ. ಉತ್ಪನ್ನ ಕಡಿಮೆಯಾಗಲಿ, ಇದರಲ್ಲಿ ನಮ್ಮ ಹೊಸ ಕೃಷಿ ನೀತಿಯ ವಾದವರೇ ಇದು ರೈತ ಬೆಳೆಯತಕ್ಕಂಥ ಬೆಳೆಗೆ ಬೆಲೆ ಇಲ್ಲ. ನಮ್ಮವಿರೋಧ ಪಕ್ಷದ ನಾಯಕರಾದ ಯಡಿಯೂರಪ್ಪನವರು ಕಬ್ಬು ಇಲ್ಲ, ಕಬ್ಬು ಇಲ್ಲ ಎಂದು ಹೇಳಿ ಒದ್ದಾಡಿದರು, ಈಗ ತೆಗೆದುಕೊಳ್ಳವುದಕ್ಕೆ ಜನ ಇಲ್ಲ ಈ ವಾದ ಏತಕ್ಕೆ ಎಂದರೆ, ರೈತ ಅಪ್ಪ ಹಾಕಿದ ಆಲದ ಮರಕ್ಕೆ ಹೋಗಬಾರದು. ಇದು ಹೊಸದಲ್ಲ. ಇದು 1972 ರಲ್ಲಿ ಈ ನ್ಯಾಷನಲ್ ಗೈಡಲೈನ್ಸ ಏನು ಮಾಡಿದ್ದಾರೆ, ನಮ್ಮ ಶ್ರೀ ವೈ ರಾಮಕೃಷ್ಣರವರು ಹೇಳಿದರು, ಈ ನ್ಯಾಷನಲ್ ಗೈಡಲೈನ್ಸ ಏನು ಹೇಳಿದ್ದಾರೆ, ಆ ಗೈಡಲೈನ್‌ಗೂ ಒಂದು ಇದೆ. ನಮಗೆ ಆಧುನೀಕರಣ ಬೇಕು, ನಮಗೆ ಇಂಪೋರ್ಟೆಡ್ ವಾಚ್ ಬೇಕು, ನಮಗೆ ಟಿ.ವಿ. ಬೇಕು, ಇಂಪೋರ್ಟೆಡ್ ಕಾರುಬೇಕು, ರೈತ ಮಾತ್ರ ಬೇಡ ಅವನಿಗೆ. ಅವರು ಎಲ್ಲಿ ಇರಬೇಕು, ಹೇಳಿ, ಅವನು ಕೆತ್ತುತ್ತಾ ಇರಬೇಕು, ಅಳುತ್ತಾ ಇರಬೇಕು, ಅವನು ಬೆಳೆಯಬೇಕು ಇಲ್ಲಿ 70 ರಿಂದ 80 ಭಾಗ ಕುಳಿತುಕೊಂಡು ತಿನ್ನುವವರು, ಇವರಿಗೆ ಲೆವಿ ಭತ್ತ, ಲೆವಿ ಪದ್ಧತಿ, ಲೆವಿ ಶುಗರ್ ಈ ರೀತಿ ಅವರಿಗೆ ಕೊಡಬೇಕು, ಎಷ್ಟು ಚೆನ್ನಾಗಿ ಇದೆ ಈ ವಾದ. ಅವನಿಗೆ ದುಡ್ಡು ಬೇಡ, ಅವನಿಗೆ ಆಧುನೀಕರಣ ಬೇಡ, ಅವನಿಗೆ ನ್ಯೂ ಟೆಕ್ನಾಲಜಿ ಬೇಡ, ಯಾವ ಆಧುನೀಕರಣದ ಬಗ್ಗೆ ಮಾತನಾಡಬೇಕು..

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೆ, ನಾವು ಇದಕ್ಕೆ ವಾದವನ್ನು ಹೇಳುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ಮಾನ್ಯ ಜಾಲಪ್ಪನವರು ತಂದಂತಹ ಅಮೆಂಡಮೆಂಟಗೆ ಸಮರ್ಥವಾಗಿ ಅದನ್ನು ಪ್ರತಿ ಪಾದನೆ ಮಾಡುತ್ತಿದ್ದಾರೆ. ಮತ್ತು ಕುತ್ತಿಗೆಯಿಂದ ಆ ಕಡೆ ಗಂಟಲಿನಿಂದ ಆಮೇಲೆ ಬರುತ್ತಿದೆ. ಏಕೆಂದರೆ, ಅಧ್ಯಕ್ಷರೆ, ಇಲ್ಲಿ ನಾವು ಭೂಸುಧಾರಣೆ ಕಾನೂನು ಬಗ್ಗೆ ಮಾತನಾಡುತ್ತಿದ್ದೇವೆ. ಭೂ ಸುಧಾರಣೆ ಕಾನೂನು ಬಗ್ಗೆ ಮಾತನಾಡುವಾಗ, ಇದು ಒಂದು ಮಹತ್ವವಾದಂತಹ ಕಾನೂನು. ಯಾವ ರೀತಿಯಾಗಿ ಲ್ಯಾಂಡ್ ರೆವಿನ್ಯೂ ಆಕ್ಟ್‌ಇದೆ, ಹತ್ತಾರುವರ್ಷಗಳಿಂದ ಬಂದಂತಹ ಆಕ್ಟ ಅದರ ಬದಲಾವಣೆ ಬಹಳ ರೇರ್ ಆಗಿ ಆಗುತ್ತದೆ. ತಮಗೆ ಗೊತ್ತಿದೆ, ಐ.ಪಿ.ಸಿ. ಸಿ.ಆರ್.ಪಿ.ಸಿ. ಇಂತಹ ಆಕ್ಟ್‌ಗಳು ಕೆಲವು ಇವೆ. ಅಂದರೆ ನಾವು ಅದರ ಟೈಮ್ ಬದಲಾಯಿಸಬಾರದು ಎಂದು ಪ್ರತಿಯೊಂದು ಸಲ ಬದಲಾಯಿಸುವುದಕ್ಕೆ ಆಗುವುದಿಲ್ಲ. ಕೆಲವು ಇನಎವಿಟಬಲ್ ಅದು ಖಾಯಂ ಆಗಿ ಇರುತ್ತವೆ. ಹಾಗೆ ಭೂ ಸುಧಾರಣೆಯೂ ಕಾನೂನು ಕೂಡ ಇಂದಿನ ಸಮಾಜದ ವ್ಯವಸ್ಥೆಯಲ್ಲಿ ಸಂಪೂರ್ಣವಾಗಿ ಜನ ನಂಬಿ, ಇದು ಸರಿ ಎಂದು ಹೇಳಿ ಒಪ್ಪಿಕೊಂಡ ಮೇಲೆ

ತಂದಂಥದ್ದು. ಆದರೆ ಇದು ಭೂಸುಧಾರಣೆ ಕಾನೂನು ಹೋಗಿ ಏನಾಗಿದೆ ಎಂದರೆ ಇಂಡಸ್ಟ್ರೀಯಲ್ ಸುಧಾರಣೆಗೋಸ್ಕರ ಕಾನೂನು ಅವರು ತಂದಿದ್ದಾರೆ. ಹೊರತಾಗಿ ಭೂ ಸುಧಾರಣೆಯು ರೈತರ ಉದ್ಧಾರಕ್ಕಾಗಿ ತಂದಂಥದ್ದು ಅಲ್ಲ. ನೀವು ಬೇಕಾದರೆ ಸಾಲ ಕೊಡಿ, ಹೆಚ್ಚಿನ ಸಬ್ಸಿಡಿ ಕೊಡಿ, ಇದನ್ನು ಕೇಳಿ, ಬೇರೆ ಇಂಡಸ್ಟ್ರೀಯಲಿಸ್ಟಗೆ ಏನು ಕೊಡುತ್ತಾರೆ ಅದನ್ನು ಕೇಳಿ. ನಾವು ನಿಮ್ಮ ಜೊತೆಯಲ್ಲಿದ್ದೇವೆ, ಆದರೆ ಇದನ್ನು ಹೇಳುವುದಕ್ಕೆ ಹೋಗಬೇಡಿ. ಈ ತಿದ್ದುಪಡಿಯನ್ನು ರೈತರಿಗೆ ಉದ್ಧಾರ ಆಗುತ್ತಾರೆ ಎನ್ನುವ ಮಾತನ್ನು ತಾವು ಹೇಳಿದರೆ ಇದು ಸರಿಯಲ್ಲ ಎನ್ನತಕ್ಕಂಥದ್ದು ನಾನು ಸ್ಪಷ್ಟಪಡಿಸುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಸಭಾಧ್ಯಕ್ಷರೆ, ಖರ್ಗೆಯವರು ಹೇಳಿದರು ಈ ಬಿಲ್ ತಂದಂಥದ್ದು ನಮ್ಮ ಸರ್ಕಾರ, ನಾನು ಮಂತ್ರಿಯಾಗಿದ್ದಾಗ ಡ್ರಾಫ್ಟ್ ಆಗಿದ್ದವು. ಆಗ ಏಕೆ ಇವರು ವಿರೋಧ ಮಾಡಲಿಲ್ಲ. ಏಕೆ ವಿರೋಧಿ ಮಾಡಿ ಕ್ಯಾಬಿನೆಟ್ ನಿಂದ ಹೊರಗೆ ಬರಲಿಲ್ಲ ಅವರು. ಡ್ರಾಫ್ಟ್ ಪ್ರಿಪೇರ್ ಮಾಡಿದ್ದುದು ನಮ್ಮ ಕ್ಯಾಬಿನೆಟ್. ಆಗ ಮಾತನಾಡದೆ, ವಿರೋಧ ಪಕ್ಷಕ್ಕೆ ಹೋದಾಗ ಒಂದು ಮಾತನಾಡುವುದು, ಆಡಳಿತ ಪಕ್ಷದಲ್ಲಿ ಒಂದು ಮಾತನಾಡುವುದು ಇದು ಸರಿಯಲ್ಲ. ನಮ್ಮ ಅಭಿಪ್ರಾಯವೇನೆಂದರೆ ಈ ಭೂಸುಧಾರಣೆಯಲ್ಲಿ ರೈತರಿಗೆ ಇಂಡಸ್ಟ್ರೀಗೆ ವಯಬಿಲಿಟಿ ಬೇಕು, ರೈತರಿಗೆ ವಯಬಿಲಿಟಿ ಬೇಕು, ರೈತ ಮಾತ್ರ ಒಂದು ಎಕರೆ ಜಮೀನು ಇಟ್ಟುಕೊಂಡು ಒಂದೇ ಒಂದು ಚೀಲ ಭತ್ತ ಬೆಳೆದುಕೊಂಡು ಇರುವುದು, ಆದರೆ ಇಂಡಸ್ಟ್ರೀಗೆ ವಯಬಿಲಿಟಿ ಬೇಕು, ಅಗ್ರಿಕಲ್ಚರ್‌ಗೆ ವಯಬಿಲಿಟಿ ಬೇಕಾಗಿಲ್ಲ. ಯಾವ ರೈತರಿಗೆ ವಯಬಿಲಿಟಿ ಇಲ್ಲ, ಆ ರೈತ ಮಾರಿಕೊಳ್ಳುವುದಕ್ಕೆ ಅವಕಾಶ ಕೊಡತಕ್ಕಂಥದ್ದು ಸಾಮಾಜಿಕ ನ್ಯಾಯ ಅಲ್ಲ ಅದು ಆರ್ಥಿಕ ನ್ಯಾಯ. ನಾವು 20 ವರ್ಷ ಹೋರಾಟ ಮಾಡಿದಂತಹ ಭೂ ಸುಧಾರಣೆಯಲ್ಲಿ ಸಾಮಾಜಿಕ ನ್ಯಾಯ ಇವತ್ತು ತೋರಿಸಿ ಕೊಟ್ಟ ಹಾಗೆ ಆಗಿದೆ. ಆ ಬಡವನಿಗೆ ಭೂಮಿ ಕೊಟ್ಟು ಆಗಿದೆ. ಗೇಣಿದಾರರಿಗೆ ಭೂಮಿ ಕೊಟ್ಟು ಆಗಿದೆ. ಅದರಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಇದರಲ್ಲಿ ಏನಾದರೂ ಕೇಸಸ್ ಇದ್ದರೆ, ಅದಕ್ಕೆ ಅಪರೇಟ್ ಟ್ರಿಬ್ಯುನಲ್ ಮಾಡಿ. ಕರ್ನಾಟಕ ಅಪಲೀಟ್ ಟ್ರಿಬ್ಯುನಲ್ ಮಾಡಲಿ, ಯಾವ ಯಾವ ಕೇಸಸ್ ಇದೆ, ಆ ಕೇಸಸನ್ನು ಇಮ್ಮಿಡಿಯಟ್ಟಾಗಿ ಡಿಸಮಿಸ್ ಮಾಡಿ. ಗೇಣಿದಾರರಿಗೆ ಭೂಮಿ ಕೊಡಿ, ಗೇಣಿದಾರರಿಗೆ ಭೂಮಿ ಕೊಟ್ಟ ಮೇಲೆ, ಇವತ್ತು ನೀವು ಮಾರಲೇ ಬೇಡಿ, ನೀವು ಭತ್ತವನ್ನು ಬೆಳೆಯಿರಿ, ರಾಗಿಯನ್ನು ಬೆಳೆಯಿರಿ, ನೀವು ಇಷ್ಟ ಬಂದ ಹಾಗೆ ನಾವು ಮಾಡುತ್ತೇವೆ ಅಂದರೆ ಅದು ಸರಿಯೇ? ಒಂದು ಎಕರೆ ಭೂಮಿ 60,000 ರೂ ಆಗುತ್ತದೆ. ಒಂದು ಎಕರೆಯನ್ನು ನಾಲ್ಕು ಲಕ್ಷ ಆಗುತ್ತದೆ ಎಂದೆಲ್ಲಾ ಹೇಳುತ್ತಾರೆ. ಆಗ ಬೇಕು ಭೂಮಿ, ಈ ದೇಶದ ಆಹಾರದ ಭದ್ರತೆಯನ್ನು ಮಾಡುವಂತಹ ಗುಲಾಮ ರೈತ ಆಗಬಾರದು. ರೈತ ಭೂಮಿ ಒಳಗಡೆ ವ್ಯವಸಾಯ ಮಾಡುವುದಕ್ಕೆ ಅಲ್ಲ, ಚಿನ್ನ ಬೆಳೆಯಬೇಕು ಅವನು. ದುಡ್ಡು ಬೆಳೆಯುವುದನ್ನು ಕಲಿತರೆ ರೈತ ಬದುಕುತ್ತಾನೆ. ಇದು ನಾನು ರೈತನ ಮಗನಾಗಿ ಹೇಳತಕ್ಕಂಥದ್ದು, ಎಲ್ಲಿಯವರೆಗೆ ರೈತ ಭೂಮಿಯಲ್ಲಿ ದುಡ್ಡು ಹಾಕುತ್ತಾವೆಯೋ ಅಷ್ಟೂ ಒಳ್ಳೆಯದು. ಆ ದೃಷ್ಟಿಯಿಂದ ರೈತನಿಗೆ ಕೈಗೆ ಹಣ ಬೇಕು. ಅವನಿಗೆ ಸಾಲ ಕೊಡುವುದು, ಸಬ್ಸಿಡಿ ಕೊಡುವುದು, ಇಷ್ಟು ಎಲ್ಲಾ ಇಟ್ಟುಕೊಂಡು ಕಚ್ಚೆ ಬಟ್ಟೆ ಹಾಕಿಕೊಂಡು ಎರಡು ಎಕರೆ, ಒಂದು ಎಕರೆ ಜಮೀನು ಇಟ್ಟುಕೊಂಡು ನೀನು ನೇಗಿಲು ಹಾಕಿಕೊಂಡು ನಿನ್ನ ಹೆಂಡತಿ ನಿನ್ನ ಮಗ ನಿನ್ನ ಮಗಳೆಲ್ಲಾ ಗೇಯಿರಿ, ಭತ್ತ ಕೊಡಿ, ರಾಗಿ ಕೊಡಿ,

ಎಂದು ಹೇಳಿ ಬಯಲು ಸೀಮೆಯವರು ಉಣ್ಣಲಿ, ಇದು ಅಲ್ಲ ನೀತಿ. ಆದ್ದರಿಂದ ಈ ಭೂ ಸುಧಾರಣೆ ನೀತಿ ಅತ್ಯಂತ ಆರ್ಥಿಕ ಸುಧಾರಣಾ ನೀತಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇರುವ ಒಂದು ಎಕರೆ, ಎರಡು ಎಕರೆ ಭೂಮಿಯನ್ನು ಮಾರಿಕೊಂಡು ಅವನ ಹೆಂಡತಿ ಮಕ್ಕಳು ಬೀದಿ ಪಾಲಾಗುತ್ತಾರೆ.

ಶ್ರೀ ಕೆ.ಎನ್. ನಾಗೇಗೌಡ : ಉಪಾಧ್ಯಕ್ಷರೆ, ಎಂತಹ ಸಾಮಾಜಿಕ ನ್ಯಾಯ ನೋಡಿ, ಅವನ ಜಮೀನು ಅವನೇ ಒಡೆಯಗಾರ, ಅವನ ಜಮೀನು ಮಾರಿಕೊಳ್ಳುವುದಕ್ಕೆ ಇವರ ನಿರ್ಬಂಧ! ಅವನು ಜಮೀನು ಮಾರಿಕೊಳ್ಳುವುದಕ್ಕೆ ಅವರಿಗೆ ಏಕೆ ನಿರ್ಬಂಧ, ಇಷ್ಟ ಬಂದರೆ ಇಟ್ಟುಕೊಳ್ಳಿ, ಇಷ್ಟ ಬಂದರೆ, ವ್ಯವಸಾಯ ಮಾಡಲಿ, ಇಷ್ಟ ಬಂದರೆ ವ್ಯಾಪಾರ ಮಾಡಲಿ, ಬಂದರೆ ಸರ್ಕಾರಿ ನೌಕರಿಗೆ ಸೇರಿಕೊಳ್ಳಲಿ, ಇಷ್ಟ ಬಂದರೆ ಮತ್ತೊಂದು ಮಾಡಲಿ, ರೈತನಿಗೆ ಸ್ವಾತಂತ್ರ್ಯ ಕೊಡಿ. ರೈತರಿಗೆ ಸ್ವಾತಂತ್ರ್ಯ ಕೊಡದಿದ್ದರೆ ಅವನು ಅಭಿವೃದ್ಧಿಯಾಗುವುದಿಲ್ಲ. ಅಪ್ಪ ಹಾಕಿದ ಆಲದ ಮರಕ್ಕೆ ಹಾಕಿಕೊಂಡು ಸಾಯಿರಿ ಎನ್ನತಕ್ಕ ಕಾಯಿದೆ. ಮಾಡತಕ್ಕಂಥದ್ದು ಸರಿಯಾದುದಲ್ಲ. ಈ ವಾದ ನಾವು ಹಿಂದಿನಿಂದ ನೋಡಿಕೊಂಡು ಬಂದಿದ್ದೇವೆ. ಒಬ್ಬ ಸರ್ಕಾರಿ ನೌಕರ ಅವನ ಮನೆಯಲ್ಲಿ ಅತ್ಯಂತ ಸುಖಕರವಾದ ಜೀವನ ಮಾಡುತ್ತಾನೆ. ಹತ್ತು ಎಕರೆ ಜಮೀನು ಇರತಕ್ಕಂಥವನು ಮಾಡುವುದಕ್ಕಾಗುವುದಿಲ್ಲ. ಅವನಿಗೆ ದುಡ್ಡು ಬೇಡ ನೀನು ರೈತ. ಜಮೀನನ್ನು ಮಾರಬೇಡ, ನೀನು ಬರೀ ಬೆಳೆ ಬೆಳೆದುಕೊಂಡು ಇರು ಎಂದು ಹೇಳುವ ನೀತಿ ಸರಿ ಇಲ್ಲ. ಆದರೆ ಒಂದು ಮಾತ್ರ ಮಾನ್ಯ ಜಾಲಪ್ಪನವರಲ್ಲಿ ಸಲಹೆ ಏನು ಎಂದರೆ ಈಗ ನಾವೇನು ಜಮೀನನ್ನು ಹೌಸಿಂಗ್‌ಗೆ ಕೊಡುತ್ತಿದ್ದೇವೆ ಅಥವಾ ಇಂಡಸ್ಟ್ರೀಗೆ ಕೊಡುತ್ತಿದ್ದೇವೆ ಇದು ಹೊಸದೇನಲ್ಲ ಸ್ವಾಮಿ. ಎಲ್ಲಾ ಹಳೆಯದು ಎಕ್ಸಟೆಂಟ್ ಮಾಡಿದ್ದಾರೆ. ಉದಾಹರಣೆಗೆ ಹೇಳುತ್ತೇನೆ ಒಂದು ಹತ್ತು ಹನ್ನೆರಡು ವಿದ್ಯಾ ಸಂಸ್ಥೆಗಳು ಇದ್ದಾವೆ. ಒಂದೊಂದು ವಿದ್ಯಾ ಸಂಸ್ಥೆಗಳಿಗೆ ಮೂವತ್ತು ವರ್ಷ ನಲವತ್ತು ವರ್ಷ ಕಾಲ ತುಂಬಿದೆ ಈಗ. ಸರ್ಕಾರಿ ಜಮೀನನ್ನು ಆಕ್ಟೈರ್ ಮಾಡಿಕೊಂಡು ಮಜಾ ಮಾಡುತ್ತಿದ್ದಾರೆ. ಏನು ಮಾಡಿದಿರಿ? Acquiring land is a constitutional right which nobody can question it. ಆಕ್ಟೈರ್ ಮಾಡಿಕೋಬಹುದು. ನಮ್ಮ ಊರು ಮಳವಳ್ಳಿನಲ್ಲಿ ಮೂವತ್ತೈದು ವರ್ಷದಿಂದ ಸೈಟು ಕೊಡಬೇಕೆಂದು ಕೇಳುತ್ತಿದ್ದಾರೆ ಆಗಿಲ್ಲ ಸ್ವಾಮಿ. ಇದೇ ರೆವಿನ್ಯೂ ಮಿನಿಸ್ಟರ್ ಬಂದು ಹೋದರು ಆಕ್ಟೈರು ಮಾಡಲಿಕ್ಕೆ ಆಗಲಿಲ್ಲ. ಬೆಂಗಳೂರು ನಗರದಲ್ಲಿ ಸೈಟ್ ಕೊಟ್ಟಿಲ್ಲ. ಹಳ್ಳಿಗಳಲ್ಲಿ ಡೌನ್‌ನಲ್ಲಿ ಸೈಟು ಕೊಟ್ಟಿಲ್ಲ. ರೈತರು ಒಂದು ಒಂದೂವರೆ ಲಕ್ಷ ತೆಗೆದುಕೊಂಡು ಜಮೀನು ಕೊಡಲು ತಯಾರಾಗಿದ್ದಾರೆ. ಆಯ್ತಪ್ಪ ಬೆಂಗಳೂರು ಸಿಟಿ ಬೇಡ ನಿಮ್ಮ ಸಿಟಿ ಕಂಟ್ರಿ ಆಕ್ಟ ಪ್ರಕಾರ ಐದು ಕಿ.ಮೀ ರೆಸ್ಟ್ರಿಕ್ಟ ಮಾಡಿಕೊಳ್ಳಿ, ಬೆಂಗಳೂರು ಸಿಟಿಯನ್ನು ರೈತರು ಮಾರುವುದು ಬಿಡುವುದು ಅವರಿಗೆ ಬಿಡಿ. ನೀವು ಅವರ ಸ್ವಾತಂತ್ರ್ಯವನ್ನು ಏತಕ್ಕೆ ಕಿತ್ತುಕೊಳ್ಳುತ್ತೀರಿ?ಇದು ಎಕಾನಾಮಿಕಲ್ ಜಸ್ಟಿಸ್ ಇಲ್ಲ. ಸೋಷಿಯಲ್ ಜಸ್ಟೀಸ್, ಭೂಸುಧಾರಣೆ ಆಯ್ತು ಸೋಷಿಯಲ್ ಜಸ್ಟಿಸ್, ಸಾಮಾಜಿಕ ನ್ಯಾಯ ಕೊಟ್ಟಾಯಿತು, ಸಾಮಾಜಿಕ ನ್ಯಾಯ ದೊರಕಾಯಿತು ಯಾರು ಇದ್ದರು ಗೇಣಿದಾರರು ಅವರಿಗೆ ಭೂಮಿ ಕೊಟ್ಟಾಯಿತು. ಭೂಮಾಲಿಕರು ಯಾರು ಮೆರೆದಾಡುತ್ತಿದ್ದರು ಅವರು ಮನೆ

ಕಳುಹಿಸಿಯಾಯಿತಲ್ಲಾ, ಇಪ್ಪತ್ತು ವರ್ಷವಾದ ಮೇಲೆ ನೀವು ಬೇಡಪ್ಪಾ ನೀವು ಹಳೆಯದಕ್ಕೆ ಹೋಗು ಎಂದು ಹೇಳತಕ್ಕಂಥದ್ದು ಸರಿಯಾದುದಲ್ಲ. ಕೇಸ್ ಇತ್ಯರ್ಥ ಮಾಡುವುದಕ್ಕೆ ಆಪೆಲೆಟ್ ಟ್ರಿಬ್ಯುನಲ್ ಅನ್ನು ಕೌನ್ಸಿಟಿಟೂಟ್ ಮಾಡಬೇಕು. ಕಾನ್ಸಿಟಿಟ್ಯೂಟ್ ಮಾಡಿ ಇರತಕ್ಕಂಥ ಕೇಸಗಳನ್ನು ಇತ್ಯರ್ಥ ಮಾಡಬೇಕು. ಉದಾಹರಣೆಗೆ ಮಾನ್ಯ ಅಧ್ಯಕ್ಷರೇ ಬೆಂಗಳೂರು ಮೈಸೂರು ಎಕ್ಸ್‌ಪ್ರೆಸ್ ರೋಡ್ ಮಾಡುತ್ತಿದ್ದೀರಿ. ಇದಕ್ಕಾಗಿ ರೈತರಿಂದ ಜಮೀನನ್ನು ಹೇಗೆ ಬಿಡಿಸುತ್ತೀರಿ? ನೀವು ಕೆರೆ ಕಟ್ಟಬೇಕು, ನಿಮಗೆ ನಾಲೆ ಬೇಕು, ಒಂದು ಕೆರೆ ಕಟ್ಟಬೇಕು ಜಮೀನು ಬೇಕು. ಒಂದು ಇಂಡಸ್ಟ್ರೀ ಮಾಡಬೇಕು ಜಮೀನು ಬೇಕು, ನಾಲೆ ಮಾಡಬೇಕು ಜಮೀನು ಬೇಕು ಮನೆ ಕಟ್ಟಬೇಕು ಜಮೀನು ಬೇಕು. ಎಲ್ಲಾದಕ್ಕೂ ಜಮೀನು ಬೇಕು. ಇಲ್ಲಾರಿ ನೀವು ಮಾರುವುದಕ್ಕೆ ಹೋಗಬೇಡಿ ಎಂದರೆ ಹೇಗೆ? ಇನ್ನು ಅಪ್ಪರಕೃಷ್ಣಾದಲ್ಲಿ ನೀರಾವರಿ ನಿಂತ ಹೋದದ್ದು ನಮ್ಮ ವಿರೋದಪಕ್ಷದ ನಾಯಕರಿಗೆ ಹೇಳೋದು, ಅಕ್ವಿಸಿಷನ್ ಪ್ರೊಸಿಡಿಂಗ್ಸದಿಂದ ಅವರಿಗೆ ನೀವು ಇಷ್ಟಾ ಬಂದ ಹಾಗೆ ಮಾರಿ ಎಂದು ಹೇಳಿದ್ದರೆ ಒಂದು ಲಕ್ಷವೋ ಒಂದೂವರೆ ಲಕ್ಷವೋ ಹೇಗಾದರೂ ಕಾಂಪಿಟೇಷನ್ ಬರುತ್ತಿತ್ತು, ರೈತರು ತೆಗೆದುಕೊಂಡ ಕೊಡುತ್ತಿದ್ದರು. ರೈತನಿಗೆ ಹಣ ಸಿಗುತ್ತಿತ್ತು. ಅವನ ಮಗ ಬಂದು ಪೇಟೆಯಲ್ಲಿ ವ್ಯಾಪಾರ ಮಾಡುತ್ತಿದ್ದ. ವ್ಯಾಪಾರ ಮಾಡುವುದು ನಿಮಗೊಬ್ಬರಿಗೇ ಬರೆದು ಕೊಟ್ಟಿದೆವೆಯೇ? ನಾಗರೀಕರಿಗೆ, ವಿದ್ಯಾವಂತರಿಗೆ, ಬುದ್ಧಿವಂತರಿಗೆ, ಹಣವಂತರಿಗೆ ಇದು ಪಟ್ಟ ಮಾತ್ರವೇ? ನ್ಯಾಯದಲ್ಲಿ ಇದೊಂದು ಸಾಮಾಜಿಕ ನ್ಯಾಯವಲ್ಲ. ಇದು ಆರ್ಥಿಕ ನ್ಯಾಯ. ಈ ಆರ್ಥಿಕ ನ್ಯಾಯಾದಲ್ಲಿ ರೈತರಿಗೆ ಇಂತಹ ಒಂದು ಸುಧಾರಣೆ ಬಹಳ ಅತ್ಯವಶ್ಯಕವಾದದ್ದು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ, ಇದರ ನಿಜವನ್ನು ನಾವು ಕಾಣತಕ್ಕಂಥದ್ದು ಯಾವಾಗ ಎಂದರೆ ಇನ್ನು ಐದು ವರ್ಷ ಹೋಗದೆ, ಒಂದು ವರ್ಷ ಹೋದರೆ, ಒಂದು ಕ್ವಿಂಟಲ್ ಭತ್ತಕ್ಕೆ ಎರಡು ಸಾವಿರ ರೂಪಾಯಿ ಆಗುತ್ತದೆ. ಆಗಬೇಕು. ಹಳ್ಳಿಯ ಒಂದು ಎಕರೆ ಭೂಮಿಗೆ ಐದು ಲಕ್ಷ ರೂಪಾಯಿ ಆಗುತ್ತದೆ. ಆಗಬೇಕು. ಈ ಕಾಯಿದೆಯ ಉದ್ದೇಶವೇ ಅದು. ರೈತರಿಗೆ ಹಣ ಸಿಗಬೇಕು ಎನ್ನತಕ್ಕಂಥ ಆರ್ಥಿಕ ಸ್ವಾತಂತ್ರ್ಯವನ್ನು ಕೊಡತಕ್ಕಂಥ ಮೂರನೇ ಹಂತದ ಭೂ ಸುಧಾರಣೆ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ಇದಕ್ಕೆ ನಮ್ಮ ಸಂಪೂರ್ಣವಾದ ಬೆಂಬಲ ಇದೆ. ಇದನ್ನು ಯಾವ ಜಾಯಿಂಟ್ ಸೆಲೆಕ್ಟ ಕಮಿಟಿಗೆ ಕಳುಹಿಸಬೇಕಾಗಿಲ್ಲ. ಇದನ್ನು ಸಂಪೂರ್ಣವಾಗಿ ಮಾಡಬೇಕು. 1997ಕ್ಕೆ ಹೊಸ ಸರ್ಕಾರ ರಾಷ್ಟ್ರಮಟ್ಟದಲ್ಲಿ ನ್ಯಾಷನಲ್ ಲ್ಯಾಂಡ್ ರಿಫಾರ್ಮ್ಸ ತೆಗೆದು ಕೊಂಡು ಬರಲಿ. ಗೈಡಲೈನ್ಸ ಹಾಕಲಿ ಹಾಕಿದ ಮೇಲೆ ನೋಡೋಣ ಎಂದು ಹೇಳಿ ನಾನು ಇದನ್ನು ಸ್ವಾಗತ ಮಾಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ನಾನು ನಾಗೇಗೌಡರನ್ನು ಖಂಡಿತವಾಗಿ ಅಭಿನಂದಿಸುತ್ತೇನೆ, ಏಕೆಂದರೆ ಅವರು ಒಂದು ವಿಷಯ ಸ್ಪಷ್ಟ ಮಾಡಿದ್ದಾರೆ. ನಮ್ಮ ಹತ್ತಿರ ಸಾಮಾಜಿಕ ನ್ಯಾಯ ಇಲ್ಲ, ನಮ್ಮ ಹತ್ತಿರ ಆರ್ಥಿಕ ನ್ಯಾಯ ಇದೆ ಎಂದರು. ಎರಡನೆಯದು ಅವರು ಒಂದು ವಿಷಯ ಹೇಳಿದರು.

ಉಪಾಧ್ಯಕ್ಷರು : ಅವರು ಮಾತನಾಡಲಿ ಮೊದಲು, ನಾನು ಶ್ರೀಮತಿ ಪ್ರಮೀಳಾ ನೇಸರ್ಗಿಯವರನ್ನು ಕರೆದಿದ್ದೇನೆ.

9521-51

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಒಂದೇ ಒಂದು ನಿಮಿಷ. ಒಂದು ವಿಷಯ ಮಾತ್ರ ಹೇಳುತ್ತೇನೆ. ನಮ್ಮ ರೈತರು ಯಾವಾಗಲೂ ಭತ್ತ, ರಾಗಿ, ಜೋಳ ಬೆಳೆದುಕೊಂಡು ಇವರಿಗೆಲ್ಲಾ ಕೊಡುತ್ತಾ ಇರಬೇಕೇ ಎಂದು?

ಉಪಾಧ್ಯಕ್ಷರು : ಶ್ರೀರಾಮ ರೆಡ್ಡಿಯವರೇ, ನಿಮಗೆ ಮಾತನಾಡಲು ಅವಕಾಶ ಮಾಡಿ ಕೊಟ್ಟಿದ್ದೇವೆ. ನೀವು ಪ್ರತಿಸಲ ಮಾಡಿನಾಡಿದರೆ ಹೇಗೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಒಂದು ನಿಮಿಷ ಮಾತನಾಡಿ ಮುಗಿಸಿಬಿಡುತ್ತೇನೆ ನಾನು. ರಾಗಿ ಭತ್ತ ಬೆಳೆದು ಕೊಂಡು ಇರಬೇಕೇ ನಾವು. ಬೇರೆಯವರು ಕುಳಿತುಕೊಂಡು ತಿನ್ನುವವರಿಗೆ ಕೊಡಬೇಕೇ ನಾವು ಎಂದು ಅವರು ಹೇಳಿದರು. ನಾಳೆ ದಿವಸ ಕಾರ್ಖಾನೆಯಲ್ಲಿ ಕೆಲಸ ಮಾಡತಕ್ಕಂಥ ಫ್ಯಾಕ್ಟರಿಯಲ್ಲಿ ಕೆಲಸ ಮಾಡತಕ್ಕಂಥ ಕಾರ್ಮಿಕರು ನಾವು ಬಟ್ಟೆ ನೇಯ್ದು ರೈತರಿಗೆ ಏತಕ್ಕೆ ಕೊಡಬೇಕು, ಕಾರ್ಖಾನೆಯಲ್ಲಿ ನೇಗಿಲು ತಯಾರು ಮಾಡಿ ರೈತರಿಗೆ ಏತಕ್ಕೆ ಕೊಡಬೇಕು, ನಾವು ಟಿ.ವಿ. ತಯಾರು ಮಾಡಿ ರೈತರಿಗೆ ಏತಕ್ಕೆ ಕೊಡಬೇಕು, ನಾವು ರೇಡಿಯೋ ತಯಾರು ಮಾಡಿ ರೈತರಿಗೆ ಏತಕ್ಕೆ ಕೊಡಬೇಕು? ಏಕೆ ತಯಾರು ಮಾಡಿಕೊಡಬೇಕು, ನಾವು ಮಾತ್ರ ತಯಾರು ಮಾಡಲ್ಲ ಎಂದು ಹೇಳಿದರೆ ಪರಿಸ್ಥಿತಿ ಏನಾಗುತ್ತದೆ ಎಂದು ಬಹುಶಃ ನಾಗೇಗೌಡರಿಗೆ ಗೊತ್ತಿರಲಿಕ್ಕಿಲ್ಲ. ಇದೇ ಇವರ ಸಾಮಾಜಿಕ ನ್ಯಾಯ. ಭೂ ಸುಧಾರಣಾ ಕಾನೂನು ಎಂದು ಹೇಳಿದರೆ.

ಉಪಾಧ್ಯಕ್ಷರು : ಏನು ತಮಾಷೆ ಮಾಡುತ್ತಿರೋ? ಕುಳಿತ್ಕೊಳ್ಳಿ ಎಲ್ಲರೂ.

ಶ್ರೀ ಕೆ.ಎನ್. ನಾಗೇಗೌಡರು : ಸನ್ಮಾನ್ಯ ಉಪಾಧ್ಯಕ್ಷರೇ, ಒಂದೇ ಒಂದು ನಿಮಿಷ ನಮ್ಮ ಆರ್ಥಿಕ ವ್ಯವಸ್ಥೆಯೊಳಗಡೆ, ನಮಗೆ ಇರತಕ್ಕಂಥ ಟ್ರೇಡ್ ಕಾಂಟ್ರಾಕ್ಟ ಒಳಗಡೆ ಈ ದೇಶದಿಂದ, ಮತ್ತೊಂದು ದೇಶಕ್ಕೆ, ಮತ್ತೊಂದು ದೇಶದಿಂದ ಮತ್ತೊಂದು ದೇಶಕ್ಕೆ ಏನು ಬೇಕಾದರೂ ತರಿಸಿಕೊಳ್ಳಬಹುದು, ಕೊಡಬಹುದು ಎನ್ನತಕ್ಕಂಥ ವ್ಯವಸ್ಥೆ ಇರತಕ್ಕಂಥ ಈ ಒಂದು ಪ್ರಪಂಚದಲ್ಲಿ ನಾವು ಯಾವುದಕ್ಕೆ ದುಡ್ಡು ಸಿಗುತ್ತದೆ, ಯಾವುದು ತಂದರೆ ಪ್ರಯೋಜನ ಆಗುತ್ತದೆ ಆ ಕಡೆ ನಮ್ಮ ಜನರನ್ನು ಕರೆದುಕೊಂಡು ಹೋಗಬೇಕೇ ವಿನಹ ಅಪ್ಪ ಹಾಕಿದ ಆಲದ ಮರದ ಕಡೆಗೆ ಕರೆದುಕೊಂಡು ಹೋಗಬಾರದು. ಅಕ್ಕಿ ಸಿಗಲಿಲ್ಲ ಎಂದರೆ ಅಕ್ಕಿ ಸಿಗುತ್ತದೆ ರಸ್ತೆಯಲ್ಲಿ, ಶುಗರ್ ಸಿಗಲಿಲ್ಲ ಎಂದು ಮತ್ತೊಂದು ಕಡೆ ಸಿಗುತ್ತದೆ. ಇಲ್ಲೊಂದು ಸಿಗಲಿಲ್ಲ ಎಂದು ಅಮೇರಿಕಾದಲ್ಲಿ ಮತ್ತೊಂದು ಸಿಗುತ್ತದೆ. ಎಲ್ಲಿ ಸಿಗುತ್ತದೆ ಅಲ್ಲಿಗೆ ಹೋಗಬೇಕು. ಇಂಟರನ್ಯಾಷನಲ್ ಟ್ರೇಡ್ ಇದೆ ಅಲ್ಲಿಂದ ತರಿಸಿಕೊಳ್ಳಬೇಕು ನಾವು ಅದನ್ನು ಕಾಂಪಿಟ್ ಮಾಡಲಿಕ್ಕೆ ರೈತರಿಗೆ ಬಿಡಬೇಕು ತಾವು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಆದರ್ಶವಾಗಿ ರೈತನು ಬದುಕಬೇಕು ಎನ್ನತಕ್ಕಂಥ ಚಿಂತನೆ ತಮಗಿಲ್ಲ. ಯಾವುದೋ ಓಬಿರಾಯನ ಕಾಲದ ಮಾತನಾಡುತ್ತಿದ್ದೀರಿ. ಸಂಸ್ಕೃತಿ, ಒಂದು ಇತಿಹಾಸ ರೈತರ ಹಿನ್ನಲೆ ಉಳಿಯಬೇಕಾಗಿದೆ ಇವರಿಗೆಲ್ಲರಿಗೆ ಪ್ಯಾಂಟ್ ಹಾಕಿ ಅವರಿಗೆಲ್ಲರಿಗೆ ಅಮೇರಿಕನ್ ಗ್ಲಾಸ್

ಕೊಡಿ ಈ ತರಹ ಶುರು ಮಾಡಿಬಿಟ್ಟರೆ ನಮ್ಮ ರೈತರು ಗತಿ ಏನು? ನಮ್ಮ ಹಳ್ಳಿಗಳ ಗತಿ ಏನು? ಹಳ್ಳಿಗಾಡಿನ ಸಂಸ್ಕೃತಿ ಏನು? ಹಳ್ಳಿಗಾಡಿನ ಸಂಸ್ಕೃತಿ ಎಲ್ಲಾ ನಾಶ ಮಾಡುವುದಕ್ಕೆ ಹೊರಟಿದ್ದೀರಿ ನೀವು.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ : ರೈತರನ್ನು ಮೂಲೆಗುಂಪು ಮಾಡುತ್ತಿದ್ದೀರಿ ನೀವು ಅಷ್ಟೆ.

ಶ್ರೀ ಕೆ.ಎನ್. ನಾಗೇಗೌಡ : ಹಳ್ಳಿಯಲ್ಲಿ ಬಿದ್ದಿರಬೇಕು ಅವನು. ಅವನು ಮುಂದೆ ಬರಬಾರದು ಎಂಬುದು ನಿಮ್ಮ ಅಭಿಪ್ರಾಯ ಅಷ್ಟೆ.

ಶ್ರೀ ವಾಟಾಳ್ ನಾಗರಾಜ್ : ಚಡ್ಡಿ ಹಾಕಿ ಗೊಣ್ಣೆ ಸುರಿಸಬೇಕು ಎಂದು ಹೇಳಲಿಲ್ಲ. ನಮ್ಮ ಸಂಸ್ಕೃತಿ, ಯಾವ ರೀತಿ ಇರಬೇಕೆಂದು ಒಂದು ಹಿನ್ನಲೆ ಇದೆ. ಆ ಹಿನ್ನೆಲೆಗೆ ಧಕ್ಕೆ ತರುತ್ತಿದ್ದೀರಿ ನೀವು. ಎಲ್ಲಾ ಬಹುರಾಷ್ಟ್ರೀಯ ಕಂಪನಿಯವರನ್ನು ಸ್ವಾಗತ ಮಾಡಿ ಈಸ್ಟ ಇಂಡಿಯಾ ಕಂಪನಿಯವವನ್ನು ಜಾಗ ಕೊಟ್ಟ ಹಾಗೆ ನೀವೆಲ್ಲಾ ಬಹುರಾಷ್ಟ್ರೀಯ ಕಂಪನಿಯ ಏಜೆಂಟರಾಗಿ ಕೆಲಸ ಮಾಡಲು ಹೊರಟಿದ್ದೀರಿ ನೀವು.

ಶ್ರೀ ಎಂ. ಪಿ. ಪ್ರಕಾಶ್ : ಇಂತಹ ಒಳ್ಳೆಯ ತತ್ವಗಳನ್ನು ಶತಶತಮಾನಗಳಿಂದ ಹೇಳಿ ಜನಗಳನ್ನು ಬದುಕಿನಿಂದ ಶೂನ್ಯವಾಗಿ ಮಾಡುತ್ತಿದ್ದೀರಿ. ಇದು ಪ್ಯಾಂಟು, ಧರಿಸುವಂಥದ್ದು ರೈತನ ಧರ್ಮ ಎನ್ನುವಂಥ ಮಾತು ಏನು ಇದೆ ಇದೆಲ್ಲವೂ ಕೂಡ ಅವರನ್ನು ದುಡಿಯುವ ವರ್ಗವನ್ನಾಗಿ, ಶೋಷಣೆಯ ವರ್ಗವನ್ನಾಗಿ ಉಪಯೋಗಿಸಿಕೊಂಡು ಬಂದಂಥವರ ಮಾತು ಇದು. ಅವರೂ ಕೂಡ ಸಮಾನವಾಗಿ ಬದುಕು ಕೊಡತಕ್ಕಂಥ ಎಲ್ಲಾ ಸಂಪತ್ತನ್ನು, ಶ್ರೀಮಂತಿಕೆಯನ್ನು ಅನುಭವಿಸಬೇಕಾಗುತ್ತದೆ. ಆದ್ದರಿಂದ ದಯಮಾಡಿ ಈ ದೃಷ್ಟಿಯಲ್ಲೇ ಸೀಮಿತಗೊಳಿಸಬೇಕೆಂದರೆ ಮಹಿಳೆಯರನ್ನೂ ಕೂಡ ನಾವು ಯಾವ ರೀತಿಯಾಗಿ ಚೌಕಟ್ಟಿನಲ್ಲಿ ಇಟ್ಟಿದ್ದೇವೆ ಬಹಳ ಗೌರವಿಸುತ್ತೇವೆ. ಆದರೂ ಶೋಷಿಸುತ್ತೇವೆ. ರೈತರನ್ನೂ ಬಹಳ ಗೌರವಿಸುತ್ತೇವೆ ಆದರೂ ಶೋಷಿಸುತ್ತೇವೆ. ಈ ರೀತಿಯ ವ್ಯತ್ಯಾಸವನ್ನು ಕೈಬಿಡಬೇಕು.

ಶ್ರೀ ವಾಟಾಳ್ ನಾಗರಾಜ್ : ಆಯಿತು ಮಾನ್ಯ ಅಧ್ಯಕ್ಷರೇ, ಇನ್ನು ಮುಂದೆ ನಾವು ರಾಗಿ ಜೋಳ ತಿನ್ನುವಹಾಗಿಲ್ಲ. ಬೋಲ್ಟು ನಟ್ಟು ತಿನ್ನಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬರಬರುತ್ತಾ ಈ ರಾಜ್ಯ ಸರ್ಕಾರ ರಿಯಲ್ ಎಸ್ಟೇಟ್ ಏಜೆಂಟ್ ಆಗಿ ಪರಿವರ್ತನೆಯಾಗುವ ಕೆಲಸ ನಮ್ಮ ಸರ್ಕಾರ ಮಾಡುತ್ತದೆ.

ಶ್ರೀ ಕೆ.ಎನ್. ನಾಗೇಗೌಡ : ಒಂದು ಮಾತು ನಮ್ಮ ವಿರೋಧ ಪಕ್ಷದ ನಾಯಕರು ಹೇಳುವುದಕ್ಕೆ ಬೆಂಗಳೂರು ಸಿಟಿನಲ್ಲಿ ಅಗ್ರಿಕಲ್ಚರ್ ಲ್ಯಾಂಡನ್ನು ನಾನ್ ಅಗ್ರಿಕಲ್ಚರ್ ಎಂದು ಕನ್ವರ್ಟ ಮಾಡಿಕೊಟ್ಟು, ಪವರ್ ಆಫ್ ಅಟಾರ್ನಿ ತೆಗೆದುಕೊಂಡು ದಲ್ಲಾಳಿಗಳು ಕೋಟ್ಯಾಂತರ ರೂಪಾಯಿ ಸಂಪಾದನೆ ಮಾಡುತ್ತಿದ್ದಾರೆ. ಆದರೆ ಈ ರೈತನಿಗೆ ಎಷ್ಟು ಹೋಗುತ್ತಿದೆ. ಈ ಅವಕಾಶ ಕೊಟ್ಟರೆ ಆ ರೈತರೇ

ಮಾರಿದರೆ ಈ ದಲ್ಲಾಳಿ ತಪ್ಪುವುದಿಲ್ಲವೇ ಎಂದು ನಿಮ್ಮನ್ನು ಕೇಳುತ್ತೇನೆ. ಏತಕ್ಕೆ ನೀವು ವ್ಯಾಪಾರಸ್ಥರ ಕಡೆ ಇದ್ದೀರಿ. ನೀವು ರೈತರ ಕಡೆ ಇಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅದನ್ನು ತಡೆಯುವುದಕ್ಕೆ ಆಗುವುದಿಲ್ಲ. ಹಸಿರು ವಲಯ ಎಂದು ಹೇಳುವುದು. ಬೆಂಕಿಯಲ್ಲಿ ರೈತರನ್ನು ಸಾಯಿಸುತ್ತಿದ್ದೀರಿ ನೀವು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಒಂದು ವಿಷಯವೇನೆಂದರೆ ನಾಗೇಗೌಡರು ಒಂದನ್ನು ಮರೆಯುತ್ತಿದ್ದಾರೆ. ಮತ್ತು ಎಲ್ಲರೂ ಕೂಡ ನಾವು ಮರೆಯುತ್ತಿದ್ದೇವೆ. ನಾನು ಹೇಳುವುದು ಇಷ್ಟೇ ಇವೊತ್ತು ಎಪ್ಪತ್ತು ಲಕ್ಷ ಜನ ಪಟ್ಟೆದಾರರು ಇದ್ದಾರೆ. ಲ್ಯಾಂಡ್ ಹೋಲ್ಡರ್ಸ ಇದ್ದಾರೆ. ಈಗ ಇರತಕ್ಕಂಥ ಆಕ್ಟ ಪ್ರಕಾರ ನಾನು ಮಾತನಾಡುತ್ತಿದ್ದೇನೆ. ನಾಳೆ ಏನಾಗುತ್ತದೆ ಎಂದರೆ ಒಬ್ಬ ಶುಗರ್ ಫ್ಯಾಕ್ಟರಿ ಓನರ್ ಬೇರೆ ರೈತರ ಹತ್ತಿರ ಏತಕ್ಕೆ ಶುಗರಕೇನ್ ಖರೀದಿ ಮಾಡಬೇಕೆಂದು ಹೇಳಿ ಮೂರು ಅಥವಾ ನಾಲ್ಕು ಸಾವಿರ ಎಕರೆ ಜಮೀನನ್ನು ಅವನೇ ಖರೀದಿ ಮಾಡುತ್ತಾನೆ.

ಶ್ರೀ ಕೆ.ಎನ್. ನಾಗೇಗೌಡ : ಮೂರು ಸಾವಿರ ಎಕರೆ ಜಮೀನು ತೆಗೆದುಕೊಳ್ಳಲು ಹೇಗೆ ಬರುತ್ತದೆ ಕಾನೂನಿನ ಅಡಿಯಲ್ಲಿ?

(ಗೊಂದಲ)

SRI. K.N. NAGEGOWDA : Under section 109 (1) the power of giving exemption is vested with the Government. Let him not mislead the House.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಫುಡ್ ಪ್ರಾಡಕ್ಸ ಬೇಕು ಅನ್ನುತ್ತಾನೆ. ಆವಾಗ ಏನಾಗುತ್ತದೆ ಎಲ್ಲಿ ಒಂದು ಸಾವಿರ ಫಾರ್ಮರ್ಸ ಕೃಷಿಕರು ಬದುಕುತ್ತಿದ್ದರು ಅಂತಹ ಕಡೆ ಒಂದು ಫ್ಯಾಕ್ಟರಿ ಓನರೇ ಸ್ವತಃ ಇದೆಲ್ಲಾ ಮಾಡಿಕೊಂಡು ಜಮೀನು ಅವನೇ ಇಟ್ಟುಕೊಳ್ಳುತ್ತಾನೆ ಕಾರ್ಖಾನೆಯನ್ನು ಅವನೇ ಇಟ್ಟುಕೊಳ್ಳತ್ತಾನೆ ಎನ್ನತಕ್ಕಂಥ ಮಾತನ್ನು ಅವರು ಮರೆಯಬಾರದು. ಏತಕ್ಕೆ ಈ ಮಾತನ್ನು ಅವರು ಆಡುತ್ತಿದ್ದಾರೆ ಎಂಬುದು ನನಗೆ ಗೊತ್ತಾಗುತ್ತಿಲ್ಲ.

4.40 ಪಿ.ಎಂ.

+ ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಇದುವರೆಗೂ ನಾಗೇಗೌಡರು ಮಾತನಾಡಿದ್ದನ್ನು ಮತ್ತು ಶ್ರೀ ಎಂ.ಪಿ. ಪ್ರಕಾಶರವರು ಸಾಮಾಜಿಕ ನ್ಯಾಯಗಳ ಬಗ್ಗೆ ಮತ್ತು ಮಹಿಳೆಯರ ಬಗ್ಗೆ ಮಾತನಾಡಿದ್ದನ್ನು ಇದುವರೆಗೆ ಕೇಳಿದೆ. ಈಸಾಮಾಜಿಕ ನ್ಯಾಯವನ್ನು ಯಾರಿಗೆ ಕೊಟ್ಟಿದ್ದಾರೆ. ಈ ಕಾನೂನನ್ನು 1974ನೇ ಇಸವಿಯಲ್ಲಿ ತಂದಾಗ, ಭೂ ಸುಧಾರಣಾ ಕಾಯಿದೆಯನ್ನು ತಂದು ವಿಧವೆಯರಿಗೆ ಏನು ಹಕ್ಕು ಇತ್ತು. ಅದನ್ನು ತೆಗೆದು ಹಾಕಿದಿರಿ, ಅವರನ್ನು ಮನೆಗೆ ಹೋಗುವ ಹಾಗೆ ಮಾಡಿದಿರಿ, ಅವಿವಾಹಿತ ಹೆಣ್ಣು ಮಕ್ಕಳನ್ನು ಫ್ಯಾಮಿಲಿ ಫಿನಿಶನನ್ನಲ್ಲಿ ಸೇರಿಸಿಕೊಂಡಿರಿ, ಗಂಡು ಮಕ್ಕಳಿಗೆ ಒಂದು ಕಾನೂನು ಮತ್ತು ಹೆಣ್ಣು ಮಕ್ಕಳಿಗೆ ಒಂದು ಕಾನೂನನ್ನು ತಂದಿರಿ. ಅವರನ್ನೂ ಇವರ

ಜೊತೆಗೆ ಸೇರಿಸಿಕೊಂಡು ಗಂಡು ಮಗನಿಗೆ ಸೀಲಿಂಗ್ ಕೊಟ್ಟರಿ. ಆದರೆ ಹೆಣ್ಣು ಮಕ್ಕಳಿಗೆ ಕೊಡಲಿಲ್ಲ, ಮಹಿಳೆಯರ ಜೊತೆಯಲ್ಲಿಯೇ ಹೆಣ್ಣು ಮಕ್ಕಳನ್ನು ಸೇರಿಸಿದಿರಿ, ಇದಕ್ಕೆ ಏನಾದರೂ ಕಾನೂನಿನಲ್ಲಿ ಅಮೆಂಡಮೆಂಟ್ ತಂದಿದ್ದೀರಾ? Progressive Legislation ಯಾವ ವಿಷಯ ತಂದಿದ್ದೀರಿ, ಇವೊತ್ತಿನ ದಿವಸ ಈ ಅಮೆಂಡಮೆಂಟನ್ನು? ಇಂಡಸ್ಟ್ರೀಯಲಿಸಟ್ಸ, ಸೊಸೈಟೀಸ್, ಎಜ್ಯುಕೇಷನಲ್ ಇನಸಿಟಿಟ್ಯೂಷನ್ಸ, ಯಾರಿಗೆ ತಂದಿದ್ದೀರಿ ಅಂದರೆ ತನ್ನ ಜೀವನಕ್ಕೋಸ್ಕರ ಇಟ್ಟುಕೊಂಡಿದ್ದರಲ್ಲಾ, ಅದನ್ನೂ ಕೂಡ ತೆಗೆದುಹಾಕಿದಿರಿ. ಅಪ್ಪ, ಅಮ್ಮ ಕೊಟ್ಟಂಥ ಸ್ತ್ರೀಧನ ಆಸ್ತಿಏನಿತ್ತು ಅದನ್ನೂ ಕೂಡ ತೆಗೆದುಹಾಕಿದಿರಿ. ಈ ಕಾನೂನಿನಲ್ಲಿ ಇವೊತ್ತು ನೀವು ಹೇಳುತ್ತಿದ್ದೀರಿ ಸಾಮಾಜಿಕ ನ್ಯಾಯ ಎಂದು. ಯಾರಿಗೆ ಸಾಮಾಜಿಕ ನ್ಯಾಯ, ಮಹಿಳೆಯರಿಗೆ ಇಲ್ಲದ ಸಾಮಾಜಿಕ ನ್ಯಾಯ, ವಿಧವೆಯರಿಗೆ ಇಲ್ಲದ ಸಾಮಾಜಿಕ ನ್ಯಾಯ ಹೆಣ್ಣು ಮಕ್ಕಳಿಗೆ ಇಲ್ಲದಂಥ ಸಾಮಾಜಿಕ ನ್ಯಾಯದ ಕಾನೂನನ್ನು ನೀವು ತಂದಿದ್ದೀರಿ, ಬಹಳ ದೊಡ್ಡದಾಗಿ ಇದನ್ನು ತಂದಿದ್ದೀರಿ. ಮಾನ್ಯ ಅಧ್ಯಕ್ಷರೇ, ಇವೊತ್ತು ಪಂಜಾಬನಲ್ಲಿ, ಹರಿಯಾಣದಲ್ಲಿ ಮತ್ತು ಕೇರಳದಲ್ಲಿ ಕಾನೂನನ್ನು ತಂದಿದ್ದಾರೆ, ಮಠ ಮಾನ್ಯಗಳಿಗೆ ಎಕ್ಸಂಪಶನ್ ಕೊಟ್ಟರು, ಮಠಗಳಿಗೆ ಏನು ಧಾನ,ದತ್ತಿ ಕೊಟ್ಟಿದ್ದರು ಮಠಗಳನ್ನು ಬೆಳೆಸಬೇಕು ಎಲ್ಲರನ್ನೂ ಒಂದುಮಾಡಬೇಕು ಎಂದು ಅದಕ್ಕೆ ಎಕ್ಸೆಂಪಶನ್ ಕೊಟ್ಟರು, ಆ ನಿಟ್ಟಿನಲ್ಲಿ ಅಲ್ಲೆಲ್ಲಾ ಕಾನೂನನ್ನು ತಂದರು. ಆದರೆ ಕರ್ನಾಟಕದಲ್ಲಿ ಇದನ್ನು ತರಲಿಲ್ಲ, ಇಲ್ಲಿ ಹೆಣ್ಣು ಮಕ್ಕಳಿಗಿಲ್ಲ, ದಾನ ದರ್ಮ ಮಾಡಿದಂಥ ಮಠಮಾನ್ಯಗಳಿಗೆ ಇವೊತ್ತು ಎಕ್ಸಂಪೆಶನ್ ಇಲ್ಲ, ಆದರೆ ನಿಮ್ಮ ಆದ್ಯತೆ ಯಾರಿಗೆ? ಬಹು ಮಹಡಿ ಕಟ್ಟಡ ಕಟ್ಟುವವರಿಗೆ ಮಾತ್ರ, ಕೈಗಾರಿಕೋದ್ಯಮಿಗಳಿಗೆ, ಬಂಡವಾಳಶಾಹಿಗಳಿಗೆ, ಕ್ಯಾಪಿಟಲಿಸ್ಟ ಗೌವರ್ನಮೆಂಟ್ ಎನ್ನತಕ್ಕಂಥ ಹೆಸರು ನಿಮಗೆ, ನಿಮ್ಮನ್ನು ಪ್ರತಿ ಜನ್ಮಜನ್ಮದಲ್ಲೂ ನೆನಸಿಕೊಳ್ಳಬೇಕಾಗುತ್ತದೆ, ಬಂಡವಾಳಶಾಹಿ ಸರ್ಕಾರ, ಬಂಡವಾಳ ಶಾಹಿಗಳಿಗೋಸ್ಕರ ತಂದಿರತಕ್ಕಂಥ ಕಾನೂನು ಇದು ಎಂದು ಎಲ್ಲರೂ ಕೂಡ ಜಗಜಾಹಿರಾಗಿ ಹೇಳಲು ಬರತಕ್ಕಂಥ ಕಾನೂನನ್ನು ನೀವು ತಂದಿದ್ದೀರಿ. ಮಾನ್ಯ ಅಧ್ಯಕ್ಷರೇ, ಈಗಿರತಕ್ಕಂಥ ಕಾರ್ಖಾನೆಗಳಿಗೆ ಒಂದು ಲೈಟ್ ಕೊಡುವುದಕ್ಕೆ ಇವರಿಗೆ ಆಗಿಲ್ಲ, ನಾನು ಹೇಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ದಯಮಾಡಿ ಹಿಂದೂ ಪದ್ಧತಿಯ ಕಾನೂನಿನ ಪ್ರಕಾರವಾಗಿ ಮಹಿಳೆಯರಿಗೆ ಸಂಪೂರ್ಣವಾಗಿ ಆಸ್ತಿಯ ಹಕ್ಕು ಇದೆ. ಮಿತಾಕ್ಷರದಲ್ಲಿರತಕ್ಕಂಥ ಹಿಂದೂ ಕಾಯಿದೆಯನ್ನು ನಾವು ತಿದ್ದುಪಡಿ ಮಾಡಿ ಗಂಡು ಮಕ್ಕಳಿಗೆ ಇರುವ ಸಮಾನವಾದ ಹಕ್ಕನ್ನು ಸ್ತ್ರೀಗೂ ಕೂಡ ನಾವು ದಯಪಾಲಿಸಿದ್ದೇವೆ. ಈ ದೃಷ್ಟಿ ಇರುವಾಗ ಇದರಲ್ಲಿ ನಾವು ಪ್ರತ್ಯೇಕವಾಗಿ ಕಾಣಬೇಕಾದದ್ದು ಏನೂ ಇಲ್ಲ. ಯಾರು ಅಲ್ಪ ವಯಸ್ಸಿನವರು ಇರುತ್ತಾರೆ ಮತ್ತು ಮದುವೆಯಾಗದವರು ಇರುತ್ತಾರೆ ಅವರನ್ನು ಒಂದು ಕುಟುಂಬ ಎನ್ನುವ ವ್ಯಾಖ್ಯಾನದಲ್ಲಿ ಸೇರಿಸಿದ್ದೇವೆಯೇ ವಿನಹ ಮಹಿಳೆಯರನ್ನು ಪ್ರತ್ಯೇಕವಾಗಿ ಗುರುತಿಸಿ ಅವರನ್ನು ಶೋಷಣೆ ಮಾಡಿರತಕ್ಕಂಥದ್ದು ಏನಿದೆ ಇದರಲ್ಲಿ?

ಶ್ರೀಮತಿ ಪ್ರಮೀಳಾ ನೇಸರ್ಗಿ : ನೀವು ಮೊನ್ನೆ ತಂದಿರತಕ್ಕಂಥ ಲ್ಯಾಂಡ್ ರೀಫಾರ್ಮ್ಸ್ ಆಕ್ಟ್‌ನಲ್ಲಿ ಇರುವ ಡೆಫಿನಿಷನನಲ್ಲಿದೆ. ಆ ಕಾಯಿದೆ ಪ್ರಕಾರ ಇದಕ್ಕೂ ಅನ್ವಯವಾಗುತ್ತದೆ. Not withstanding anything contained in the Land Reforms Act and the definition made under

the land Reforms Act. Ladies are entitled ಎಂದು ಹೇಳುವುದಕ್ಕೆ ತಯಾರು ಇದ್ದೀರಾ? ಹೇಳಿ, ವೆಲ್‌ಕಮ್ ಮಾಡುತ್ತೇವೆ, ಕಾನೂನನ್ನು ತಂದಿದ್ದೀರಿ, ಇನ್ನು ಪ್ರೆಸಿಡೆನ್ಸಿಯಲ್ ಅಪ್ರೂವಲ್ ತೆಗೆದುಕೊಂಡಿಲ್ಲ. ಇವೊತ್ತಿನವರೆಗೂ ಕೂಡ ಜಾರಿಗೆ ತಂದಿಲ್ಲ. ಮಹಿಳೆಯರಿಗೆ ಕಾಯಿದೆಯನ್ನು ತರುತ್ತೇವೆ ಎಂದು ಹೇಳಿದ್ದಿರಿ, ಆದರೆ ಇನ್ನೂ ತಂದಿಲ್ಲ, ಏಕೆ ತಂದಿಲ್ಲವೆಂದು ನಾವು ಕೇಳುವುದಕ್ಕೆ ನಮಗೆ ಹಕ್ಕು ಇದೆಯಾದ ಕಾರಣ ನಾವು ಕೇಳುತ್ತೇವೆ, ಅದಕ್ಕೆ ಉತ್ತರ ಹೇಳಬೇಕು, ಅಮೆಂಡಮೆಂಟ್ ನೀವು ತರುತ್ತೀರಾ? ನೀವು ತೆಗೆದುಕೊಂಡು ಬನ್ನಿ, ನಾವು ಸ್ವಾಗತ ಮಾಡೋಣ, ವಿಧವೆಯರಿಗೆ, ಸ್ತ್ರೀಧನ ಹಕ್ಕಿಗೆ, ಅವಿವಾಹಿತ ಹೆಣ್ಣು ಮಕ್ಕಳಿಗೆ ಈ ಅನ್ಯಾಯ ಏನು ಆಗಿದೆ ಅದನ್ನು ತೆಗೆಯುತ್ತೇವೆ ಎಂದು ಹೇಳಿ ಅಮೆಂಡಮೆಂಟ್ ತನ್ನಿ, ಅದನ್ನು ಸ್ವಾಗತ ಮಾಡೋಣ. ಅದನ್ನು ಬಿಟ್ಟು ಮಾನ್ಯ ಅಧ್ಯಕ್ಷರೇ, ಇವೊತ್ತು ಕರ್ನಾಟಕದಲ್ಲಿರತಕ್ಕಂಥ ಕಾರ್ಖಾನೆಗಳಿಗೆ 24 ಗಂಟೆಗಳ ಕಾಲ ವಿದ್ಯುತ್ ಇಲ್ಲದೇ ನಿಂತುಹೋಗಿವೆ, ಹಲವಾರು ಕಾರ್ಖಾನೆಗಳು ಲಾಕೌಟ್ ಆಗಿವೆ, ಕಾರ್ಖಾನೆಗಳು ಇವೊತ್ತು ನಡೆಯದಂಥ ಪರಿಸ್ಥಿತಿ ನಿರ್ಮಾಣವಾಗಿದೆ, ಲಾಸ ಆಗುತ್ತಿದೆ, ಕರೆಂಟ್ ಕೊಡುವುದಕ್ಕೆ ಶಕ್ತಿ ಇಲ್ಲ, ಕುಡಿಯುವುದಕ್ಕೆ ನೀರಿಲ್ಲ, ಕೊಡುವುದಕ್ಕೆ ಬೆಳಕಿಲ್ಲ, ಆದರೆ ಇಂಡಸ್ಟ್ರೀಯಲಿಸ್ಟಗೆ 40 ಯೂನಿಟ್ 200 ಎಕರೆ ಜಮೀನನ್ನು ಕೊಡುವುದಕ್ಕೆ ಹೊರಟಿದ್ದೀರಿ, ಯಾರಿಗೋಸ್ಕರ ಕೊಡುತ್ತಿದ್ದೀರಿ? ಏತಕ್ಕೋಸ್ಕರ ಕೊಡುತ್ತಿದ್ದೀರಿ? ನಾನು ಇದನ್ನು ಕೇಳುತ್ತಿದ್ದೇನೆ, ಸೊಸೈಟೀಸ್ ಆಕ್ಟನಲ್ಲಿ, ಕಂಪನೀಸ್ ಆಕ್ಟನಲ್ಲಿ ನಿಮ್ಮ ಕಾನೂನಿನನ್ವಯ ಸೊಸೈಟಿಗಳಿಗೆ ಈ ಜಮೀನನ್ನು ಆಕ್ಷೆರು ಮಾಡುವುದಕ್ಕೆ ಬರುವುದಿಲ್ಲ ಎಂದು ಹೈ ಕೋರ್ಟ ತೀರ್ಮಾನ ಕೊಟ್ಟಿತು, ಈ ರೀತಿ ತೀರ್ಮಾನ ಕೊಟ್ಟಿರುವುದು ಜಾಲಪ್ಪನವರಿಗೂ ಗೊತ್ತಿದೆ. ಅದನ್ನು ಅವರು ಇಲ್ಲಿ ತಂದು ಇಟ್ಟುಕೊಂಡಿದ್ದಾರೆ. ಈ ತೀರ್ಮಾನವನ್ನು ಜಸ್ಟೀಸ್ ರಾಮಾಜೋಯಿಸರು ಕೊಟ್ಟಾಗ ಸುಪ್ರೀಂಕೋರ್ಟಗೆ ಹೋದಿರಿ, ಸ್ಟೇಟ್ ಗೌವರ್ನಮೆಂಟ್ ಅಪೀಲ್ ಹಾಕಲಿಲ್ಲ, ಆಗ ಸುಪ್ರೀಂ ಕೋರ್ಟನವರು ಇದನ್ನು ಒಪ್ಪಿಕೊಳ್ಳುತ್ತೀರಾ ಎಂದು ಕೇಳಿದಾಗ ತಾವು ಒಂದು ಅಪೀಲ್ ಹಾಕತಕ್ಕಂಥ ನಾಟಕವನ್ನು ಮಾಡಿದಿರಿ, ಆದರೆ ಅಪೀಲ್ ವಜಾ ಆಯಿತು, ಈ ವಿಷಯ ಕೂಡ ತಮಗೆ ಗೊತ್ತಿದೆ, ಆಕ್ಷೆರು ಮಾಡುವುದಕ್ಕೆ ಸೊಸೈಟಿಗಳಿಗೆ ಬರುವುದಿಲ್ಲ, ಅಕ್ವಿಸಿಷನ್ ಮಾಡುವುದಕ್ಕೆ ಬರುವುದಿಲ್ಲ ಎಂದು ತಿಳಿದು ಅದನ್ನು ಇಲ್ಲಿ ಲ್ಯಾಂಡ್ ರೀಫಾರ್ಮ್ಸ್ ಆಕ್ಟ್ ಪ್ರಕಾರ ಕೊಡುವುದಕ್ಕೆ ಈ ಕಾನೂನನ್ನು ತಂದಿದ್ದೀರಿ. ಇದನ್ನು ಯಾವ ರೀತಿ ತಂದಿದ್ದೀರಿ.

ಶ್ರೀ ಆರ್. ಎಲ್. ಜಾಲಪ್ಪ : ನಾನು ಇದಕ್ಕೆ ಉತ್ತರ ಕೊಡುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಉತ್ತರವನ್ನು ಹಂತ ಹಂತವಾಗಿ ಕೊಡುವಾಗ ಕೊಡಿ.

ಶ್ರೀ ಆರ್.ಎಲ್.ಜಾಲಪ್ಪ : ಒಂದು ನಿಮಿಷ ಈಲ್ಡ ಆಗಿ ತಾವು, ಈ ಹೌಸ್‌ನಲ್ಲಿ ಸುಮ್ಮನೇ ಮಿಸ್ಲೇಕ್ ಮಾಡುವುದು ಸರಿಯಲ್ಲ, ಅವರು ಹೇಳಿರುವುದು ಏನೆಂದರೆ It was a colourable exercise of power ಎಂದು ಕೇವಲ ನಾಲ್ಕು ಕೇಸಗಳಲ್ಲಿ ವಜಾ ಮಾಡಿದ್ದಾರೆಯೇ ವಿನಃ ನ್ಯಾಯಯುತವಾಗಿ ಕೊಡುವುದಕ್ಕೆ ಇವೊತ್ತು ಕೂಡ ಸುಪ್ರೀಂ ಕೋರ್ಟ್‌ನವರ ಅಬ್ಜಕ್ಷನ್ ಏನು ಇಲ್ಲ. ಅಲ್ಲಿ ಕೊಡುವುದಕ್ಕಾಗುವುದಿಲ್ಲವೆಂದು ಅಮೆಂಡ್‌ಮೆಂಟ್ ತಂದಿದ್ದಾರೆ ಎಂದು ಹೇಳುವುದಕ್ಕೆ ನೀವು ಹೋಗಬೇಡಿ, ಅಲ್ಲಿ ಅವೊತ್ತು ಪರಿಸ್ಥಿತಿ ಏನಿತ್ತು ಎಂದರೆ ನೇರವಾಗಿ ಜಮೀನನ್ನು ಯಾರೂ

ಕೊಂಡುಕೊಳ್ಳುವುದಕ್ಕೆ ಆಗುತ್ತಿರಲಿಲ್ಲ. ಕೃಷಿಯೇತರರಿಗೆ ಜಮೀನನ್ನು ಕೊಂಡುಕೊಳ್ಳುವುದಕ್ಕೆ ಅವಕಾಶ ಇರಲಿಲ್ಲ. ಆದರಿಂದ ಯಾರೋ ಹೆಸರಿಗೆ ಜಿ.ಪಿ.ಎ. ಬರೆದುಕೊಟ್ಟು ಅವನು ಸರ್ಕಾರದವರ ಹತ್ತಿರ ಇನಫ್ಯೂಯೆನ್ಸ ಮಾಡಿ four one, six one ಮಾಡಿಸಿಕೊಂಡಿದ್ದಾನೆಯಾದ ಕಾರಣ This is a colourable exercise of power ಎಂದು ಹೇಳಿ ಅದನ್ನು Struck down ಮಾಡಿದ್ದುದು. ಕೊಡುವುದಕ್ಕೆ ಆಗುವುದಿಲ್ಲವೆಂದು ಅಲ್ಲ ಇದನ್ನು ತಂದಿರುವುದು. Even today, Government has got that power. ನನ್ನ ಅಭಿಪ್ರಾಯ ಏನು, ಅಕ್ವಿಸಿಷನ್ ಮಾಡಿ ಅವನಿಗೆ ಮುಂಡಾಮೋಚಬಿಟ್ಟು ರೈತನಿಗೆ ಏನೋ ಅಲ್ಪಸ್ವಲ್ಪ ಅವನಿಗೆ ಹಾಕಿಬಿಟ್ಟು ನಿಮಗೆಲ್ಲಾ ಮನೆ ಕಟ್ಟಿಸಿಕೊಡುವ ಉದ್ದೇಶವಲ್ಲ, ಆದ್ದರಿಂದ ನಿಮಗೆ ಬೇಕಾದರೆ ದುಡ್ಡು ಕೊಟ್ಟು ಕೊಂಡುಕೊಳ್ಳಿ ಮನೆಯನ್ನು ಕಟ್ಟಿಕೊಳ್ಳಿ.

ಶ್ರೀ ವೈ. ರಾಮಕೃಷ್ಣ : ಮಾನ್ಯ ಅಧ್ಯಕ್ಷರೇ, ನಾನು ನಿನ್ನೆಯೇ ಹೇಳಿದ್ದೇನೆ The principle involved in the housing case, and co-operative Societies ಅವರಿಗೋಸ್ಕರ ಸರ್ಕಾರ ಅಕ್ವೈರು ಮಾಡಿಕೊಡತಕ್ಕದ್ದು ಅನಾವಶ್ಯಕ ಎನ್ನುವುದು ನಿಯಮ. ಇದು ಒಂದು ಸೊಸೈಟಿಗಾದರೇನು, 10 ಸೊಸೈಟಿಗಾದರೇನು, 100 ಸೊಸೈಟಿಗಾದರೇನು, ಇದು ನನ್ನ ಒಂದನೆಯ ಪ್ರಶ್ನೆ, ಇನ್ನು ಎರಡನೆಯದಾಗಿ..

SRI R.L. JALAPPA : In two cases, they have upheld.

ಶ್ರೀ ವೈ. ರಾಮಕೃಷ್ಣ : ಎರಡು ಕೇಸಾದರೇನು, ಒಂದು ಕೇಸಾದರೇನು ಸ್ವಾಮಿ The principles in the Supreme Court have been upheld, ಅಂದಮೇಲೆ ಇನ್ನೇನು ಬೇರೆ ಮಾರ್ಗವಿಲ್ಲ, ಅದಕ್ಕೋಸ್ಕರ ನೀವು ಏನು ಮಾಡಿದ್ದೀರೆಂದರೆ just to accommodate ಇಲ್ಲಿ ಮಾಡಿದ್ದೀರಿ, ಇದು ಒಂದು. ಮೊದಲನೆದಾಗಿ ನೀವು ಒಂದು ಸೊಸೈಟಿಯನ್ನು ರೆಕಗನೈಸ್ ಮಾಡಿದಿರಿ, ಇವೊತ್ತು ಮೂರು ಸೊಸೈಟೀಸ್ ಬರುತ್ತವೆ ಆಗ ನೀವು ಇಲ್ಲ ಎಂದು ಹೇಗೆ ಹೇಳುವುದಕ್ಕಾಗುತ್ತದೆ? They assert their fundamental right by filing this in the High Court. ಹಾಗೆ ಊರೆಲ್ಲಾ ನೀವು ರಿಯಲ್ ಎಸ್ಟೇಟ್ ಏಜೆನ್ಸಿ ಮಾಡಿ, ಜಮೀನನ್ನೆಲ್ಲಾ ನೀವು ತೆಗೆದುಕೊಂಡ ಹಾಗೆ ಲ್ಯಾಂಡ್ ರೀಫಾರ್ಮ್ಸ ಆಕ್ಟ ಜಾರಿಗೆ ತಂದಹಾಗೆ ಆಗುವುದಿಲ್ಲವೇ ಸ್ವಾಮಿ.

ಶ್ರೀ ಆರ್. ಎಲ್. ಜಾಲಪ್ಪ : ಇವರು ಹೇಳುವ ಪ್ರಕಾರ ಜಮೀನು ಯಾರೂ ಮಾಡುವ ಹಾಗೆಯೇ ಇಲ್ಲ. ನೀವು ಜಮೀನನ್ನು ಮಾರು ಹಾಗಿಲ್ಲ, ಮಾರಬೇಡಿ; ನಾವು ನಿಮಗೆ ಪವರ್ ಕೊಟ್ಟಿದ್ದೇವೆ ಜಮೀನು ಮಾರುವುದಕ್ಕೆ ಎಂದು ನೀವು ತಿಳಿದುಕೊಂಡುಬಿಟ್ಟಿದ್ದೀರಿ, ಸ್ವಾಮಿ ನಾನು 4 ಎಕರೆ ಜಮೀನುದಾರ, ನೀವ್ಯಾರು ನನಗೆ ಮಾಡಬೇಡಿ ಎಂದು ಹೇಳುವುದಕ್ಕೆ? ನಾನು ಅದನ್ನು ಕನವರ್ಟ ಮಾಡಿಕೊಳ್ಳುತ್ತೇನೆ ಮನೆ ಕಟ್ಟಿಕೊಳ್ಳುತ್ತೇನೆ ಅಥವಾ ಅದನ್ನು ಮಾರಿಕೊಳ್ಳುತ್ತೇನೆ How can you prevent me? Under what provisions you can prevent me? ಟಿನೆಂಟ್ಸಿಗೇನು ಕೊಟ್ಟಿದ್ದೇವೆ ಅದನ್ನು 15 ವರ್ಷ ಮಾರಬಾರದು ಎಂದು ಇದೆ, ನಿಮ್ಮ ಗುಜರಾತ್ ಸರ್ಕಾರ ಮಾಡಿರುವ ಕೆಲಸವನ್ನು ನೀವು ನೋಡಿದ್ದೀರೇನು?

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ : ಓದುತ್ತೇನೆ, ಬಹಳ ಚೆನ್ನಾಗಿ ಮಾಡಿದ್ದಾರೆ, ಗುಜರಾತ್ ಸರ್ಕಾರದವರು 27ನೇ ತಾರೀಖಿನ ದಿವಸ ಬಹಳ ಚೆನ್ನಾಗಿ ಮಾಡಿದ್ದಾರೆ. ನಮ್ಮಲ್ಲಿ ಇದ್ದಹಾಗೆ ಅಲ್ಲೂ ಇತ್ತು 15 ವರ್ಷ ಮಾರಬಾರದು ಎಂದು.

ಅಧ್ಯಕ್ಷರು : "ಹಿಂದು" ಪೇಪರ್‌ನಲ್ಲಿ ಬಂದಿದೆಯಲ್ಲವೇ?

ಶ್ರೀ ಆರ್.ಎಲ್. ಜಾಲಪ್ಪ : ಹಿಂದೂ ಪೇಪರನಲ್ಲಿದೆ, 15ವರ್ಷ ಮಾರಬಾರದು ಎಂದು ಇದೆ, ಈಗ ಏನು ಮಾಡಿದ್ದಾರೆಂದರೆ 15 ವರ್ಷವಾದ ಮೇಲೆ ನೀವು ಮಾರಿಕೊಳ್ಳಿ ಆದರೆ ನಮಗೆ ಶೇಕಡ 60 ರಷ್ಟು ನಮಗೆ ಕಂದಾಯ ಕಟ್ಟಿಬಿಡಿ ಎಂದರು, ಇದರಿಂದ ಲಾಭ ಎಷ್ಟು ಜನಕ್ಕೆ? Out of forty eight lakhs, forty lakhs.

MR. SPEAKER : BJP , though it isa National party, the Karnataka Unit may think the other way. ಅವರು ಯೋಚನೆ ಮಾಡಿದ ಹಾಗೆ ಇವರು ಯೋಚನೆ ಮಾಡಬೇಕು ಎಂದು ಎಲ್ಲಿದೆ?

ಶ್ರೀ ಆರ್. ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಅದು ರಾಷ್ಟ್ರೀಯ ಪಕ್ಷವಾಗಿ ಪ್ರಾಂತ್ಯ ಪ್ರಾಂತ್ಯಗಳಲ್ಲಿ ಬೇರೆ ಬೇರೆ ಭೂ ಸುಧಾರಣಾ ನೀತಿಯನ್ನು ಇಟ್ಟುಕೊಳ್ಳುವುದಾಗಿದ್ದರೆ ಅದಕ್ಕೆ ಸಂತೋಷ, ತಮಗೆ ಧನ್ಯವಾದಗಳು.

ಶ್ರೀ ಬಿ.ಎಸ್. ಯಡಿಯೂರಪ್ಪ : ಜನತಾ ದಳ ರೀಜನಲ್ ಪಾರ್ಟಿ, ಹೀಗಿರುವಾಗ ರಾಷ್ಟ್ರೀಯ ಪಕ್ಷದ ಬಗ್ಗೆ ತಾವು ಏಕೆ ಮಾತನಾಡುತ್ತೀರೋ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಇದು ಗುಜರಾತನಲ್ಲೂ ಒಂದೇ ಇರಬೇಕು, ರಾಜಾಸ್ಥಾನದಲ್ಲೂ ಒಂದೇ ಇರಬೇಕು, ಕರ್ನಾಟಕದಲ್ಲೂ ಒಂದೇ ಇರಬೇಕು.

MR. SPEAKER : You are a regional party with national character.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಜಾಲಪ್ಪನವರು ಬೇಕಾದರೆ ಸಮರ್ಥನೆ ಮಾಡಿಕೊಳ್ಳಲಿ ಆದರೆ ಗುಜರಾತ್, ವೆಸ್ಟಬೆಂಗಾಲ್, ಕೇರಳ ಹೇಳಿಬಿಟ್ಟು ಅವರು ತಪ್ಪಿಸಿಕೊಳ್ಳುವುದು ಬೇಡ. ನಾನು ಕೇಳಿರತಕ್ಕಂಥದ್ದು ನನ್ನ ಉದ್ದೇಶಕ್ಕೆ ಕೇಳುತ್ತೇನೆ, ಅವರು ಇವರು ಎಂದು ಅವರಿವರ ಮೇಲೆ ತೋರಿಸಿ ಅವರು ಹೀಗೆ ಮಾಡಿಲ್ಲವೇ, ಇವರು ಹೀಗೆ ಮಾಡಿಲ್ಲವೇ ಎಂದು ಏಕೆ ಹೇಳಬೇಕು.

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ : ಕರ್ನಾಟಕ ಒಂದು ರಾಷ್ಟ್ರ ಅಲ್ಲ, ಇದು ಒಂದು ರಾಜ್ಯ. ಕರ್ನಾಟಕ

ಪಕ್ಕದ ಸ್ಟೇಟಿನಲ್ಲಿ ಇಂಡಸ್ಟ್ರೀಸ್ ಮಾಡುವಾಗ, ಪಕ್ಕದ ಸ್ಟೇಟನಲ್ಲಿ ಫ್ಲಾರಿ ಕಲ್ಚರ್ ಮಾಡುವಾಗ ನಾವು ಬೇಡ ಎಂದು ಬಾಗಿಲು ಮುಚ್ಚಿಕೊಂಡು ಕುಳಿತುಕೊಂಡು ಬಿಡಲೇ?

SMT. PRAMILA NESARGI : The Supreme Court has laid down that it is a colourable legislation and colourable exercise of power. ಅಮರ ಜ್ಯೋತಿ ಸೊಸೈಟಿಗೆ ಮಾತ್ರ ಲೇಡೌನ್ ಮಾಡಿಲ್ಲ. ಯಾವುದೇ ಸೊಸೈಟಿಗೆ ಅಕ್ವೈರ್ ಮಾಡಬೇಕಾದರೆ ಕಾನೂನಿನಲ್ಲಿ ಹಕ್ಕು ಇದೆಯೇ ಎನ್ನುವಂತಹ ಪ್ರಶ್ನೆಯನ್ನು ಅಲ್ಲಿ ತೀರ್ಮಾನ ಮಾಡಿದ್ದಾರೆ. ದಯವಿಟ್ಟು ತಾವು ಜಡ್ಜಮೆಂಟ್ ಮೊದಲಿನಿಂದ ಕೊನೆಯವರೆಗೂ ಓದಿ ನೋಡಿ. ಅಲ್ಲಿ ಲೇಡೌನ್ ಮಾಡಿರುವುದನ್ನು ಸೊಸೈಟಿಯವರಿಗೆ ಲ್ಯಾಂಡ್ ಅಕ್ವಿಸಿಷನ್ ಆಕ್ಟ್‌ನ್ನು ಉಪಯೋಗಿಸಿಕೊಂಡು ನೀವು ಅಕ್ವೈರ್ ಮಾಡುವುದಕ್ಕೆ ಆಗುವುದಿಲ್ಲ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳಿದ್ದಾರೆ. It is not colourable exercise of the power. ಉದಾಹರಣೆಗೆ ಅಮರಜ್ಯೋತಿ ಸೊಸೈಟಿ ಮತ್ತು ಮಿಕ್ಕ ಸೊಸೈಟಿಗಳನ್ನು ನಿಮ್ಮ ಏನಕ್ವೈರಿ ರಿಪೋರ್ಟ ಆಧಾರದ ಮೇಲೆ ಮಾಡಿದರು. ಸರ್ಕಾರಕ್ಕೆ ಎಷ್ಟು ಶೇರ್ ಎಂದು ಕೇಳಿದಾಗ ಒಂದು ರೂಪಾಯಿ ಶೇರ್ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಇದು ಹೈಕೋರ್ಟಿನಲ್ಲಿ ಜಡ್ಜಮೆಂಟ್ ಕೊಟ್ಟಿದೆ. ಆದುದರಿಂದ ನಮಗೆ ಹಕ್ಕಿದೆ ಎಂದು ಹೇಳಿದ್ದಾರೆ. ಅದೆಲ್ಲಾ ನಿಜ. ಆ ವಿಚಾರ ನಮಗೆ ಗೊತ್ತಿಲ್ಲ ಎನ್ನುವುದಲ್ಲ. ಇದು ಜಡ್ಜಮೆಂಟ್‌ನಲ್ಲಿ ಬರುತ್ತದೆ. ನಾನು ಓದಿದ್ದೇನೆ. ಆದುದರಿಂದ ಇಲ್ಲಿ ತಾವು ಆಕ್ಟನಲ್ಲಿ ಹೇಳಿದ್ದೀರಿ ಇಂಡಸ್ಟ್ರೀಸ್ ನಮ್ಮ ಕರ್ನಾಟಕ್ಕೆ ಏಕೆ ಬರುವುದಿಲ್ಲ ಎಂದು. ಇಂಡಸ್ಟ್ರೀಸ್ ಡೆವಲಪಮೆಂಟ್ ಬೋರ್ಡ ಎಂದು ಇಲ್ಲವೇ? ಡೆವಲಪಮೆಂಟ್ ಕಾರ್ಪೋರೇಷನ್ ಆಕ್ಟ ಎಂದು ಮಾಡಿಲ್ಲವೇ? ಕರ್ನಾಟಕ ಸ್ಟೇಟ್ ಇಂಡಸ್ಟ್ರೀಸ್ ಕಾರ್ಪೋರೇಷನ್ ಎಂದು ಮಾಡಿಲ್ಲವೇ? ಕೆ.ಐ.ಡಿ.ಬಿ. ಆಕ್ಟ ಪ್ರಕಾರ ಜಮೀನನ್ನು ಅಕ್ವೈರ್ ಮಾಡುವುದಕ್ಕೆ ಬರುವುದಿಲ್ಲವೆ? ಕಾನೂನಿನ ಅಡಿಯಲ್ಲಿ ಏಕೆ ತರುತ್ತಿದ್ದೀರಿ. ಭೂಸುಧಾರಣಾ ಕಾನೂನಿನ ಅಡಿಯಲ್ಲಿ ಏಕೆ ತರುತ್ತಿದ್ದೀರಿ? It is an act meant only for agricultural reforms. ಈ ಸುಧಾರಣೆಗೋಸ್ಕರ ಅಗ್ರಿಕಲ್ಚರಲ್ ಲ್ಯಾಂಡ್ ರೆಫ್ರಾಮ್ಸ್ ಆಕ್ಟ ಭೂಸುಧಾರಣೆಗೆ ಬಂದಿರತಕ್ಕಂಥ ಕಾನೂನು, ಬೇರೆ ಕಾನೂನೇ ಇಲ್ಲ. ನೀವು ಬೇಗ ಕಾನೂನಿನ ಅಡಿಯಲ್ಲಿ ಯಾವ ಲ್ಯಾಂಡ್ ಬೇಕಾದರೂ ಅಕ್ವೈರ್ ಮಾಡಬಹುದು. ಅವನಿಗೆ ಏನಾದರೂ ಹಕ್ಕು ಕೊಟ್ಟಿದ್ದರೆ, 10 ವರ್ಷವಾಗಿರಲಿ, ಆಗದೇ ಇರಲಿ ಕೋರ್ಟ ಇರಲಿ, ಕೋರ್ಟ್‌ಗೆ ತೆಗೆದುಕೊಂಡು ಹೋಗಿ ಅಕ್ವೈರ್ ಮಾಡುವುದಕ್ಕೆ ಹಕ್ಕಿದೆ ಎಂದು ಹೇಳಿದರೂ ಕೂಡ ಕೋರ್ಟಿನಲ್ಲಿ ತೀರ್ಮಾನವಾಗುತ್ತದೆ. ಅದು ತೀರ್ಮಾನವಾಗಿರತಕ್ಕ ವಿಷಯ. ಸೆಕ್ಷನ್ 218 ಲ್ಯಾಂಡ್ ರಿಫಾರ್ಮ್ಸ್ ಆಕ್ಟ್‌ನಲ್ಲಿ ತಾವು ಒಂದು ಡೆಫಿನೇಷನ್ ಕೊಟ್ಟಿದ್ದೀರಿ. ಅಲ್ಲಿ ಇನಕ್ಲೂಡ್ಸ ಎಂದು ಹೇಳಿಲ್ಲ, ಮೀನ್ಸ್ ಎಂದು ಹೇಳಿರತಕ್ಕಂಥಾದ್ದು. The definition of land is elastic.

"Definifition of land- The land which is used or capable of being used for agricultural purpose or purposes specified thereto includes Horticultural, Forest, Government Plantation but does not include house-site or land used exclusively for non-agriculutral purposes.

ನಿಮ್ಮ ಡೆಫನೇಷನ್‌ಗೆ ಏನೂ ಅಮೆಂಡ್‌ಮೆಂಟ್ ತಂದಿಲ್ಲವಲ್ಲಾ! ನಾನ್ ಅಗ್ರಿಕಲ್ಚರ್ ಪರ್ಪಸ್‌ಗೆ ಉಪಯೋಗ ಮಾಡುವುದಕ್ಕೆ ಡೆಫನೇಷನ್‌ನಲ್ಲಿ ಇಲ್ಲವೇ ಇಲ್ಲ. ಸೆಕ್ಷನ್ 218ಗೆ ಅಮೆಂಡಮೆಂಟ್ ಮಾಡದೇ, ಭೂಮಿ ಬಗ್ಗೆ ಅಮೆಂಡ್ ತರದೇ ಬೇರೆ ಯಾವುದೇ ಸೆಕ್ಷನಗೆ ಅಮೆಂಡಮೆಟ್ ತರುವುದಕ್ಕೆ ಬರುವುದಿಲ್ಲ. In durdundeshwar case, its Constitutional validity was challenged in the Supreme Court and it was upheld.

SRI R.L. JALAPPA : You have to limit yourself only to the amended portion. You cannot traverse to the entire world.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಖರ್ಗೆಯವರು ಮಾತನಾಡಿದಾಗ ಕೇಳಿದರು. ನಾನು ಮಾತನಾಡುವಾಗ ಕಾನೂನು ಹೇಳುತ್ತೇನೆ ಎಂಬ ಹೆದರಿಕೆ ಬೇಡ. ಕಾನೂನಿನ ಅಡಿಯಲ್ಲಿ ಏನು ಇದೆ ಎಂಬುದನ್ನು ಹೇಳುತ್ತಿದ್ದೇನೆ. ತಾವು ಹೋದಸಲ ಕಾನೂನನ್ನು ಮಾಡಿದಿರಿ, ಗವರ್ನರ್ ಅಪ್ರೂವತ್ ಮಾಡಿದ್ದಾರೆ, ಆದುದರಿಂದ ನಮಗೆ ಮಾತನಾಡುವುದಕ್ಕೆ ಆಗುವುದಿಲ್ಲ ಎನ್ನುವ ಅಂಶತಮ್ಮ ಗಮನದಲ್ಲಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ತಪ್ಪು ಅಭಿಪ್ರಾಯ ಅದು. ಗವರ್ನರ್ ಅಪ್ರೂವಲ್ ಆಗಿದ್ದರೂ ಸಹ ಅದಕ್ಕೆ ಕಾನೂನಿನಲ್ಲಿ ಬೆಲೆ ಇಲ್ಲ. ಏಕೆ 9ನೇ ಶೆಡ್ಯೂಲನಲ್ಲಿ ಇದು ಇನಕ್ಲೂಡ್ ಆಗಿದೆ. ಅದಾದನಂತರ ಸೆಕ್ಷನ್ 63 ಲ್ಯಾಂಡ್ ರೆಫಾರ್ಮ್ ಆಕ್ಟ, ಅದನ್ನು ಅಪಹೋಲ್ಡ ಮಾಡತಕ್ಕಂಥ ಸಂದರ್ಭದಲ್ಲಿ it is subject to Article 31(a) of the Constitution. ನೀವು ಏನಾದರೂ ಈ ಕಾನೂನನ್ನು 31 'ಎ' ಮತ್ತು 'ಬಿ'ಗೆ ಒಳಪಡಿಸಿದ್ದೀರೋ? ಒಂದು ವೇಳೆ ಒಳಪಡಿಸಿದ್ದಾದರೆ 31 'ಎ' ನೋಡಿ.

"Provided that where such law is a law made by Legislature of a state, the provisions of this article shall not apply there to unless such law having been reserved for the consideration of the President has received his assent``.

ನಾನು ಕೇಳುತ್ತಿದ್ದೇನೆ ಎಲ್ಲಿ ಕಳುಹಿಸಿದ್ದೀರಿ? 31 'ಎ' ನೀವು ಪ್ರಿಸರ್ವ ಮಾಡಿಕೊಂಡಿಲ್ಲ. ಅಥವಾ ಪ್ರೆಸಿಡೆಂಟ್ ಅಪ್ರೂವಲ್ ತೆಗೆದುಕೊಂಡಿಲ್ಲ. ಪ್ರೆಸಿಡೆಂಟಗೆ ಅಪ್ರೂವಲಗೆ ಕಳುಹಿಸಿಕೊಟ್ಟಿಲ್ಲ. ತಾವು ಅಪ್ರೂವಲಗೆ ಕಳುಹಿಸಿಕೊಡದೇ ಇದ್ದಮೇಲೆ ಅದು ಕಾನೂನು ಆಗುವುದಿಲ್ಲ. ಅದು ಕಾನೂನೇ ಆಗದಿದ್ದಮೇಲೆ 109ಗೆ ಸೆಕ್ಷನಗೆ ಅಮೆಂಡಮೆಂಟ್ ತಾವು ಏನು ತಂದಿದ್ದೀರಿ ಈ ಅಮೆಂಡಮೆಂಟ್ ನಿಲ್ಲತಕ್ಕದ್ದಲ್ಲ.109ಗೆ ಅಮೆಂಡಿಮೆಂಟ್ ಒರಿಜಿನಲ್ ಆಕ್ಟಗೆ ಅಪ್ರೂವಲ್ ಆಗದೇ ಇದ್ದರೆ ನಿಲ್ಲತಕ್ಕದ್ದಲ್ಲ. ಇದನ್ನು ತಾವು ಗಮನಿಸಬೇಕು. ಆರ್ಟಿಕಲ್ ಸೆಕ್ಷನ್ 44 'ಎಫ್' ಸ್ವಲ್ಪ ದಯವಿಟ್ಟು ನೋಡಿ. ಸೆಕ್ಷನ್ ಎಫ್ ಲ್ಯಾಂಡ್ ರಿಫಾರ್ಮ್ಸ ಆಕ್ಟ ಏನು ಹೇಳುತ್ತದೆ.

" The land owner, landlord and every person interested in the land whose lands are vested in the State Government under clause (a) shall be

entitled only to receive the amounts from the State Government as provided in this Chapter``.

ಈ ರೈತರ ಜಮೀನನ್ನು ನೀವು ನಾನ್ ಅಗ್ರಿಕಲ್ಚರ್ ಪರ್ಪಸಸಗೆ ತೆಗೆದುಕೊಳ್ಳುತ್ತಿದ್ದೀರಿ. What is the compensation that he is entitled to? 1974 ರಲ್ಲಿ ಎಲ್ಲಾ ಓನರ್ಸಗಳು ಫಾರಂ ನಂ 11 ಹಾಕಿದರು. ಆ 11 ಫಾರಂ ಹಾಕಿದಾಗ ಈಗ ಇಟ್ಟಿರತಕ್ಕಂಥ ಆಕ್ಟ ಅಮೆಂಡೆಮೆಂಟ್ ಇರಲಿಲ್ಲ. 40 ಸೆಂಟ್ಸಗೆ ಇಂಡಸ್ಟ್ರೀಸ್ ಪರ್ಪಸ್‌ಗೆ, ಸೊಸೈಟಿ ಪರ್ಪಸ್‌ಗೆ ಎಜ್ಯುಕೇಷನ್ ಪರ್ಪಸ್‌ಗೆ ಎಂದು ನೀವು ಅವತ್ತು ಪ್ರಾವಿಷನ್ ಮಾಡಿರಲಿಲ್ಲ. ಆಗ ಇದ್ದಂತಹ ಸೀಲಿಂಗ್ ಲಿಮಿಟ್ ಬೇರೆ. ಈಗ ನೀವು ತರುತ್ತಿರತಕ್ಕಂಥ ಸೀಲಿಂಗ್ ಲಿಮಿಟ್ ಬೇರೆ. ಸಹಸ್ರಾರು ಸೀಲಿಂಗ್ ಕೇಸಗಳು ಇವತ್ತು ಹೈಕೋರ್ಟನಲ್ಲಿ ಪೆಂಡಿಂಗ್ ಇವೆ. ಈ ಅಮೆಂಡಮೆಂಟ್ ಬಂದಿದ್ದೇ ಆದರೆ ಫ್ಲಡ್ ಗೇಟ್ ಓಪನ್ ಆದಹಾಗೆ ಆಗುತ್ತದೆ. ಇದು ಏನಾಗುತ್ತದೆ ಎಂದರೆ ಇರತಕ್ಕಂಥ ಎಲ್ಲಾ ಫಾರಂ ನಂಬರ್ 11 ಅಪ್ಲಿಕೇಷನನವರು ನಾವೂ ಕೂಡ ಸೊಸೈಟಿ ಮಾಡುತ್ತೇವೆ, ಎಕ್ಸಂಷನ್ ಕೊಡಿ, ನಾವು ಎಜ್ಯುಕೇಷನ್ ಇನ್ಸ್‌ಟಿಟ್ಯೂಷನ್ ಮಾಡುತ್ತೇರೆ 10 ಎಕರೆ ಕೊಡಿ ಎಂದರೆ ವಸತಿ ನಿವೇಶನ ಕೊಡುವುದಕ್ಕೆ ಜನರಿಗೆ, ಬಡವರಿಗೆ ಕೊಡುವುದಕ್ಕೆ ಒಂದು ಎಕರೆ ಜಮೀನೂ ಉಳಿಯುವುದಿಲ್ಲ. ಅಂದಮೇಲೆ ಭೂಸುಧಾರಣೆ ಕಾನೂನು ಏಕೆ ಬೇಕು? ನೀವು ಅಮೆಂಡಮೆಂಟ್ ತರುವುದರ ಬರಲು ಸ್ಟ್ರಾಪ್ ಮಾಡಿ. ನಮಗೆ ಬೇಡವೇ ಬೇಡ ಭೂಸುಧಾರಣಾ ಕಾಯಿದೆ ಎಂದು ಸ್ಟ್ರಾಪ್ ಮಾಡಿ. ಉಳುವವನಿಗೆ ಭೂಮಿ ಕೊಡುತ್ತೇನೆ ಎಂದು ಹೇಳಿ ಮತ್ತೊಂದು ಫಾರಂ ನಂಬರ್ 11 ಕ್ಕೆ ಅನ್ನು ತಂದು ಇದರಲ್ಲಿ ಅವಕಾಶ ಮಾಡಿಕೊಟ್ಟು ಎಲ್ಲಾ ರೈತನ ಸಮುದಾಯದ ಮೇಲೆ ಅನ್ಯಾಯ ಮಾಡುತ್ತಿರುವುದು. ಇದು ಯಾವ ನ್ಯಾಯ ಎಂದು ಯೋಚನೆ ಮಾಡಬೇಕಾಗುತ್ತದೆ. 1974ರಲ್ಲಿ ಈ ಕಾನೂನು ತಂದಾಗ ಏನು ಹೇಳಿದಿರಿ, ತಾವು ಸಹಸ್ರಾರು ದಲಿತರಿಗೆ, ಹಿಂದುಳಿದ ವರ್ಗದ ಜನಾಂಗದವಿಗೆ ಉಳುವವನಿಗೆ ಭೂಮಿ ಸಿಗುತ್ತದೆ. ಎಂದು ಹೇಳಿದಿರಿ. ಆ ಕಾರಣದಿಂದ ಈ ಕಾನೂನು ತರುತ್ತಿದ್ದೇನೆ ಎಂದು ಎಲ್ಲರಿಗೂ ಹೇಳಿ ಸನ್ಮಾನ್ಯ ದೇವರಾಜ್ ಅರಸ್ ಅವರ ಕಾಲದಲ್ಲಿ ತೆಗೆದುಕೊಂಡ ಬಂದಿರಿ ನೀವು. ಇದಕ್ಕೆ ಎಲ್ಲರೂ ಸರ್ವವ್ಯಾಪಿಯಾಗಿ ಒಪ್ಪಿಗೆ ಕೊಟ್ಟರು. ಇಡೀ ದೇಶದಲ್ಲಿ ಇದರ ಬಗ್ಗೆ ಚಿಂತನೆ ಆದರೂ ಕೂಡ ಒಪ್ಪಿಗೆ ಕೊಟ್ಟರು. ಈಗ ಏನು ಮಾಡುತ್ತಿದ್ದೀರಿ, ದಲಿತ ವರ್ಗದವರಿಗೆ, ಹಿಂದುಳಿದ ವರ್ಗದವರಿಗೆ ಬೆಂಗಳೂರಿನ ಸುತ್ತಮುತ್ತ ಆಗಲಿ, ಬೇರೆ ಕಡೆಯಾಗಲಿ ಏನು ಜಮೀನು ಸಿಕ್ಕಿದೆ, ಆ ಜಮೀನುಗಳನ್ನು ಈ ನೆಪದಲ್ಲಿ ಆಕ್ಟೈರ್ ಮಾಡಿಕೊಂಡು ತಡೆಹಿಡಿಯುವುದಕ್ಕೋಸ್ಕರ ಮಾಡುತ್ತಿದ್ದೀರಿ. ಇದು ಯಾವ ನ್ಯಾಯ? ಇದನ್ನು ನಾವು ಕೇಳಬೇಕಾಗುತ್ತದೆ. ತಾವು ಹೇಳಬಹುದು ಲ್ಯಾಂಡ್ ಅಕ್ವಿಸಿಷನ್ ಆಕ್ಟ್‌ನಲ್ಲಿ ಅಕ್ವೈರ್ ಮಾಡಿಕೊಳ್ಳವುದಕ್ಕೆ ಪ್ರಾವಿಷನ್ ಇದ್ದರೆ, ಅದರಲ್ಲಿ ಪ್ರಾವಿಷನ್ ಬರುವುದಕ್ಕೆ ಆದ್ಯತೆ ಇಲ್ಲ. ನೀವು ಯೋಚನೆ ಮಾಡಬೇಕು. ಈ ಕಾನೂನು ಅಡಿಯಲ್ಲಿ ನೀವು ಎಕ್ಸಂಷನ್ ತರುವುದಕ್ಕೆ ಯಾವುದೇ ವಿಧವಾದ ಕಾರಣವಿಲ್ಲ. ಈ ಅಮೆಂಡಮೆಂಟನಲ್ಲಿ ತರುವುದನ್ನು ಸಬ್ಜೆಕ್ಟ್ 31 ಎ ಅಂಡ್ 31 ಬಿ ಮಾಡಬೇಕು. ಏಕೆಂದರೆ ಕೇಶವಾನಂದ ಭಾರತಿ ಕೇಸಿನಲ್ಲಿ ಇದೇ ವಿಷಯ ಸುಪ್ರೀಂಕೋರ್ಟಿಗೆ ಹೋದಾಗ ಮಾನ್ಯ ಅಧ್ಯಕ್ಷರೆ, ಏನು ಹೇಳಿದರು. ಅಲ್ಲಿಯವರೆಗೆ ಆಗಿರತಕ್ಕ ಕಾನೂನಿನ ಬಗ್ಗೆ 9th

Schedule ನಲ್ಲಿ ಇನಕ್ಲೂಡ್ ಆಗಿದ್ದರೆ ಅದನ್ನು ನಾವು ಆರ್ಟಿಕಲ್ 14,15, ಮತ್ತು 19 ಪ್ರಕಾರವಾಗಿ ಛಾಲೆಂಜ್ ಮಾಡುವುದಕ್ಕೆ ಬರುವುದಿಲ್ಲ. ಆದರೆ 1973ನೇ ಇಸವಿಯಾದ ನಂತರ ಯಾವುದಾದರೂ ಕಾನೂನು 9th Scheduleಗೆ ಇನಕ್ಲೂಡ್ ಆದರೂ ಸಹ 31 (ಎ) ಮತ್ತು 31 (ಬಿ) ಅವರಿಗೆ ಕಾಂಪನಸೇಷನ್ ಮಾರ್ಕೆಟ್ ರೇಟ್ ಪ್ರಕಾರ ದೊರೆಯದೆ ಇದ್ದರೆ it is amenable to the jurisdiction ಎಂದು ಹೇಳಿ, ಕೊಶ್ಚನಬಲ್ ಎಂದು ಹೇಳಿ ತೀರ್ಮಾನ ಕೊಟ್ಟರು. ಕೇಶವಾನಂದ್, ಭಾರತಿ ಕೇಸಿನಲ್ಲಿ ಆದ ಪ್ರಕಾರ, ಮೂಲಭೂತ ಹಕ್ಕು, ಸಂವಿಧಾನ ಹಕ್ಕು, ಈ ಲ್ಯಾಂಡ್ ರಿಫಾರ್ಮ್ಸನಲ್ಲಿ ಜನಗಳಿಗೆ, ರೈತರಿಗೆ, ದಲಿತವರ್ಗಕ್ಕೆ, ಹಿಂದುಳಿದವರಿಗೆ, ಉಳುವವನಿಗೆ ಭೂಮಿ ಎಂದು ಹೇಳಿ ಯಾವ ತತ್ವದ ಮೇಲೆ ನೀವು ಜಮೀನನ್ನು ಕೊಟ್ಟಿರಿ ಒಂದು ಕಡೆ ಕೊಟ್ಟು ಇನ್ನೊಂದು ಕಡೆ ಕಿತ್ತು ಕೊಳ್ಳುವಂಥ ಪ್ರಯತ್ನವನ್ನೇನು ತಾವು ಮಾಡಿದ್ದೀರಿ ಇದು ಕಾನೂನಿನ ಪ್ರಕಾರ ಊರ್ಜಿತವಾಗತಕ್ಕದ್ದಲ್ಲ ಎನ್ನುವುದನ್ನು ತಾವು ಇವೊತ್ತು ಯೋಚನೆ ಮಾಡಬೇಕು. ಇನ್ನೊಂದು ಇವೊತ್ತು ಆಗಲೇ ಸೆಕ್ಷನ್ 66, 63(5) ಅನ್ನು ತಾವು ನೋಡಬೇಕು. 63 ಮತ್ತು ಸಬ್ ಸೆಕ್ಷನ್‌ನಲ್ಲಿ ಈಗಾಗಲೇ ಟ್ರಸ್ಟ ಇನಕ್ಲೂಡ್ ಮಾಡಿದ್ದೇವೆ. ಎಜ್ಯುಕೇಷನ್ ಅಂಡ್ ಚಾರಿಟಿಬಲ್ ಸೊಸೈಟಿಯನ್ನು ಸೆಕ್ಷನ್ 63, (5) ಅಂಡ್ (7)ನಲ್ಲಿ ಇನಕ್ಲೂಡ್ ಮಾಡಿದ್ದೇವೆ. ಶುಗರ್ ಫ್ಯಾಕ್ಟರಿಗೆ ಇನ್‌ಕ್ಲೂಡ್ ಮಾಡಿದ್ದೇಪೆ. ಶುಗರ್ ಫ್ಯಾಕ್ಟರಿಗೆ ಇನಕ್ಲೂಡ್ ಮಾಡಿದಾಗ ಆಗಲೂ ಕೂಡ ಈ ಪ್ರಶ್ನೆ ಬಂತು. ಫ್ಯಾಕ್ಟರಿಗಾಗಿ ಕೊಡುತ್ತೀರೇನೋ ಎಂದು ಹೇಳಿ ಈ ಪ್ರಶ್ನೆ ಬಂದು Argument ಆದಾಗ ಮತ್ತು ಕೋರ್ಟಿಗೆ ಹೋದಾಗ ಏನು ಹೇಳಿದರು. It is only of research.. agriculture reasearch ಕಬ್ಬಿನ ಬೆಳೆಯ ಬಗ್ಗೆ ರಿಸರ್ಚ್ ಮಾಡತಕ್ಕಂಥ ಈ ಒಂದು ಶುಗರ್ ಫ್ಯಾಕ್ಟರಿಗಳು ಬೇರೆ ಕಾರಣಕ್ಕಾಗಿ ಉಪಯೋಗ ಮಾಡುವುದಕ್ಕೆ ಬರುವುದಿಲ್ಲ. Agricultural research ಮಾತ್ರ ಎಂದು ಹೇಳಿ ಅಪ್ರೂವ್ ಆಯಿತು. ಆದರೆ ಈಗ ಫ್ಯಾಕ್ಟರೀಸ್ ಎಂದು ಹೇಳಿ for any purpose, any specified purpose..ಇಂಡಸ್ಟ್ರೀ ಎಂದು ಹೇಳಿ ಈ ಒಂದು ಕಂಡೀಷನ್ ಹಾಕದೆ ರಿಸರ್ಚ ಎನ್ನುವುದು ಇಲ್ಲದೇ ಇದ್ದಾಗ ಅದುnon-agricultural purpose ಆಗುತ್ತದೆ. ಅದೂ ಕಾನೂನಿನಲ್ಲಿ ಊರ್ಜಿತವಾಗತಕ್ಕದ್ದಲ್ಲ. ಹಲವಾರು ಜಮೀನುಗಳಿತ್ತು, ಸಹಸ್ರಾರು ಎಕರೆ ಜಮೀನುಗಳನ್ನು ಪ್ಲಾನಟೇಷನ್ ಎನ್ನತಕ್ಕಂಥ ನೆಪದಲ್ಲಿ ಬಿಟ್ಟುಕೊಟ್ಟಿರಿ. ಅಷ್ಟೇ ಅಲ್ಲ ಅವತ್ತು ಒಬ್ಬರೇ ಒಬ್ಬರು ರೋರಿಚ್ ಅವರಿಗೆ linolium ಹುಲ್ಲು ಬೆಳೆಯುತ್ತಾರೆ ಎಂದು ಹೇಳಿ 400 ಎಕರೆಗೆ ವಿನಾಯಿತಿ ಕೊಟ್ಟಿರಿ. ಆರ್ಟಿಕಲ್ 79 (ಎ) ಮತ್ತ 79 (ಬಿ) ಕಂಟಿನ್ಯೂಯಸ್ ಆಗೀ ಈ ಕಂಪನಿ ತೆಗೆದುಕೊಳ್ಳಬಾರದು ಎಂದು ಹೇಳಿದಿರಿ ಏಕೆ? ಅವರು ಅಗ್ರಿಕಲ್ಚರಲಿಸ್ಟ ಅಲ್ಲ, ಅಗ್ರಿಕಲ್ಚರಲಿಸ್ಟ ಅಲ್ಲದೇ ಇರತಕ್ಕಂಥಹವರು ಜಮೀನುಗಳನ್ನು ಹೊಂದಬಾರದು ಎಂಬುದು ಭೂ ಸುಧಾರಣಾ ಕಾಯಿದೆಯಲ್ಲಿ ಏಕಮಾತ್ರ ಉದ್ದೇಶವಾಗಿತ್ತು. ಕಂಪನಿಗಳು ಓನ್ ಮಾಡಬಾರದು, ನಾನ್-ಅಗ್ರಿಕಲ್ಚರಲ್ ಪರ್ಪಸ್‌ಗೆ ಇದನ್ನು ಮಾಡಬಾರದು. ನಾನ್-ಅಗ್ರಿಕಲ್ಚರಲಿಸ್ಟ್ ಈ ಜಮೀನನ್ನು ಕೊಂಡುಕೊಳ್ಳಬಾರದು. ಒಂದುವೇಳೆ 12 ಸಾವಿರಕ್ಕಿಂತ ಅವರ ಉತ್ಪಾದನೆ ಹೆಚ್ಚಿದ್ದರೂ ಸಹ ಅವನು ಅಗ್ರಿಕಲ್ಚರಲಿಸ್ಟ್ ಆಗಿರಬೇಕು ಎನ್ನುವ ತತ್ವದ ಆಧಾರದಮೇಲೆ ಈ ಒಂದು

ಉದ್ದೇಶದಿಂದ ಕಾನೂನನ್ನು ತಂದಿರಿ. ಇವೊತ್ತು ಆ ಕಾನೂನನ್ನೆಲ್ಲಾ ಗಾಳಿಗೆ ತೂರಿ ಕಂಪನಿಗಳೂ ತೆಗೆದುಕೊಳ್ಳಬಹುದು. ಇಂಡಸ್ಟ್ರೀಗಳೂ ತೆಗೆದುಕೊಳ್ಳಬಹುದು,.ಫ್ಯಾಕ್ಟರಿಗಳೂ ತೆಗೆದುಕೊಳ್ಳಬಹುದು. ಎಜ್ಯುಕೇಷನಲ್ ಇನ್‌ಸ್ಟಿಟ್ಯೂಷನ್ಸ್‌ಗಳೂ ತೆಗೆದುಕೊಳ್ಳಬಹುದು, ಎಲ್ಲರೂ ತೆಗೆದುಕೊಳ್ಳಬಹುದು for any purpose, any specified purpose, any land., any extent. ಇದು ನಿಮ್ಮ ಧರ್ಮಾವೇ? ಹಾಗಾದರೆ ಬೆಂಗಳೂರನ್ನು, ಇಡೀ ಕರ್ನಾಟಕವನ್ನೇ ಮಾರಿಬಿಟ್ಟು ಏಕೆ ಈ ವಿಧಾನಸೌಧ ಬೇಕು, ನಾವು ತಾನೇ ಏಕೆ ಬೇಕಿಲ್ಲ; ಕಾನೂನು ಬಗ್ಗೆ ಏಕೆ ವಿಚಾರ ಆಗಬೇಕು; ಇಡೀ ಕರ್ನಾಟಕವನ್ನು exempted ಎಂದು ಹೇಳಿ ಒಂದು ಪೆನ್ನಿನಲ್ಲಿ ಬರೆದುಬಿಟ್ಟು ಮಹಾರಾಷ್ಟ್ರಕ್ಕೆ ಹೊರಟುಬಿಡಿ. ಕಾನೂನುಏಕೆ ಬೇಕು? ನಾವು ಇರುವುದು ಏತಕ್ಕೊಸ್ಕರ ಎಂಬುವುದನ್ನು ಯೋಚನೆ ಮಾಡಬೇಕು. ಇರತಕ್ಕಂಥ ಕರ್ನಾಟಕದ ನಾಗರೀಕರನ್ನು ರೈತರನ್ನು,ದಲಿತರನ್ನು, ಹಿಂದುಳಿಗವರ್ಗದವರನ್ನು, ಎಲ್ಲರನ್ನೂ ರಕ್ಷಣೆ ಮಾಡುವುದಕ್ಕೆ ನಮ್ಮವರಿಗೆ ಸಂಪನ್ಮೂಲಗಳನ್ನು ರೂಢಿಮಾಡಿಕೊಳ್ಳತಕ್ಕಂಥ ಸಂದರ್ಭದಲ್ಲಿ ಅವನ ಆಸ್ತಿಯನ್ನು ಉಳಿಸುವುದಕ್ಕೋಸ್ಕರ ಮಾಡಿದಿರಿ. ಎಸ್.ಸಿ.ಎಸ್.ಟಿ. ಕಾನೂನನ್ನು ತಂದಿರಿ, ಹರಿಜನರಿಗೆ ಸೇರಿದಂಥ ಆಸ್ತಿಯನ್ನು ಮಾರಬಾರದು ಎಂದು ಕಾನೂನನ್ನು ತಂದಿರಿ, 1930ನೇ ಇಸವಿಯಲ್ಲಿ ಮದ್ರಾಸಿನಲ್ಲಿ ಕಾನೂನನ್ನು ತಂದಿರಿ ಮತ್ತು ಇಲ್ಲಿಯೂ ಕೂಡ ತಂದಿರಿ, ಏನು ಎಂದು ಹಾಕಿದಿರಿ, ಅನ್‌ಕಂಡೀಷನಲ್ ಗ್ರಾಂಟ್ ಆದರೆ ಯಾವುದೇ ವರ್ಷ ಆಗಲೀ ಮಾರಕೂಡದು ಎಂದು ಕಾನೂನನ್ನು ತಂದಿರಿ. ಇವತ್ತು ಅದು ಅಪ್ ಹೋಲ್ಡ್ ಆಗಿದೆ. ಹದಿನೈದು ವರ್ಷ 41ನೆ ಇಸವಿಯಾದ ಮೇಲೆ ಗ್ರಾಂಟ್ ಆದದನ್ನು ಮಾರಬಾರದು ಎಂದು ಕಾನೂನನ್ನು ತಂದಿರಿ. ಇವೊತ್ತು ಸುಪ್ರೀಂ ಕೋರ್ಟಿನಲ್ಲೂ ಕೂಡ ಆಪ್ ಹೋಲ್ಡ್ ಆಗಿದೆ. validity upholdಆಗಿದೆ. ಇವೊತ್ತು ಭೂಸುಧಾರಣೆ ಕಾಯಿದೆಯಡಿಯಲ್ಲಿ ಅದೇ ಹರಿಜನರಿಗೆ ಲ್ಯಾಂಡ್ ಗ್ರಾಂಟ್ ಆಗಿದೆ. ಅದನ್ನು ಆ ಕಾನೂನಿನಲ್ಲಿ ದೂರ ತಳ್ಳಿ, ಎಸ್.ಸಿ.ಎಸ್.ಟಿ. ಆಕ್ಟ್ ದೂರ ತಳ್ಳಿ, ಆ ಹರಿಜನರಿಗೆ ಸೇರಿದ ಜಮೀನನ್ನು ನಾನ್ ಕಲ್ಚರಲಿಸ್ಟಗೆ ಕಂಪನಿಗಳಿಗೆ, ಮಾರಬಹುದು, ಅಕ್ವೈರ್ಡ ಮಾಡಬಹುದು ಎಂದು ಹೇಳುತ್ತಿದ್ದೀರಲ್ಲಾ ಇದು ಯಾವ ನ್ಯಾಯ?

ಶ್ರೀ ಆರ್.ಎಲ್. ಜಾಲಪ್ಪ : ಸುಮ್ಮಸುಮ್ಮನೆ ಹೇಳಬೇಡಿ....

ಶ್ರೀಮತಿ ಪ್ರಮೀಳಾ ನೇಸರ್ಗಿ : ಯಾವ ಜಮೀನಾದರೂ ಆಗುತ್ತಲ್ಲಾ, ನೀವು ತಂದಿರತಕ್ಕಂಥ ಕಾನೂನನ್ನು ಹೇಗೆ ಇಂಟರಪ್ರಿಟ್ ಮಾಡಬಹುದು ಎಂದು ಇದರಲ್ಲಿ ಇದೆ. ಯಾರ ಜಮೀನನ್ನು ಯಾರು ಬೇಕಾದರೂ ಕೊಂಡಕೊಳ್ಳಬಹುದು.

SRI. R.L. JALAPPA : We have to permit him. He cannot sell.

SMT. PRAMILA NESARGI : ``Any extent of land for any specific purpose in public interest and for reasons to be recorded in writing"..... ಒಪ್ಪಿಕೊಂಡಿದ್ದೇವೆ. ಇಡೀ ಕರ್ನಾಟಕವನ್ನು ಪಬ್ಲಿಕ್ ಇಂಟರೆಸ್ಟ್‌ನಲ್ಲಿ ಒಬ್ಬ ಮಲ್ಟಿ ನ್ಯಾಷನಲ್‌ಗೆ

ಶ್ರೀ ಆರ್. ಎಲ್. ಜಾಲಪ್ಪ : ಅದರೊಳಗೆ ಷೆಡ್ಯೂಲ್ ಕ್ಯಾಸ್ಟ್ ಜಮೀನು ಎಂದು ಎಲ್ಲಿದೆ?

(ಗೊಂದಲ)

ಶ್ರೀಮತಿ ಪ್ರಮೀಳಾ ನೇಸರ್ಗಿ : ಷೆಡ್ಯೂಲ್ ಕ್ಯಾಸ್ಟ್‌ಗೆ proviso ಎಲ್ಲಿ ಹಾಕಿದ್ದೀರಿ? ಅವರಿಗೆ exemption ಕೊಡಲು proviso ಎಲ್ಲಿ ಹಾಕಿದ್ದೀರಿ? ನೀನು proviso ಹಾಕಿಲ್ಲ, ಏನೂ ಇಲ್ಲಿ ಇಲ್ಲ. ತಾವು ಹೇಳಬೇಕು.

``any extent of land for any specific purpose in public interest and for reasons to be recorded in writing".....

ಎಲ್ಲರಿಗೂ ಮಾಡಬಹುದಲ್ಲಾ. ಎಂತಹ ಕಾನೂನು ಇದು; ಇಂತಹ ಕಾನೂನನ್ನು ಯಾವುದು ಬೇಕಾದರೂ ಮಾರಬಹುದು. ಯಾವ ಮೊಹಮ್ಮದ್ ಬಿನ್ ತೊಘಲಕನ ರಾಜ್ಯ ಈ ರಾಜ್ಯಕ್ಕೆ ಬಂದಿದೆಯೋ ನನಗಂತೂ ಅರ್ಥವಾಗುತ್ತಾ ಇಲ್ಲ, ಯಾರ ಜಮೀನು, ಯಾರಿಗೆ ಬೇಕಾದರೂ, ಯಾವಾಗ ಬೇಕಾದರೂ, ಎಲ್ಲಿಗೆ ಬೇಕಾದರೂ ಮಾರಿ ನಮ್ಮನ್ನೆಲ್ಲಾ ಮಾರಾಟ ಮಾಡುವುದಕ್ಕೆ ಅಂತ ಅಂದರೆ ಇದಕ್ಕಿಂತ ಇದಕ್ಕಿಂತ ಅನ್ಯಾಯ, ಕಾನೂನು ಬೇರೊಂದಿಲ್ಲ.

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ : ನೀವು ಈ ರಾಜ್ಯವನ್ನು ಮೊಹಮ್ಮದ್ ಬಿನ್ ತೊಘಲಕ್‌ಗೆ ಹೋಲಿಸಿದರೆ ನಾನು ನಿಮ್ಮನ್ನು **xxx**

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ಅವರು ಹೇಳಿಬೇಕಾದರೆ, ಈ ಒಂದು ಶಾಸನ ಮೊಹಮ್ಮದ್ ಬಿನ್ ತೊಘಲಕನ ದರ್ಬಾರನ್ನು ಮೀರಿಸುವಂಥ ಶಾಸನ ಎಂದು ಹೇಳುತ್ತಾರೆ. ನೀವು ಏನು ಬೇಕಾದರೂ ಉತ್ತರ ಕೊಡಿ, ಅದಕ್ಕೆ ನೀವು ಹುಚ್ಚಾಸ್ಪತ್ರೆಯಿಂದ ಬಂದಿದ್ದೀರಾ ಎನ್ನುವುದು ನಿಮಗೆ ಗೌರವ ತರತಕ್ಕಂಥದ್ದಲ್ಲ. ಸರಿ ಮಾಡುವುದಕ್ಕೆ ಆಗದೇ ಇರತಕ್ಕಂಥ ಪ್ರಶ್ನೆ ಇದು. ನೀವು ಎಸ್ಟೇಟ್ ಏಜೆಂಟನ ಏಜೆಂಟರುಗಳಾಗಿ ಕೋಟ್ಯಾಂತರ ರೂಪಾಯಿಗಳನ್ನು ಹೊಡೆದು ಅವರಿಗೆ ಉಪಕಾರ ಮಾಡಿಕೊಂಡು ಬಂದಿದ್ದೀರಿ ಎಂದು ಹೇಳುತ್ತಿದ್ದೇನೆ. ಇದಕ್ಕೆ ಏನು ಹೇಳುತ್ತೀರಾ ಹೇಳಿ. ಜನ ಇವೊತ್ತು ಮಾತನಾಡುತ್ತಿದ್ದಾರೆ, ದೊಡ್ಡ ದೊಡ್ಡ ಕೈಗಾರಿಕೆಗಳ ಹತ್ತಿರ ಕೋಟ್ಯಾಂತರ ರೂಪಾಯಿಗಳ ಹಣ ಸಂಗ್ರಹ ಮಾಡಿ ಈ ಜಮೀನುಗಳನ್ನು ಮಾರುವಂಥ ತಂತ್ರಗಾರಿಕೆಯಲ್ಲಿ ತಾವು ತೋಡಗಿದ್ದೀರಿ ಎಂದು ಜನ ಮಾತನಾಡುತ್ತಾರೆ.

(ಗೊಂದಲ)

ಒಬ್ಬ ಮಹಿಳಾ ಶಾಸಕಿ ಎದ್ದುನಿಂತುಕೊಂಡು ಗೌರವವಾಗಿ ಕಾನೂನಿನ ಬಗ್ಗೆ ಚರ್ಚೆಯನ್ನು ಮಾಡುತ್ತಿರಬೇಕಾದರೆ ಹಿರಿಯ ಸಚಿವರಾದ ತಾವು ಹಗುರವಾಗಿ ಮಾತನಾಡಿದರೆ ನಾವು ಏನು ಮಾಡುವುದಕ್ಕಾಗುವುದಿಲ್ಲ.....

ಅಧ್ಯಕ್ಷರು : ತಾವು ಒಂದು ಮಾತು ಹೇಳಿದಿರಿ, ಕೋಟ್ಯಾಂತರ ರೂಪಾಯಿ ಹೊಡೆದಿದ್ದಾರೆ ಎಂದು ಜನ ಮಾತನಾಡುತ್ತಾರೆ ಎಂದು. ಜನ ಏನಾದರೂ ಮಾತನಾಡಿಕೊಳ್ಳಲಿ, ಜನ ಇಲ್ಲಿಗೆ ಬರುವುದಕ್ಕಾಗುವುದಿಲ್ಲ. ಜನ ಪ್ರತಿನಿಧಿಗಳಾಗಿ ನಾವು ಇಲ್ಲಿಗೆ ಬರತಕ್ಕಂಥಹವರು. ನಾವೇನಾದರೂ ಮಾತನಾಡಬೇಕಾದರೆ ಸಾಕ್ಷ್ಯಾಧಾರಗಳಿಲ್ಲಾ ಬೇಕು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಹೇಳುವುದೇನೆಂದರೆ, ಅವರಿಗೆ ನೋವಾಗಿರಬಹುದು. ಇದು ಒಂದು ತರಹ ತೊಘಲಕ್ ದರ್ಬಾರ್ ಆಗಿದೆ ಎಂದು ಹೇಳುವುದಕ್ಕೆ ನಮಗೆ ಅಧಿಕಾರ ಇಲ್ಲವೇ? ಅದನ್ನು ಮೀರಿಸುವಂಥ ಶಾಸನ ಇದು ಎಂದು ನಾವು ಹೇಳುತ್ತೇವೆ. ಇಲ್ಲ ಎಂದು ಹೇಳಿ ಯಾವ ಶಬ್ದದಲ್ಲಿ ಬೇಕಾದರೂ ಉತ್ತರವನ್ನು ಕೊಡಿ. ಅದನ್ನು ಬಿಟ್ಟು ನೀವು ಈ ರೀತಿ ಮಾತನಾಡುವುದು ಎಷ್ಟು ಸರಿ?

5.10 ಪಿ.ಎಂ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ಮಾನ್ಯ ಜಾಲಪ್ಪನವರು ಈ ವಿಧೇಯಕದ ಬಗ್ಗೆ ಚರ್ಚೆಯಾದ ಮೇಲೆ ಮತದಾನಕ್ಕೆ ಬರುವುದಕ್ಕೆ ಮೊದಲು ಅವರು ಉತ್ತರ ಕೊಡಲು ಬೇಕಾದಷ್ಟು ಅವಕಾಶವಿದೆ. ಆಗ ಅವರು ಸುಧೀರ್ಘವಾದಂತಹ ಉತ್ತರವನ್ನು ಕೊಡಲಿ, ಆಗ ನಾವು ಯಾರೂ ತಡೆಯುವುದಕ್ಕೆ ತಯಾರಿಲ್ಲ. ಮಧ್ಯೆ ಮಧ್ಯೆ ಬರತಕ್ಕಂಥ ಮಾತು ಸ್ವಲ್ಪ ತೀಕ್ಷ್ಣವಾಗಿರಬಹುದು. ಅವರು ತಂದಿರತಕ್ಕ ವಿಧೇಯಕಕ್ಕೆ ಸ್ವಲ್ಪ ಮನಸ್ಸಿಗೆ ನೋವಾದರೂ ಆಗಬಹುದು. ಅದನ್ನು ತಾಳ್ಮೆಯಿಂದ ಕೇಳಿಕೊಂಡು ಅದಕ್ಕೆ ಉತ್ತರ ಕೊಡತಕ್ಕದ್ದು ಸೌಜನ್ಯ ಅದು ಒಂದು. ಎರಡನೆಯದಾಗಿ ಸ್ವಲ್ಪ ಕೋಪದಿಂದ ಮಾತನಾಡುವಂತಹ ಭಾಷೆ ಇದೆಯಲ್ಲಾ, ಆ ಭಾಷೆಯನ್ನು ಸ್ವಲ್ಪ ಹಿಡಿತದಲ್ಲಿಟ್ಟು ಜೋರಾಗಿ ಮಾತನಾಡಲಿ, ಆದರೆ **xxx** ಎಂದು ಅನ್ನುವಂಥಾದ್ದು ಇದೆಯಲ್ಲಾ, ಇದು **xxx**. ಇದನ್ನು ಮಾನ್ಯ ಹಿರಿಯರಾದಂತಹ ಸಚಿವರು ಹಿಂದಕ್ಕೆ ಪಡೆಯಬೇಕು. ಅವರು ಅದನ್ನು ಹಿಂದಕ್ಕೆ ಪಡೆಯದಿದ್ದರೆ ನಾವು ಬಿಡುವುದಕ್ಕೆ ಸಾಧ್ಯವಿಲ್ಲ. ಇದು **xxx** ನಾವೆಲ್ಲ ಬಂದಿರುವವರು **xxx** ಇದು ಸರಿಯಾದಂತಹ ನೀತಿಯಲ್ಲ. ನಾವು ಅವರ ಬಗ್ಗೆ ಅಪಾರವಾದಂತಹ ಗೌರವವನ್ನು ಬಿಟ್ಟು ಕೊಂಡಿದ್ದೇವೆ. ತಾವು ಈ ಸದನದ ಹುಚ್ಚಾಸ್ಪತ್ರೆಯ ಅಧ್ಯಕ್ಷ ಅಲ್ಲ. ಈ ಸದನದ ಬಗ್ಗೆ ನಮಗೆ ಗೌರವವಿದೆ. ಅವರು ಮಾತನಾಡುವಾಗ ಈ ರೀತಿಯಾಗಿ ಮಾತನಾಡಿ ಬಿಟ್ಟರೆ ಹೇಗೆ? ಈ ರೀತಿಯಾದರೆ ಗತಿ ಏನು? ಅವರ ಬಗ್ಗೆ ನನಗೆ ಗೌರವವಿದೆ. ಏಕೆಂದರೆ ನಾನು ಖಂಡಿತವಾಗಿಯೂ ಅವರ ಬಗ್ಗೆ ತೀಕ್ಷ್ಣವಾಗಿ ಮಾತನಾಡಿದವನಲ್ಲ, ಬಹಳ ಎಚ್ಚರದಿಂದ ಮಾತನಾಡುತ್ತೇನೆ. ಅವರು ಮಾತನಾಡುವಾಗ ಕೋಪದ ಆವೇಶದ ಭರದಲ್ಲಿ ಇದು **xxx** ಎನ್ನುವ ಧಾಟಿಯಲ್ಲಿ ಬಾಯಲ್ಲಿ ಹೇಳಿಬಿಟ್ಟರೆ ನಾವು ಎಲ್ಲಿ ಹೋಗಬೇಕು?

---

xxx ಅಧ್ಯಕ್ಷರ ಆದೇಶದ ಮೇರೆಗೆ ತೆಗೆದು ಹಾಕಲಾಗಿದೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಬೀಚಿಯವರು ಈ ವಿಷಯದಲ್ಲಿ ಗುಣವಾಗುವವರು ಮಾತ್ರ ಹುಚ್ಚಾಸ್ಪತ್ರೆಗೆ ಹೋಗುತ್ತಾರೆ, ಉಳಿದವರು ಎಲ್ಲಾ ಹೊರಗಡೆ ಇದ್ದಾರೆ ಎಂದು ಹೇಳಿದ್ದಾರೆ. ಆದುದರಿಂದ ಹೊರಗಡೆಯಲ್ಲಿಯೇ ಗುಣವಾಗಲಾರದಂಥ ಹುಚ್ಚರು ಇದ್ದೇವೆ. ಆದುದುರಿಂದ ಹುಚ್ಚು ಆಸ್ಪತ್ರೆ ಎಂದರೆ ಗುಣವಾಗ ಮಾತ್ರ ಹೊರಗಡೆ ಇರತಕ್ಕಂಥವರು ನಾವು ಗುಣ ಆಗದೇ ಇರತಕ್ಕಂಥವರು.

ಶ್ರೀ ವಾಟಾಳ್ ನಾಗರಾಜ್ : ನಾನು ಮಾನ್ಯ ಬೀಚಿಯವರು ಸಾಹಿತ್ಯವನ್ನು ಓದಿದ್ದೇನೆ. ಎಲ್ಲರ ಸಾಹಿತ್ಯವನ್ನು ಓದಿದ್ದೇನೆ. ಸಾಹಿತ್ಯ ಭಾಷೆಗಿಂತ ಹೆಚ್ಚಾಗಿ ನೇರವಾಗಿ..

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜರವರು ಹೇಳಿದಂತಹ ಮಾತಿನ ಅರ್ಥ ಏನೆಂದರೆ ಅವರು ತೊಘಲಕ್ ಎಂದು ಹೇಳಿದ್ದಾರೆ. ನಾವು ತೊಘಲಕರವರನ್ನು ಒಬ್ಬ ಐತಿಹಾಸಿಕ ವ್ಯಕ್ತಿ ಎಂದು ತಿಳಿದುಕೊಂಡಿದ್ದೇನೆ. ಯಾರಿಗೆ ಮನಸ್ಸಿನ ಸಮತೋಲನವಿಲ್ಲ ಒಂದು ರೀತಿಯ ಮಾನಸಿಕ ಅಸಮತೋಲನದಿಂದ ತೀರ್ಮಾನ ತೆಗೆದುಕೊಳ್ಳುತ್ತಿದ್ದರು. ಅದನ್ನು ಹುಚ್ಚರೆಂದು ಕರೆಯುವುದು. ಆದರೆ ಅದನ್ನು ಆ ರೀತಿಯಾಗಿ ಹೇಳಲಾಗಿದೆ. ತೊಘಲಕ್ ಎಂದು ಬಳಸಿ ಅವರು ಹೇಳುವುದು. ನಾವು ಪದಗಳನ್ನು ಬಳಕೆ ಮಾಡುವಾಗ ಈ ಸದನದ ಗೌರವಕ್ಕೆ ತೊಂದರೆಯಾಗಬಾರದು ಅವರು ಹೇಳುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಈಗ ಏನಾಗಿದೆ ಎಂದರೆ ನೀವು ಅವರಿಗೆ ಏನು ಆನ್ನಬೇಕೆಂದು ಹೇಳಿಕೊಂಡುತ್ತೀರಿ, ಹೇಗೆ ಉತ್ತರ ಕೊಡಬೇಕು ಎಂಬುದನ್ನು ಹೇಳಿಕೊಂಡುತ್ತೀರಿ. ಎಲ್ಲಾದರೂ ತಪ್ಪು ಆಗಿದೆ ಎಂದರೆ ಅದನ್ನು ಹುಡುಕಿ ತೆಗೆಯಿರಿ ಎಂದೂ ಹೇಳುತ್ತೀರಿ ಎಂಥದ್ದು ಬಂತು ನಮಗೆ ಕಷ್ಟ?

ಅಧ್ಯಕ್ಷರು : ನಾವು ಮತ್ತು ಮಾನ್ಯ ವಾಟಾಳ್ ನಾಗರಾಜರವರು ಆತ್ಮೀಯರಾಗಿರುವುದರಿಂದ ಅವರ ಮಾತಿನ ಒಳಗುಟ್ಟು ಏನೆಂಬುದು ನನಗೆ ಗೊತ್ತಾಗುತ್ತದೆ. ಅದಕ್ಕೆ ನಾನು ಅದನ್ನು ವಿವರಿಸಿ ಹೇಳಿದೆ.

ಶ್ರೀ ವಾಟಾಳ್ ನಾಗರಾಜ್ : ಈಗ ನನಗೆ ನಿಮ್ಮಮೇಲೆ ಅನುಮಾನ ಬರುತ್ತಿದೆ. ನಾನು ಅತ್ಯಂತ ಗೌರವ, ವಿಶ್ವಾಸ, ಪ್ರೀತಿಯನ್ನು ಇಟ್ಟುಕೊಂಡಿದ್ದೇನೆ.

ಅಧ್ಯಕ್ಷರು : ನೀವು ಅದನ್ನು ಹಾಗೆಯೇ ಮುಂದುವರೆಸಿಕೊಂಡು ಹೋಗಬೇಕು.

ಶ್ರೀ ವಾಟಾಳ್ ನಾಗರಾಜ್ : ಅದರಲ್ಲಿ ಬದಲಾವಣೆ ಇಲ್ಲವೇ ಇಲ್ಲ. ಆದರೆ ನೀವು ಸ್ವಲ್ಪ ಬದಲಾವಣೆಯಾಗುತ್ತಿದ್ದಿರೋ ಏನೋ ಎಂದು ಅನಿಸುತ್ತಿದೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಜಾಲಪ್ಪನವರು ಹೇಳಿದ್ದನ್ನು ವಿಚಾರ ಮಾಡಿದರೆ **xxx** ಮಾತನಾಡಿದ ಹಾಗೆ ಇಲ್ಲಿ ಮಾತನಾಡಬೇಡಿ ಎಂದು ಹೇಳಿದರು. ಅಂದರೆ **xxx**

---

xxx ಅಧ್ಯಕ್ಷರ ಆದೇಶದ ಮೇರೆಗೆ ತೆಗೆದು ಹಾಕಲಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಇದು ಇನ್ನು ಮುಂದೆ ಹೋಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಇನ್ನೂ ಧೃಡಿಕರಿಸಿದ್ದಾರೆ.

ಅಧ್ಯಕ್ಷರು : ಈಗ ಸಮಯ ವ್ಯರ್ಥವಾಗುವುದು ಬೇಡ. ನಾನು ರೆಕಾರ್ಡ್ ತರಿಸಿ ನೋಡುತ್ತೇನೆ. ಯಾವ ಪದಗಳ ಬಳಕೆ ಈ ಸದನದ ಗೌರವ ಕಡಿಮೆ ಮಾಡುತ್ತದೆಯೋ ಅಂತಹ ಪದಗಳನ್ನು ಕಡತದಲ್ಲಿ ಇರದಹಾಗೆ ನಾನು ನೋಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಬ್ಬ ಮುತ್ಸದ್ದಿ ಮಾನ್ಯ ಜಾಲಪ್ಪನವರು ಅವರು ಮಾತನಾಡಿದ್ದು, ರೆಕಾರ್ಡ್‌ನಲ್ಲಿ ಇದ್ದರೆ ಒಳ್ಳೆಯದಾಗಿರುತ್ತದೆ. ಆದುದರಿಂದ ಅದನ್ನು ತೆಗೆಸಬೇಡಿ. ನಾನು ನಿನ್ನೆ ಇವತ್ತು ನೋಡಿದ್ದೇನೆ. ಏಕೋ ಏನೋ ಅವರು ತುಂಬಾ ದುಡುಕುತ್ತಿದ್ದಾರೆ. ಈ ಕರಾಳ ಶಾಸನವನ್ನು ನಿಮ್ಮ ಕೈಯಲ್ಲಿ ಏಕೆ ತರಿಸಿದರೋ ನೀವು ಏತಕ್ಕೆ ಒಪ್ಪಿಕೊಂಡಿರೊ ಇಂತಹ ಪರಿಸ್ಥಿತಿಯಲ್ಲಿ ಸಿಕ್ಕಿ ನೀವು ಪೇಚಾಡುತ್ತಿದ್ದೀರಿ.

ಶ್ರೀ ಆರ್.ಎಲ್. ಜಾಲಪ್ಪ : ನಿಮಗೂ ನಾಲ್ಕು ನಾಲ್ಕು ಜಮೀನುಗಳನ್ನು ಕೊಟ್ಟು ಅಲ್ಲಿದ್ದು ವ್ಯವಸಾಯ ಮಾಡಿಕೊಂಡು ಜೀವನ ಮಾಡಿದರೆ ಗೊತ್ತಾಗುತ್ತದೆ. ನಾನು ಒಬ್ಬ ವ್ಯವಸಾಯಗಾರನೇ, ಇವತ್ತು ನನ್ನ ಜೀವನ ವ್ಯವಸಾಯದಿಂದಲೇ ಈ ಮಂತ್ರಿಗಿರಿಯಿಂದಲ್ಲ, ವ್ಯವಸಾಯಗಾರನ ಕಷ್ಟ ಏನು ಎಂಬುದು ನನಗೆ ಗೊತ್ತಿದೆ. ಜೆ.ಪಿ.ಎ. ತೆಗೆದುಕೊಂಡು 4-5 ವರ್ಷಗಳು ಸತಾಯಿಸಿ ಅವರು ಬಂದಾಗ 5-6 ಸಾವಿರ ರೂ.ಗಳನ್ನು ಕೊಡುತ್ತಾರಲ್ಲಾ ಅದೆಲ್ಲಾ ನನಗೆ ಗೊತ್ತಿದೆ. ಅದನ್ನು ನಾನು ಅನುಭವಿಸಿ ಇದನ್ನು ತಂದಿದ್ದೇನೆ. ಯಾವ ಏಜೆಂಟ್ ನಮಗೆ ದುಡ್ಡು ಕೊಟ್ಟಿಲ್ಲ, ಬೇಕಾದರೆ ಆ ಏಜೆಂಟ ಯಾರಿದ್ದಾರೆ ಅವರ ಹತ್ತಿರ ನಾನು ಮಾತನಾಡುವಾಗxxx ಎನೆಂಬುದು ಹೇಳೇಬೇಕಾಗಿ ಬಂತು, ನಿಮಗೆ ಇದರಿಂದ ನೋವಾಗಿದ್ದರೆ ಐ ಆಮ್ ಸಾರಿ; ಅದು ನನ್ನ ಉದ್ದೇಶವಾಗಿರಲಿಲ್ಲ. ಎಂದು ಹೇಳಲಿಲ್ಲ, ಯಾವ ಮಹಮದ್ ಬೀನ್ ತೊಘಲಕ್ ಅಂದಾಗ ಎಂದು ಹೇಳಿದ್ದು not with only bad taste; please do not be under that impression. ಆದ್ದರಿಂದ ನಿಮಗೆ ಏನಾದರೂ ನೋವಾಗಿದ್ದರೆ ಕ್ಷಮಿಸಿ. I am sorry.

ಶ್ರೀಮತಿ ಪ್ರಮೀಳ ನೇಸರ್ಗಿ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳಿಗೆ

ಅಧ್ಯಕ್ಷರು : ಎಲ್ಲರೂ ಅವರೇ ಎಲ್ಲರೂ ಅಲ್ಲಿಂದ ಬಂದವರೇ.

SRI R.L. JALAPPA : ನಮ್ಮ ಅಸ್ಸಿಸ್ಟರ್ಸ ಅವರು. ಅವರ ಡಿಸೆಂಟ್ಸ ನಾವು. ಇನ್ನೂ ಆ ಕ್ಯಾರಕ್ಟರ್ ಹೋಗಿಲ್ಲ. ಆ ನಮಗೆ ಇನ್ನೂ ಎಲ್ಲಾ ಇದೆ.

ಶ್ರೀ ವಾಟಾಳ್ ನಾಗರಾಜ್: ಈಗ ನಾನು ಪುನಃ ಈ ವಿಚಾರವನ್ನು ಪರ್ಯಾಲೋಚಿಸಬೇಕಾಗುತ್ತದೆ. ಅವರು ಮಾತನಾಡಿದ್ದು ನೋಡಿದರೆ ಧಾಟಿ ತಪ್ಪಿದ್ದಾರೋ ಏನೋ ಅನಿಸುತ್ತಿದೆ.

---

xxx ಅಧ್ಯಕ್ಷರ ಆದೇಶದ ಮೇರೆಗೆ ತೆಗೆದು ಹಾಕಲಾಗಿದೆ.

ಅಧ್ಯಕ್ಷರು : ಆಕಚ್ಯೂಲಿ ಏನಾಯಿತೆಂದರೆ "ಮಾನ್ಯ ಮಂತ್ರಿಗಳೇ" ಎನ್ನುವ ಬದಲು "ಮಾನ್ಯ ಮಂಕಿಗಳೇ" ಎಂದರು. ಅವರು ಉದ್ದೇಶ ಪೂರ್ವಕವಾಗಿ ಅನ್ನಲಿಲ್ಲ. ಅವರು ಸ್ವಲ್ಪ ಹೊತ್ತು ಬಿಟ್ಟು ಆಮೇಲೆ ಮಾತನಾಡುವಾಗ ಬಾಯಿ ಜಾರಿ ಅಂದದ್ದು. ಅದಕ್ಕೆ ಮಾನ್ಯ ಜಾಲಪ್ಪನವರು ಸತ್ಯ ಹೇಳಿದರಲ್ಲಾ. ಅವರು ನಮ್ಮ ಪೂರ್ವಜರು, ನಮ್ಮಲ್ಲಿ ಕೆಲವರಲ್ಲಿ ಅವರ ಕೆಲವು ಗುಣಗಳು ಉಳಿದಿದೆ ಎಂದು ಹೇಳಿದರು. ನಮ್ಮ ಅನುಭವ ಕೂಡ ಅದು.

ಶ್ರೀ ವಾಟಾಳ್ ನಾಗರಾಜ್ : ನಾನು ತಮಗೆ ಏನು ಹೇಳುತ್ತೇನೆಂದರೆ ಇವರು ಹುಬ್ಬಾಸ್ಪತ್ರೆ ಎಂದರಲ್ಲಾ, ಅದು ನಿಜವೇನೋ ಎಂದು ಆಮೇಲೆ ನನಗ್ನಿನಿಸಿತು.

ಅಧ್ಯಕ್ಷರು : ಬಹಳ ದಿವಸಗಳು ಆದ ಮೇಲೆ ಮಾನ್ಯ ವಿರಪ್ಪ ಮೊಯಿಲಿಯವರು ಬಂದಿದ್ದಾರೆ. ಇಂತಹ ಒಂದು ವಾತಾವರಣವನ್ನು ನೋಡಿ ಅವರಿಗೆ ಇನ್ನು ಮುಂದೆ ರೆಗ್ಯೂಲರ್ ಆಗಿ ಇಲ್ಲಿ ಇರಬೇಕು ಎಂದು ಅವರಲ್ಲಿ ನನ್ನ ಪ್ರಾರ್ಥನೆ.

ಶ್ರೀಮತಿ ಪ್ರಮೀಳ ನೇಸರ್ಗಿ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳಿಗೆ ಯಾವುದಾದರೂ ಶಾಸನದ ಬಗ್ಗೆ ಯಾರ ಹೆಸರನ್ನಾದರೂ ಹೇಳಿ ಅದರಿಂದ ಅವರ ಮನಸ್ಸಿಗೆ ನೋವಾಗಿದ್ದರೆ ಕ್ಷಮಿಸಬೇಕು. ನಾನು ಆ ವಿಷಯದಲ್ಲಿ ಹೇಳಲಿಲ್ಲ. ನಾನು ಹೇಳಿರುವಂಥಾದ್ದು ಶಾಸನ ಇಷ್ಟು ಕರಾಳವಾಗಿದೆ. ಇಷ್ಟು ಕರಾಳವಾದಂತಹ ಶಾಸನವನ್ನು ಜನರ ಮೇಲೆ ಹೇರುವಂತಹ ಸಂದರ್ಭದಲ್ಲಿ ಬಹಳ ದುಃಖವಾಗುತ್ತಿದೆ. ನಮ್ಮ ಜನರಿಗೆ ಕಷ್ಟವಾಗುತ್ತಿದೆಯಲ್ಲಾ, ಇಂತಹ ಕರಾಳವಾದಂತಹ ಶಾಸನವನ್ನು ತಂದಿದ್ದಿರಲ್ಲಾ ಎಂದು ದುಃಖವಾಗುತ್ತಿದೆ. ಮಹಾತ್ಮ ಗಾಂಧಿಯವರು ಭೂಸುಧಾರಣೆ ಕಾಯಿದೆಯನ್ನು ತರಬೇಕೆಂದು ಏನು ಕನಸನ್ನು ಕಟ್ಟಿದ್ದರೊ, ಅವರು ಏನಾದರೂ ಇದ್ದಿದ್ದರೆ ಈ ಒಂದು ವಿಪರ್ಯಾಸವನ್ನು ನೋಡಿದ್ದರೆ ಖಂಡಿತವಾಗಿಯೂ ಅವರು ವಿಧಾನಸೌಧಕ್ಕೆ ದಂಡೆತ್ತಿ ಬರುತ್ತಿದ್ದರು. ಮಾನ್ಯ ಜಾಲಪ್ಪನವರೇ, ದಯಮಾಡಿ ಇದನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳುತ್ತಿದ್ದರೋ ಏನೋ ಅನಿಸುತ್ತದೆ. 79ಎ, 79ಬಿ, 80 ಸೆಕ್ಷನ್ ಬಗ್ಗೆ ಮಾನ್ಯ ಮಂತ್ರಿಯವರು ಹೇಳಿದರು. ಇವತ್ತಿನ ದಿವಸ ಎಷ್ಟು ಅಪ್ಲಿಕೇಷನ್ ಹರಿಜನರ ಜಮೀನುಗಳನ್ನು ಅಪ್ಲಿಕೇಷನ್ ಹಾಕಿ ಎಕ್ಸಮಷನ್ ತೆಗೆದುಕೊಂಡು ಮಾರಾಟ ಮಾಡುವುದಕ್ಕೆ ಹೋಗಿದ್ದಾರೆ ಎಂಬ ಬಗ್ಗೆ ಮಾಹಿತಿ ಕೊಡಿ. ಮಾರಾಟಕ್ಕೆ ಬರುವುದಿಲ್ಲವೆನ್ನುವುದು ಬೇರೆ, ಕಾಯಿದೆ ತರುವುದು ಬೇರೆ, ಪರ್ಮಿಷನ್ ಕೊಡುವುದು ಬೇರೆ, ಇಂತಹ ಕಾನೂನಿನಲ್ಲಿ ಎಷ್ಟು ಜನರಿಗೆ ಕೊಟ್ಟಿದ್ದೀರೆಂಬುದನ್ನು ತಾವು ಸ್ಪಷ್ಟಪಡಿಸಬೇಕಾಗುತ್ತದೆ. ಎಷ್ಟು ಹರಿಜನರು ಕೊಟ್ಟಂತಹ ಜಮೀನು ಪರಭಾರೆಯಾಗಿ ಹೋಗಿದೆ ಎಂಬುದನ್ನು ತಾವು ಹೇಳಬೇಕಾಗುತ್ತದೆ. ಹರಿಜನ ಗಿರಿಜನರಿಗೆ ಹೋದಂತಹ ಜಮೀನು ಕಾನೂನಿನ ಅನ್ವಯ ಸೆಕ್ಷನ್ 79ಎ, 79ಬಿ, 80 ಈ ಪ್ರಕಾರ ಹೋಗುತ್ತದೆ. ಕಂಪನಿ ಆಕ್ಟನಲ್ಲಿ ಕಂಪನ ಇಟ್ಟುಕೊಳ್ಳಬಾರದೆಂದು ತಂದಿದ್ದೀರಿ. ತಮಗೆ ಗೊತ್ತಿದೆ. ಇವತ್ತು ಅದು ಆಗಬಾರದೆಂದು ಹೇಳಿ ಅಪೀಲ್ ಪೆಂಡಿಂಗನಲ್ಲಿದೆ. ಅಂತಹ ಅಪೀಲಗಳೆಲ್ಲಾ ಇವತ್ತು ಸೂಟ್ ಡಿಸಮಿಸ್ ಆಗಿ ಯಾರ ಜಮೀನು ಅವು ? ಅವೆಲ್ಲಾ ಹರಿಜನ, ಗಿರಿಜನರಿಗೆ ಸೇರಿದಂಥ ಜಮೀನು ಆಲೋ ಆಗುತ್ತಿದೆ, ಇಂತಹ ಜಮೀನುಗಳಿಗೆ ಈವತ್ತು specific performance

ಸೂಟಹಾಕ ಕಂಪನಿಯವರೂ ಕೂಡ ಲ್ಯಾಂಡ್ ತೆಗೆದುಕೊಳ್ಳುವುದಕ್ಕೆ ತಾವು ಪರ್ಮಿಷನ್ ಮಾಡಿಕೊಟ್ಟಿದ್ದೀರಿ. ಎಕ್ಸಮಷನ್ ಮಾಡಿದಿದ್ದೀರಿ. ಕಂಪನಿಯವರು ಫ್ಯಾಕ್ಟರಿ ಮಾಡಬಹುದೆಂದರೆ, ಈ ಕಾನೂನು ಸೆಕ್ಷನ್ 79ಎ ಉಪಯೋಗವಾಗುವುದಿಲ್ಲ, 79ಬಿ ಕೂಡ ಉಪಯೋಗವಾಗುವುದಿಲ್ಲ. ಈ ಎರಡೂ ಉಪಯೋಗವಾಗುವುದಿಲ್ಲವೆಂದರೆ ಲಂಕೂಡ ಇದ್ದೂ ಪ್ರಯೋಜನವಾಗುವುದಿಲ್ಲ. ಈ ಮೂರು ಸೆಕ್ಷನ್ ಹೋಯಿತು ಎಂದರೆ ಸೆಕ್ಷನ್ 63(5) ತಾವು ಏನು ತಂದಿದ್ದೀರಿ. ಷುಗರ್ ಫ್ಯಾಕ್ಟರಿಯಲ್ಲಿ ಸೆಕ್ಷನ್ 63(8) ಏನು ತಂದಿದ್ದೀರಿ, ಸಕ್ಕರೆ ಫ್ಯಾಕ್ಟರಿ only for research purposes ಅದೂ ಕೂಡ ಹೋಗುತ್ತದೆ. ರಿಸರ್ಚ ಪರ್ಪಸೆಸ ಎನ್ನುವುದು ಹೋಗಿ ಬೇರೆ ಕಾರ್ಯ ಕ್ರಮಗಳಿಗೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದಹಾಗೆ ಸಕ್ಕರೆ ಫ್ಯಾಕ್ಟರಿಯವರು ಎಷ್ಟಾದರೂ ಎಕರೆ ಜಮೀನುಗಳನ್ನು ತಗೆದುಕೊಂಡು ಈ ಕಾನೂನಿನ ಅಡಿಯಲ್ಲಿ ಬರುವುದಕ್ಕೆ ಅವಕಾಶವಿದೆ. ಅಷ್ಟೇ ಅಲ್ಲ Deemed to be surplus under Sections ಎಂದು ಇದೆ. ಸೆಕ್ಷನ್ 66-67ನಲ್ಲಿ ಯಾವ ರೀತಿಯ ಕಾಂಪನಸೇಷನ್ ಕೊಡುತ್ತೀರೆಂಬುದನ್ನು ಕೂಡ ತಾವು ನೋಡಬೇಕಲ್ಲಾ ಸೆಕ್ಷನ್ 67ರಲ್ಲಿ, ನೀವು ಏನು ಹೇಳಿದ್ದೀರಿ ಅಂದರೆ, ``While fixing the purchase price of the land, Option to deposit the purchase price of the land so granted either in a lump sum or in such annual instalments not exceeding 20 as the Tahsildar may determine, the first instalment becoming payable within such time as may be prescribed". ನಾನು ಕೇಳುತ್ತಿದ್ದೇನೆ ಈ ಎಕ್ಸಂಪಶನ್ ಅಡಿಯಲ್ಲಿ ತಾವು ಈ ಜಮೀನುಗಳನ್ನು ಕೊಟ್ಟಾಗ ಆ ಜಮೀನನ್ನು ಯಾರಿಗೆ ಕೊಡುತ್ತೀರಿ? ಕಂಪನಿಗಳಿಗೆ ಪರ್ಮಿಷನ್ ಕೊಡುತ್ತೀರಲ್ಲಾ ಅದನ್ನು ಯಾವ ರೀತಿ ಎಕ್ಸಂಪಷನ್ ಮಾಡುತ್ತೀರಿ? ಇದನ್ನೆಲ್ಲಾ ಹೇಳಬೇಕು ತಾವು. ಸೆಕ್ಷನ್ 79ಬಿ ನಲ್ಲಿ ಮತ್ತು ಸೆಕ್ಷನ್ 79ಎ ನಲ್ಲಿ ಎಕ್ಸಂಪಷನ್ ಕೊಡುತ್ತೀರಲ್ಲಾ ಆ ಲ್ಯಾಂಡ್‌ಗೆ ಏನಾದರೂ ಕಾಂಪೆನಸೇಷನ್ ನೀವು ಫಿಕ್ಸ ಮಾಡಿದ್ದೀರೋ? ರೇಟ್ ಫಿಕ್ಸ್ ಮಾಡಿದ್ದೀರೋ? ರೇಟ್ ಫಿಕ್ಸ್ ಮಾಡಿಲ್ಲ ಎಂದರೆ ಅವರಿಗೆ ಹೇಗೆ ಆ ಜಮೀನು ಹೋಗುತ್ತದೆ? They can own the land.

ಶ್ರೀ ಆರ್. ಎಲ್. ಜಾಲಪ್ಪ : ಇಲ್ಲಿ ಜಮೀನು ಕೊಡುವ ಪ್ರಶ್ನೆ ಬರುವುದಿಲ್ಲ. ಇಲ್ಲಿ ಇರುವುದು ಏನೆಂದರೆ ಒಂದು ಇಂಡಸ್ಟ್ರೀ ನೂರು ಎಕರೆ ಜಮೀನನ್ನು ಕೊಂಡುಕೊಳ್ಳಬಹುದು, ಹಾರ್ಟಿಕಲ್ಚರ್‌ಗೆ ನೂರು ಎಕರೆವರೆಗೆ ಕೊಂಡುಕೊಳ್ಳಬಹುದು, ಹೌಸಿಂಗ್‌ಗೆ ನೂರು ಎಕರೆವರೆಗೆ ಕೊಂಡುಕೊಳ್ಳಬಹುದು. ಕೊಂಡುಕೊಳ್ಳುವುದು ಮಾರುವಉದು ಅವರವರಿಗೆ ಸಂಬಂಧಪಟ್ಟಿರುವುದು. ನಮಗೆ ಪ್ರಾಜೆಕ್ಟ್ ರಿಪೋರ್ಟ್ ಕೊಟ್ಟವನು ಪ್ರಾಜೆಕ್ಟ್ ರಿಪೋರ್ಟ್ ಫೀಸಿಬಲ್ ಎಂದು ಹಳಿ ಅವನು ಹಣ ಏನು ತರುತ್ತಾನೆ ಆ ಮೇಲೆ ಸೋರ್ಸ ಆಫ್ ಫೈನಾನ್ಸಿಂಗ್ ಏನು, ಆ ಪ್ರಾಜೆಕ್ಟ ವಯಬೈಲ್ ಅಲ್ವಾ ಎಂದು ತೋಳಿ ಲ್ಯಾಂಡ್ ಅಡಿಟ್ ಮಾಡಿದ ಮೇಲೆ ನಾವು ಅವನಿಗೆ ಕೊಂಡುಕೊಳ್ಳಲು ಪರ್ಮಿಷನ್ ಕೊಡುತ್ತೇವೆ. That is between the seller and the buyer. ಹಣ ನಾವು ಫಿಕ್ಸ ಮಾಡುವುದಿಲ್ಲ. ಅವರೇ ಫಿಕ್ಸ ಮಾಡಿಕೊಳ್ಳಬೇಕು. ನಮ್ಮ ಉದ್ದೇಶ ಇಷ್ಟೇ, ರೈತನಿಗೆ ನೇರವಾಗಿ ನಾದರೂ

ಸಿಕ್ಕುವುದಾದರೆ ಅವರಿಗೇ ಸಿಗಲಿ, ಈ ದಲ್ಲಾಳಿಗಳಿಗೆ ಸಿಕ್ಕಿ ಮಾರುತಿ ಕಾರನಲ್ಲಿ ಊರೂರು ತಿರುಗುವುದು ಬೇಡ ಎಂಬುದು ನಮ್ಮ ಉದ್ದೇಶ. ನಾವು ಮಧ್ಯ ಪ್ರವೇಶ ಮಾಡಿ ರೇಟ್ ಫಿಕ್ಸ ಮಾಡುತ್ತಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅದೇ ರೈತರು ಸೆಕ್ಷನ್ 80ರ ಪ್ರಕಾರ ಅಸಿಸ್ಟೆಂಟ್ ಕಮೀಷನರರವರ ಮುಂದೆ ಹೋಗಿ ಅಪ್ಲಿಕೇಷನ್ ಹಾಕಲೇಬೇಕು. ನೀವು ಪ್ರೋಹಿಬಿಟ್ ಯಾರನ್ನೂ ಮಾಡಲಿಲ್ಲ. ಯಾರು ಬೇಕಾದರೂ ಅಪ್ಲಿಕೇಷನ್ ಹಾಕಬಹುದು ಎಷ್ಟು ಬೇಕಾದರೂ ಮಾರುವುದಕ್ಕೆ ಕಂಪನಿಯವರು ಇವೊತ್ತು ಬಂದು ಇಷ್ಟು ಎಕರೆ ಜಮೀನನ್ನು ರೈತರ ಹತ್ತಿರ ತೆಗೆದುಕೊಳ್ಳುತ್ತೇನೆ ಪರ್ಮಿಷನ್ ಕೊಡಿ ಒಂದು ಕೇಳಿದಾಗ ತಾವು ಹೇಗೆ ಕೊಡುತ್ತೀರಿ? ಅರ್ಬನ್ ಸೀಲಿಂಗ್ ಆಕ್ಟ ಏನು ಮಾಡುತ್ತೀರಿ? ಇದನ್ನೆಲ್ಲಾ ಯೋಚನೆ ಮಾಡಬೇಕು ತಾವು. ಇದನ್ನೆಲ್ಲಾ ಏತ್ಕಕೆ ಹೇಳುತ್ತಿದ್ದೇನೆಂದರೆ..

SRI R.L. JALAPPA : Subject to the Town and Country Planning Act. ಎಂದು ಹೇಳಿ ಈಗ ತಂದಿರುವುದು. ಮೊದಲು ಇತ್ತು ಅದು. ಮಧ್ಯೆ ತೆಗೆದು ಬಿಟ್ಟಿದ್ದೆವು ನಾವು. ಈಗ ಪುನಃ ಅದನ್ನು ಇಂಟ್ರಡ್ಯೂಸ್ ಮಾಡಿ ಅದೇ ತಮ್ಮ ಮುಂದೆ ಕನ್ಸಿಡರೇಷನಗೆ ಇರುವುದು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಹಿಂದೆ ಅರ್ಬನ್ ಸೀಲಿಂಗ್ ಆಕ್ಟ್ ಏನು ಇತ್ತು? ಇವೊತ್ತು ಅರ್ಬನ್ ಸೀಲಿಂಗ್ ಆಕ್ಟನಲ್ಲಿ ಇಷ್ಟು ಎಕರೆ ಮೇಲೆ ಇಟ್ಟುಕೊಳ್ಳಬಾರದಲ್ಲಾ ಅವರು even within the city ಅದಕ್ಕೆ ಹೇಗೆ ಎಕ್ಸೆಂಷನ್ ಕೊಡುತ್ತೀರಿ ತಾವು? ಅದಕ್ಕೆ ಯಾವ ಕಾನೂನಿನ ಅಡಿಯಲ್ಲಿ ತರುತ್ತಿದ್ದೀರಿ? ಅರ್ಬನ್ ಸೀಲಿಂಗನಲ್ಲಿ ನಲವತ್ತು ಯುನಿಟ್ಸ ಎಂದು ಮಾಡಿದ್ದೀರಿ. ನಲವತ್ತು ಯೂನಿಟ್ ಎಂದರೆ 200 ಎಕರೆ ಆಗುತ್ತದೆ. ಈ 200 ಎಕರೆಯನ್ನು ಯಾವ ಕಾನೂನಿನ ಅಡಿಯಲ್ಲಿ ಎಕ್ಸಂಪಷನ್ ಕೊಡುತ್ತೀರಿ?. ಲ್ಯಾಂಡ್ ರಿಫಾರ್ಮ್ಸ ಆಕ್ಟನಲ್ಲಿ ಇರತಕ್ಕಂಥದ್ದು non-agriculturist ಪರ್ಚೆಸ್ ಮಾಡಬಾರದೆಂದು.

SRI R.L. JALAPPA : I request you to kindly read the amendments properly. ನಲವತ್ತು ಯೂನಿಟ್ಸ ನಾವು ಯಾರಿಗೂ ಕೊಟ್ಟಿಲ್ಲ. ನಲವತ್ತು ಯೂನಿಟ್ಸ್ ಕೊಟ್ಟಿದ್ದುದು ಯಾರಿಗೆ ಎಂದರೆ ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಯೊಳಗೆ ಫ್ರಾನ್ ಕಲ್ಟಿವೇಷನಗೆ ಈಗಾಗಲೇ ಅವರು ಅನುಷ್ಠಾನ ಮಾಡಿಕೊಳ್ಳುತ್ತಿದ್ದಾರೆ. ಲೀಸ್ ತೆಗೆದುಕೊಳ್ಳುತ್ತಿದ್ದಾರೆ. ಅಲ್ಲಿ ಯಾರಾದರೂ ಫಾರ್ಮ್‌ಗಳಿಂದ ಈ ಫ್ರಾನ್ ಕಲ್ಚರ್, ಫಿಷ್ ಕಲ್ಚರ್ ಮಾಡುವವರು ಲೀಸಗೆ ತೆಗೆದುಕೊಳ್ಳಬಹುದು ಎಂದು ಹೇಳಿದ್ದೇವೆ. ನಾವು ಯಾರಿಗೂ ನಲವತ್ತು ಯೂನಿಟ್ಸನ್ನು ಯಾರಿಗೂ ಕೊಟ್ಟಿಲ್ಲಿ? ತಾವು ದಯವಿಟ್ಟು ಸ್ವಲ್ಪ ಆಕ್ಟನ್ನು ನೋಡಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಹೇಳುತ್ತೇನೆ. ಆಕ್ಟ 1974 ಬಂದ ನಂತರ ``No lease is permitted" ಇದು ಕಾನೂನು Lease is permitted only in two cases; soldiers and seamen.

SRI R.L. JALAPPA : That is why we have made the amendment.

ಶ್ರೀಮತಿ ಪ್ರಮೀಳಾ ನೇಸರ್ಗಿ : ಆ ಕಾನೂನು ಬಂದಾಗ That is on 1-3-1974, if the lease is given to soldiers and seamen, it shall be continued. After the coming into force of the Act, Lease prohibited. Whether it is Acqua culture or any other culture, under the Act, lease is prohibited.

ಶ್ರೀ ಆರ್.ಎಲ್. ಜಾಲಪ್ಪ : ಅಲ್ಲಿ ಏನಾಗಿದೆ ಎಂದರೆ ಮಾನ್ಯ ಅಧ್ಯಕ್ಷರೇ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಮಾತನಾಡಲಿ ನಂತರ ತಾವು ರಿಪ್ಲೈ ಕೊಡಿ ಆ ಮೇಲೆ ಏನಾಗುತ್ತದೆ ಎಂದು ನಂತರ ನೋಡೋಣ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಓರಿಸ್ಸಾದಲ್ಲಿ ಮತ್ತು ಆಂಧ್ರ ಪ್ರದೇಶದಲ್ಲಿ ಇದೇ ರೀತಿ ಅಕ್ವಾಕಲ್ಚರ್‌ಗೆ ಎಂದು ಹೇಳಿ ಜಮೀನುಗಳನ್ನು ಕೊಟ್ಟು ಅಲ್ಲಿರತಕ್ಕಂಥ ಪರಿಸ್ಥಿತಿ ಏನಾಗಿದೆ ಎಂಬುದರ ಬಗ್ಗೆ ದಯವಿಟ್ಟು ನಿಮ್ಮ ಇಂಟೆಲಿಜೆನ್ಸದಿಂದ ರಿಪೋರ್ಟ್ ತರಿಸಿ. ಅಲ್ಲಿಯ ಪರಿಸ್ಥಿತಿಯ ಬಗ್ಗೆ ತಿಳಿಯುತ್ತದೆ. ಅಲ್ಲಿರತಕ್ಕಂಥ ಜಮೀನು ಹಾಳಾಗಿ, ಅದರ ಪೊಟೆನಷಿಯಾಲಿಟಿ ಕೂಡ ಹಾಳಾಗಿ ಇವೊತ್ತು ಆ ಭೂಮಿ ಉಪಯೋಗಕ್ಕೆ ಬಾರದ ಹಾಗೆ ಆಗಿದೆ.

ಅಧ್ಯಕ್ಷರು : ಓರಿಸ್ಸಾದಲ್ಲಿ ಏನಾಗಿದೆ ಎಂಬುದು ನನಗೆ ಗೊತ್ತಿಲ್ಲ.ಆಂಧ್ರದಲ್ಲಿ ನೆಲ್ಲೂರಿನಲ್ಲಿ ಫ್ರಾನ್ ಕಲ್ಚರ್ ಮತ್ತು ಫಿಷ್ ಕಲ್ಟಿವೇಷನಗೆ ಹೆಚ್ಚಿಗೆ ಜಮೀನನ್ನು ತೆಗೆದುಕೊಂಡಿದ್ದಾರೆ. ಅಲ್ಲಿ ಬೇರೆ ಏನೂ ಕಲ್ಟಿವೇಷನ್ ಮಾಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ನನಗೆ ಸ್ವಲ್ಪ ಇದರಲ್ಲಿ ಆಸಕ್ತಿ ಇದೆ. ಗೋಪಾಲರೆಡ್ಡಿ ಎಂಬ ನನ್ನ ಸ್ನೇಹಿತ he had expertise training in Astralia and he has come back and he is doing specilisation in Prawn culture and Fish culture. He is a scientist.

ಶ್ರೀಮತಿ ಪ್ರಮೀಳಾ ನೇಸರ್ಗಿ : ನನ್ನ ಹತ್ತಿರ ಕಂಪ್ಲೀಟ್ ರಿಪೋರ್ಟ್ ಇದೆ. ನಾನು ಅದನ್ನು ತಮಗೆ ಕಳುಹಿಸಿಕೊಡುತ್ತೇನೆ. ಅಲ್ಲಿ ಪರಿಸ್ಥಿತಿ ಏನಾಗಿದೆ ಎಂಬುದು ಅದರಿಂದ ತಿಳಿಯುತ್ತದೆ. ನಾನು ಬರೀ ರಿಪೋರ್ಟನ್ನು ತರಿಸಿಲ್ಲ. ಅಲ್ಲಿ ಕೆಲವರು ಮಾಡುತ್ತಿದ್ದವರನ್ನು ಕರೆಸಿ ಕೇಳಿದ್ದೇನೆ. ಏನು ಅನಾಹುತ ಆಗಿದೆ ಎಂಬುದನ್ನು ತಾವು ದಯವಿಟ್ಟು ನೋಡಬೇಕು. ಅಲ್ಲಿ ಸೀಬೆಲ್ಟ ಜಮೀನನ್ನು ಎಲ್ಲೂ ಕೂಡ ಕೊಡಬಾರದೆಂದು ಎಕ್ಸಪರ್ಟ ಓಪಿನಿಯನ್ ಬಂದಿದೆ. ಆದ್ದರಿಂದ ಇಂತಹ ಪರಿಸ್ಥಿತಿಯ ಬಗ್ಗೆ ಯೋಚನೆ ಮಾಡದೆ ಶಿಕ್ಷಣ ಕನ್ನಡಕ್ಕೆ ನೀವು ನಲವತ್ತು ಯುನಿಟಗಳನ್ನು ಕೊಡುತ್ತೀರಲ್ಲಾ.

ಡಾ|| ಎಂ. ಶಂಕರನಾಯ್ಕ : ನಾವು ವಿಷಯ ಸಮಿತಿಯೊಂದಿಗೆ ವೆಸ್ಟ್ ಬೆಂಗಾಲದ ಭವನಕ್ಕೆ ಭೇಟಿ ಕೊಡುವ ಸದಾವಕಾಶ ಸಿಕ್ಕಿತ್ತು. ಅಲ್ಲಿ ನಮಗೆ ಈ ಅಕ್ವಾಕಲ್ಚರ್, ಫ್ರಾನ್ ಕಲ್ಚರ ಬಗ್ಗೆ ನೋಡತಕ್ಕಂಥ ಒಂದು ಅವಕಾಶ ದೊರೆಯಿತು. ಅಲ್ಲಿಯ ರೈತರು ಇವೊತ್ತು ಲಕ್ಷಾಂತರ ರೂಪಾಯಿಗಳನ್ನು ಸಂಪಾದನೆ ಮಾಡುತ್ತಿದ್ದಾರೆ. ಈ ಫ್ರಾನ್ಸ ಬೇರೆ ದೇಶಕ್ಕೆ ರಫ್ತಾಗುತ್ತಿದೆ. ನಮ್ಮ ದೇಶದಲ್ಲಿ 500

ರೂಪಾಯಿಗಳಿಗೆ ಒಂದು ಕೆ.ಜಿ. ಮಾರುತ್ತಿದ್ದಾರೆ. ಅಲ್ಲಿಯ ರೈತರು ಏನು ಹೇಳುತ್ತಿದ್ದಾರೆಂದರೆ ಇದು ಬಂದ ನಂತರ ನಾವು ಹಣ ಸಂಪಾದನೆಯನ್ನು ಚೆನ್ನಾಗಿ ಮಾಡುತ್ತಿದ್ದೇವೆಂದು. ಅದರಿಂದ ಪರಿಣಾಮ ಏನೂ ಆಗಿಲ್ಲ ರೈತರಿಗೆ ಒಳ್ಳೆಯದಾಗಿದೆ. The price of fish and Prawn in going down like anything. From Rs.500 it has come down to Rs. 200/-

MR. SPEAKER : With regard to market fluctuations, I am not having a definite opinion. But this opinion which the Hon'ble Member Pramila expressed that the land where Prawn culture or Acqua culture is developed is becoming sterile, is not the correct opinion according to me.

ಡಾ||ಎಂ. ಪಿ. ಕರ್ಕಿ : ನಮ್ಮಲ್ಲಿ ಫ್ರಾನ್ ಕಲ್ಚರ್ ಎಲ್ಲಿ ಸಾಗುವಳಿ ಜಮೀನು ಇದೆ ಇಲ್ಲಿ ಮರಗಳು ಒಣಗಿ ಹೋಗುತ್ತಿವೆ. ನೀರೂ ಸಹ ಉಪ್ಪು ಆಗುತ್ತಿದೆ. ಆಗಬಾರದು ಎನ್ನುವ ಓಡಿನಿಯನ್ ಕೊಡುತ್ತಿದ್ದೇನೆ, ನಮ್ಮ ಕಾನ್ಸಿಟಿಟೂಯನ್ಸಿನಲ್ಲಿ ಬಹಳ ದೂರುಗಳು ಇವೆ. ನಮ್ಮಲ್ಲಿ ಅಡಿಕೆ ಮರ, ತೆಂಗಿನ ಮರ ಎಲ್ಲಾ ಹಾಗೇ ಒಣಗಿ ಹೋಗುತ್ತಿವೆ. ನೀರು ಉಪ್ಪಾಗಿದೆ. ಅದಕ್ಕಾಗಿ ನಾನು ನಮ್ಮ ಮೀನುಗಾರಿಕೆ ಸಚಿವರಲ್ಲಿ ರಿಕ್ವೆಸ್ಟ ಮಾಡಿದ್ದೇನೆ ಎಷ್ಟು ದೂರ ಇರಬೇಕೆಂದು. ಆಡು ಆಗದಿದ್ದರೆ ನಮ್ಮಲ್ಲಿ ರೀಹ್ಯಾಬಿಲಿಟೇಷನ್ ಜನರಿಗೆ ತೊಂದರೆ ಆಗುವುದು ಖಂಡಿತ.

MR. SPEAKER : I have reasons to agree with his opinion.

+ ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಅಧ್ಯಕ್ಷರೆ, ಈಗ್ಗೆ ಕೆಲವೇ ತಿಂಗಳ ಹಿಂದೆ ಒಂದು ತಿದ್ದುಪಡಿಯನ್ನು ಸರ್ಕಾರದವರು ತಂದಮೇಲೆ ಮತ್ತೆ ಈ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಭಾಗಶಃ ಈಗ ತಂದಿರತಕ್ಕ ತಿದ್ದುಪಡಿ ಯೋಗ್ಯವಾಗಿದೆ. ಏಕೆಂದರೆ ಹಿಂದಿನ ಕರ್ನಾಟಕ ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಆಕ್ಟ ಏನಿದೆ ಅದಕ್ಕೂ ಲಕ್ಷ್ಯ ಕೊಡದೆ ಎಗ್ಗೆಸೆಮ್ಟ ಮಾಡಬಹುದೆಂದು ಸಾರಾ ಸಗಟಾಗಿ ಇದ್ದುದನ್ನು ಸ್ವಲ್ಪಮಟ್ಟಗೆ ತಡೆಹಿಡಿಯತಕ್ಕ ಪ್ರಯತ್ನ ಈ ತಿದ್ದುಪಡಿಯಲ್ಲಿ ಮಾಡಿದ್ದಾರೆ. ಬಹುಶಃ 1(ಎ) ಅನ್ನು ನೀವು ಬಿಟ್ಟಿದ್ದಿದ್ದರೆ ಖಂಡಿತವಾಗಿ ನಿಮಗೆ ಕೀರ್ತಿ ಬರುತ್ತಿತ್ತು. 1(ಎ) ಏನಿದೆ ಇದು ಸಂಪೂರ್ಣ ಬಾಧಕ. ಒಂದು ಅಂಶ ಎಂದರೆ ಮುಂದೆ ಆಗತಕ್ಕ ಒಂದು ಅನಾಹುತವನ್ನು ತಪ್ಪಿಸಿದ್ದೀರಿ. ಅದರ ಬಗ್ಗೆ ಅಭಿನಂದಿಸುತ್ತೇನೆ. ಆದರೆ ಇದು ಕೇವಲ ಭಾಗಶಃ ಮಾತ್ರ ಆಗುತ್ತದೆ. 1(ಎ) ಅನ್ನೇ ತಾವು ಸ್ಕ್ರಾಪ್ ಮಾಡಿದರೆ ಯಾವುದೇ ಒಂದು ಅನಾಹುತ ಈ ಭೂ-ಮಸೂದೆಯ ಮೂಲಭೂತ ತತ್ವಕ್ಕೆ ಬರುತ್ತಿರಲಿಲ್ಲ. ತಾವು ಪ್ರಗತಿಪರರಾಗಿರಬಹುದು. ಆದರೆ ನೀವು ಏತಕ್ಕೆ ಮೊದಲನೇ ತಿದ್ದುಪಡಿಯನ್ನು ತಂದಿದ್ದೀರಿ ? ಹೌಸಿಂಗ್ ಇಲಾಖೆಯ ಒಂದು ಒತ್ತಾಯ ಮತ್ತ ಕೈಗಾರಿಕಾ ಇಲಾಖೆಯ ಒತ್ತಾಯ. ಇದು ನಿಮ್ಮ ಪ್ರೊಪೋಸಲ್ ಅಲ್ಲ. It cannot be initiated by the Revenue Minister. It has been initiaited by the Housing Ministry and Industry Ministry. ಅವರಿಗೆ ಈ ಸಾಮಾಜಿಕ ನೀತಿಯ, ಭೂ ಸುಧಾರಣೆಯ ತಿರುಳು ಇದು ಅವರ ದೃಷ್ಟಿ ಕೋನದಲ್ಲಿರುವುದಿಲ್ಲ. ಅವರಲ್ಲಿ ಅಭಿವೃದ್ಧಿ, ಕೈಗಾರಿಕೆ ಅಥವಾ ಹೌಸಿಂಗ್ ಡೆವಲಪಮೆಂಟ್ You(Revenue Minister)

need not feel guilty about it. You are not responsible actually. ಆದರೆ ತಮ್ಮ ಜವಾಬ್ದಾರಿ ಏನಿರುತ್ತದೆ? ತಮ್ಮ ಜವಾಬ್ದಾರಿ ಏನೆಂದರೆ ಈ ಭೂ ಮಸೂದೆಯಲ್ಲಿ ಏನು ತಿರುಳಿದೆ, ಏನು ಕಾನೂನು ಇದೆ? ಹಿಂದೆ ಮಾನ್ಯ ದೇವರಾಜ ಅರಸರವರು ಮಾಡಿದ್ದನ್ನು ಆವತ್ತಿನ ಪ್ರೊಸೀಡಿಂಗ್ಸನ್ನು ದಯವಿಟ್ಟು ತಾವು ನೋಡಬೇಕು. ಅವಸರ ಪಡಬೇಡಿ. ಆದಾದಮೇಲೆ ಇವತ್ತು ಈ ಡಿಸ್ಪನ್ಸ ಆಫ್ ಟೈಮ್, ಇಂಥ ಸ್ವೀಪಿಂಗ್ ಅಮೆಂಟಡೆಂಟನ್ನು ತಾವು ಮಾಡಿದಾಗ ಅದರ ಪರಿಣಾಮ ಗ್ರಾಮಾಂತರ ಜನರ ಜೀವನದ ಮೇಲೆ ಆರ್ಥಿಕವಾಗಿ, ಸಾಮಾಜಿಕವಾಗಿ, ಅದರಲ್ಲೂ ಕೃಷಿಕರ ಮೇಲೆ ಏನಾಗುತ್ತಿದೆ? ನಿಜವಾದ ಕಳಕಳಿ ತಮಗೆ ಇದ್ದಿದ್ದರೆ ಇದನ್ನು ಹೌಸ್ ಕಮಿಟಿ ಅಥವಾ ಜಾಯಿಂಟ್ ಸೆಲೆಕ್ಟ ಕಮಿಟಿಯನ್ನು ನೇಮಕ ಮಾಡಿ ಅದಕ್ಕೆ ಒಪ್ಪಿಸಬೇಕು. ಏಕೆಂದರೆ ಅದರಲ್ಲಿ ಸಾಮಾಜಿಕ ನೀತಿಯ ಬಗ್ಗೆ, ಲ್ಯಾಂಡ್ ಲೆಜಿಸ್ಲೇಷನ ಬಗ್ಗೆ ಎಕ್ಸಪರ್ಟ್ಸ ಯಾರಿರುತ್ತಾರೆ ಅವರಿಂದ ಚರ್ಚೆಯಾಗಿ ಈ ಸದನಕ್ಕೆ ಒಂದು ವರದಿ ಬರಲಿ. ಒಂದರೆಡು ದಶಕ ಕಳೆದಮೇಲೆ ಪರಿಸ್ಥಿತಿ ಬದಲಾವಣೆ ಆಗಬಹುದು. ಅಥವಾ ಪರಿಸ್ಥಿತಿಗನುಗುಣವಾಗಿ ಕಾನೂನನ್ನು ಬದಲಾವಣೆ ಮಾಡಬೇಕಾಗುತ್ತದೆ. ಕಾನೂನನ್ನು ಬದಲಾವಣೆ ಮಾಡಲೇಬಾರದೆಂದು ಹೇಳುವವರು ನಾವಲ್ಲ. ಆದರೆ ಇದರ ಸಾಧಕ socio-economic study or micro study; ಇದಕ್ಕೆ ತಾವು ಮಾಡಿ. Even now I am making a request. AFter all, this is an amendment. They may walk away with this amendment. Doesn't legislators, a joint select committee, make a study of it. Not necessary of this. ಇದನ್ನು ಮಾಡಿದರೆ ಈಗ ತಾವು ಮಾಡರಿತಕ್ಕ ತಿದ್ದುಪಡಿಯನ್ನು ಪುನರ್ ವಿಮರ್ಶೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಭೂಮಿಯಲ್ಲಿ ರಿಯಾಲಿಟೀಸ್ ಏನಿದೆ, ಸಾಮಾಜಿಕ ನ್ಯಾಯಕ್ಕೆ, ಯಾವರೀತಿ ಏಟಾಗುತ್ತದೆ, ಆಘಾತವಾಗುತ್ತದೆ, ಭೂ ಮಸೂದೆಯ ಮೂಲ ಸಿದ್ಧಾಂತ ಏನಿದೆ ಅದಕ್ಕೆ ಯಾವರೀತಿಯ ಬಾಧಕ ಬರುತ್ತದೆಂಬುದನ್ನು ಅಭ್ಯಾಸ ಮಾಡಿ ಇದರ ಮೇಲೆ ಇನ್ನೂ ಹೆಚ್ಚಿನ ತಿದ್ದುಪಡಿಯನ್ನು ಮಾಡುವುದಾದರೂ ಮಾಡಿ. I want you to do it becasue you are a very progressive person. You are party to all that legislation. ಇವತ್ತು ಮಾನ್ಯ ದೇವರಾಜ ಅರಸರವರು ಇದ್ದಾರೆಂಬ ರೀತಿಯಲ್ಲಿ ಅವರ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿದ್ದೇವೆ. ಆದರೆ ಅದಕ್ಕೆ ಸಮಾಧಿಯನ್ನು ಮಾಡತಕ್ಕ ಕೆಲಸ ಈ ಸದನದಲ್ಲಿ ತಮ್ಮ ಅಧ್ಯಕ್ಷತೆಯಲ್ಲಿ ಆಗಬಾರದು. This is my appeal to you. They may walk away with this amendment. Let them walk away with this amendment. Because, ಈಗ ತಂದಿರತಕ್ಕ ತಿದ್ದುಪಡಿ ನಮಗೆ ಪ್ರಯೋಜವಿಲ್ಲ. ಮೊದಲನೆಯ ತಿದ್ದುಪಡಿಯೇ ನಮಗೆ ಮುಖ್ಯ, ನಮಗೆ ಮೂಲಭೂತ ತತ್ವ ಏನು ಅದುಬೇಕು. 9ನೇ ಷೆಡ್ಯೂಲನ್ನು ಹಾಕಿ ಭೂಮಸೂದೆಯನ್ನು ರಕ್ಷಣೆ ಮಾಡಬೇಕೆಂದು ಮಾಡಿದ್ದೇವೆ. ಆದರೆ ಈಗ ಆ ಸೇರಿಸಿರತಕ್ಕ 9ನೇ ಷೆಡ್ಯೂಲನ್ನೇ ರದ್ದುಮಾಡಬೇಕಾದ ಪರಿಸ್ಥಿತಿ ಬರುತ್ತದೆ. ಏಕೆಂದರೆ ಈ ಭೂ ಮಸೂದೆಯ ಸಾಮಾಜಿಕ ನ್ಯಾಯದ ನೀತಿಯ ತತ್ವಕ್ಕೆ ವಿರೋಧವಾದಂಥ ಮಸೂದೆಗೆ ಸಂವಿಧಾನದ 9ನೇ ಷೆಡ್ಯೂಲನ್ನು ಹಾಕಿ ರಕ್ಷಣೆ ಕೊಡಬೇಕಾದ ಅಪಹಾಸ್ಯಕರವಾದ ಪರಿಸ್ಥಿತಿ ಬರುವುದಾದರೆ ಪ್ರಜಾಪ್ರಭುತ್ವಕ್ಕೆ, ಸಂವಿಧಾನಕ್ಕೆ ಇದಕ್ಕಿಂತ ದೊಡ್ಡ ಅಪಚಾರ ಬೇರೊಂದಿಲ್ಲ ಎಂದು ನನಗಿನಿಸುತ್ತದೆ.

ಇದು ಬಹಳ ಆಲೋಚನೆ ಮಾಡಬೇಕಾದಂಥ ವಿಚಾರ. ಮಾನ್ಯ ಜಾಲಪ್ಪನವರೇ, ಇವತ್ತು ತಮ್ಮ ಕೈಯಿಂದ ಇಂಥಹ ತಿದ್ದುಪಡಿಗಳನ್ನು ಈ ಸದನದಲ್ಲಿ ತಂದು ತಾವು ಅಧ್ಯಕ್ಷರಾಗಿರುವಾಗ ಇದು ಪಾಸ್ ಆದರೆ ಬಹುಶಃ ಮಾನ್ಯ ದೇವರಾಜ್ ಅರಸರವವು ಸ್ವರ್ಗದಲ್ಲಿದ್ದರೂ ಕಣ್ಣೀರುಹರಿಸತಕ್ಕ ಪ್ರಸಂಗವನ್ನು ತಾವು ತಂದಿಟ್ಟಿದ್ದೀರಿ. ಇದು ಬಹಳ ದುಃಖವಾಗುತ್ತಿದೆ, ಬಹಳ ಬೇಸರವಾಗುತ್ತಿದೆ. ಮೊನ್ನೆ ನಾವು ಇದನ್ನು ತಡೆಯಬಹುದಿತ್ತು. ಮಾತನಾಡಬಹುದಿತ್ತು. ಆದರೆ ನಾವು ವಾಕೌಟ್ ಮಾಡಿದಾಗ ತಾವು ಪಾಸ್ ಮಾಡಿಕೊಂಡಿರಿ. ಹೌದು ನಾವು ಅವತ್ತು ವಾಕೌಟ್ ಮಾಡಬಾರದಿತ್ತು. ನಾವು ಮಾಡಿದೆವು. ಅದೇ ಸಂದರ್ಭದಲ್ಲಿ ನೀವು ಪಾಸ್ ಮಾಡಿಕೊಂಡುಬಿಟ್ಟಿರಿ. ಇಂಥ ಹರಿಬಿರಿಯಲ್ಲಿ ಇಂಥ ಮಸೂದೆಗಳನ್ನು ಪಾಸ್ ಮಾಡುವುದು ಖಂಡಿತವಾಗಿ ಆಗಬಾರದು. ಆದರೆ ಇವತ್ತೂ ಇನ್ನೂ ಕೂಡ ಕಾಲ ಮಿಂಚಿಲ್ಲ. ತಾವು ಕ್ಯಾಬಿನೆಟನಲ್ಲಿ ಮಾತನಾಡಿ, ತಮ್ಮ ಲೆಜಿಸ್ಲೇಚರ್ ಪಾರ್ಟಿ ಮೀಟಿಂಗನಲ್ಲಿ ಮಾತನಾಡಿ. We will have a joint discussion. 1(a) amendment, ಮೊದಲು ತಂದಿರತಕ್ಕ ತಿದ್ದುಪಡಿ ಏನಿದೆ ಅದನ್ನು ಪೂರ್ತಿಯಾಗಿ ತಾವು ತೆಗೆದುಹಾಕಿದರೆ it can take care of all your industry. ಯಾವುದೇ ತೊಂದರೆಯಾಗುವುದಿಲ್ಲ. ಇಂಡಸ್ಟ್ರೀಯಲ್ ಡೆವಲಪಮೆಂಟಗೆ ನಾಟ್ ಎಕ್ಸೀಂಡಿಂಗ್ 20 ಯೂನಿಟ್ಸ ಎಂದು ಹೇಳಿದ್ದೀರಿ. ಅದಕ್ಕೆ ನಾವು ಆಕ್ಷೇಪಣೆ ಮಾಡುವುದ ಕ್ಯಾಗುವುದಿಲ್ಲ. ಈ ಅಮೆಂಡಮೆಂಟನಲ್ಲಿ 1 ರಿಂದ 5ರವರೆಗೆ ಏನಿದೆ ಇದನ್ನು ಅಲ್ಲಿಗೆ ಬಿಡಿ. ಏಕೆಂದರೆ because you have taken care of it. ಇನ್ನೂ ಹೆಚ್ಚು ಎಕ್ಸಟೆಂಟ್ ಬೇಕೆಂದು ತಮಗೆ ಕಂಡುಬಂದರೆ you provide for it, ಆದರೆ any extent any land ಎಂದು ಹೇಳತಕ್ಕದ್ದು it is as good as scrapping the whole Act. ಇದರಿಂದಾಗಿ ಇಡೀ ಭೂಮಸೂದೆ ಏನಿದೆ ಇದಕ್ಕೆ ಸಂಪೂರ್ಣವಾಗಿ ಬೆಂಕಿಯನ್ನು ಹಚ್ಚಿ ಸುಟ್ಟಂತೆಆಗುತ್ತದೆ, ಇದು ಆಗಬಾರದು. We are greatly concerned, because we have come to this House and we have entered politics because of the land reforms and no other goal or target in becoming a politician or joining Congress or becoming a legislature, subsequent things becoming Minister or Chief Minister, all are accident and subsequent events. But main things is we have all enterted this House with this kind o an aspiration for the dowtrodden people; we know their pain. ತನಗೆ ಆಗುವಂಥ ಆಘಾತವನ್ನು ಸಹಿಸಿಕೊಳ್ಳುವ ಶಕ್ತಿ ಇವತ್ತಿಗೂ ನಮ್ಮ ರೈತನಿಗಿಲ್ಲ ಎಂಬುದು ನಮಗೆ ಗೊತ್ತಿದೆ. ಮಾನ್ಯ ನಾಗೇಗೌಡರು ಮಾತನಾಡುವಾಗ ಸ್ವಲ್ಪ ಹೊತ್ತು ಇದೆ. ಕಾರಣ ನಾನು ತಡವಾಗಿ ಬಂದೆ. ಆದರೆ ಅದರಲ್ಲಿ ಮೊನ್ನೆ ತಂದಂಥ ಒಂದು ಅಮೆಂಡಮೆಂಟನ್ನು ತನ್ನಿ. If there is one clause to support the tenant, I will surrender to you. ಇದೆಯಾ ಹೇಳಿ? ನೀವು ಇದನ್ನು ರಿಲ್ಯಾಕ್ಸ ಮಾಡಿ. ಆ ರೈತನಿಗೆ ಪರ್ಚೇಸ್ ಮಾಡುವ ಅಧಿಕಾರ ಇದೆಯೇ? Have you empowered by this kind of an amendment to allow a farmer at Mandya to purchase the land in excess of the ceiling? No.

ಆದರೆ ಈ ಇಂಡಸ್ಟ್ರಿಯಲಿಸ್ಟಗಳಿಗೆ ಇದೆ. It is all weighed against the farmer, big, small or marginal. It has allowed concession only to a certain class of industrialists and Mafias only.

(INTERRUPTIONS)

ಶ್ರೀ ಎಂ. ವೀರಪ್ಪಮೊಯಿಲಿ : ತಾವು ಅನಂತರ ಮಾತನಾಡಿ. ನಾನು ಈಗ ತುರ್ತಾಗಿ ಹೋಗಬೇಕಾಗಿದೆ. ನನಗೆ ಬೇರೆ ಕಾರ್ಯಕ್ರಮ ಇದೆ. ನಾಳೆ ನನಗೆ ಉತ್ತರ ಕೊಡಿ. ನಾಳೆ ನಾವು ಮಾತನಾಡೋಣ. ಅವಸರಮಾಡಬೇಡಿ. ಮಾನ್ಯ ಜಾಲಪ್ಪನವರೇ, ಯಾವ ಸಾಮಾಜಿಕ ನೀತಿಯ ಕಳಕಳಿ, ಹೃದಯದ ಸ್ಪಂದನ ನಿಮಗೆ ಇದೆಯೋ ಅದು ಇವತ್ತು ಒಣಗಿ ಹೋಗುವಂಥ ಕೆಲಸವನ್ನು ದಯವಿಟ್ಟು ಮಾಡಬೇಡಿ ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ದಯವಿಟ್ಟು ಅವಸರಪಡಬೇಡಿ. 1(ಎ) ಅನ್ನು ತಕ್ಷಣರೇ ಸಕ್ಯಾಪ್ ಮಾಡಿ. Nothing is going to happen. Suppose you want some more units to be given to the industries, educational institutions, places of worship or the Housing Projects or for purpose of Horticulture, we allow you. All of us whole heartedly support it. ಬೇಕಾದರೆ 1-2 ಯೂನಿಟ್ಸನ್ನು ಜಾಸ್ತಿ ಕೊಡಿ. ಆದರೆ 1(ಎ) ಅನ್ನು ಏತಕ್ಕೆ ಹಾಕಿದ್ದೀರಿ. ನಾನಾದರೂ ಹೇಳುವುದೇನೆಂದರೆ, 1 to 4 you can scrap it. If there is a provision 1(a) to give any extent. ಒಂದುಕಡೆ ಲಿಮಿಟ್ ಹಾಕುತ್ತೀರಿ, ಮತ್ತೊಂದು ಕಡೆ ಲಿಮಿಟನ್ನು ತೆಗೆಯುತ್ತಿದ್ದೀರಿ. This is where we are objecting. I would like the entire House to go into this aspect. ಬೇಕಾದರೆ ಜಾಗವನ್ನು ಜಾಸ್ತಿ ಮಾಡಿ. We do not mind. ಆದರೆ ಕನಿಷ್ಠ ಇಷ್ಟು, ಗರಿಷ್ಠ ಇಷ್ಟು ಎಂದು ಇಡಿ. rather we can agree for that. ಆದರೆ ಅನ್-ಲಿಮಿಟೆಡ್ ಪವರ್ ಕೊಡಬೇಡಿ. ನೀವು ಹೇಳಬಹುದು ಸರ್ಕಾರಕ್ಕೆ ಅಧಿಕಾರ ಇದೆಯೆಂದು, ಏನು ಸರ್ಕಾರದಲ್ಲಿ ಅಧಿಕಾರ ಇರುವುದು? ವಿಲೇಜ್ ಅಕೌಂಟೆಂಟಗೆ ಅಧಿಕಾರ ಕೊಟ್ಟರೂ ಒಂದೇ ಅಥವಾ ಸೆಕ್ರೆಟರಿ ರೆವಿನ್ಯೂಗೂ, ಚೀಫ್ ಸೆಕ್ರಟರಿಗೂ ಅಧಿಕಾರ ಕೊಟ್ಟರೂ ಒಂದೇ. Ultimately it goes by that. It is not going to help. ಆದ್ದರಿಂದ ದಯಮಾಡಿ ಅದನ್ನು ಸ್ಕಾಪ್ ಮಾಡಿ. ಹಾಗಾದರೆ you relax the whole Land Reforms Act. ಆಯಿತಲ್ಲಾ your purpose is served.

5.40 ಪಿ.ಎಂ.

ಶ್ರೀ ಕೆ.ಎನ್. ನಾಗೇಗೌಡ : ನಮ್ಮ ಮಾಜಿ ಮುಖ್ಯಮಂತ್ರಿಗಳು ಮಾಡುತ್ತಿರುವ ವಾದವನ್ನು ಕೇಳುತ್ತಾ ನಾನು ಒಂದು ವಿಚಾರವನ್ನು ಗಮನಕ್ಕೆ ತರುತ್ತೇನೆ. ಪ್ರಜಾಪ್ರಭುತ್ವದಲ್ಲಿ ಪ್ರಜಾ ಪ್ರತಿನಿಧಿಗಳಿಗೆ ಅಧಿಕಾರ ಕೊಟ್ಟರೆ ಅಧಿಕಾರ ಇಲ್ಲವೇ ಎಂದು ಕೇಳುತ್ತೀರಿ, ಕ್ಯಾಬಿನೆಟಗೆ ಅಧಿಕಾರ ಕೊಟ್ಟರೆ, ಏನಪ್ಪಾ, ಪ್ರಜಾಪ್ರಭುತ್ವದಲ್ಲಿ ಪ್ರಜಾಪ್ರತಿನಿಧಿಗಳಿಗೆ ಅಧಿಕಾರವೇ ಇಲ್ಲ ಎಂದು ಕೇಳುತ್ತೀರಿ, ಕೊಡದೇ ಹೋದರೆ ಕೊಟ್ಟಿಲ್ಲ ಎಂದು ಹೇಳುತ್ತೀರಿ, ಈಗ ಅಧಿಕಾರವನ್ನು ಕೊಟ್ಟಿರತಕ್ಕಂಥದ್ದು ಜನಪ್ರತಿನಿಧಿಗಳಿಗೆ, not for bureaucrats.

SRI M. VEERAPPA MOILY : `Any extent any land' ಸೆಕ್ಷನ್ 63,79ಎ, 79ಬಿ, 80ಬಿ, ಇದನ್ನೆಲ್ಲಾ ರಿಲ್ಯಾಕ್ಸನೇ ಮಾಡಬಹುದು ಎಂದು ಹೇಳಿದರೆ ಹೇಗೆ? ಆ ರಿಸ್ಟ್ರಿಕಷನ್ಸ್ ಏಕೆ ಇರುವುದು? ಆ ರಿಸ್ಟ್ರೀಕಷನ್ಸ್‌ನ್ನು ತೆಗೆಯಿರಿ so that it will help universally, all the farmers, ಎಲ್ಲರಿಗೂ ಸಹಾಯವಾಗುತ್ತದೆ. Why only try to go all out to help on this particular section of the people. ಏಕೆ ಹೋಗಬೇಕು? ರೈತನಿಗೆ ಈ ಅಧಿಕಾರ ಬೇಡ, ಆದರೆ ಬಾಕಿಯವರಿಗೆಲ್ಲಾ ಈ ಅಧಿಕಾರ ಕೊಡಬೇಕು, ಯಾವ ರೈತನಿಗೆ ಪರವಾಗಿದೆ ಈ ನೀತಿ, ಮಂಡ್ಯದಿಂದ ಬಂದಂಥ ರೈತ ಪ್ರತಿನಿಧಿಯಾಗಿ ತಾವು ಈ ರೀತಿ ಮಾತನಾಡಬಾರದೆ°. You should have pleaded for alright, you relax all these sections, for the rest of the people, let it be universal. I could have atleast appreciated yours approach. Don't become a champion of the Housing Mafia, or Industrial Mafia. After all, I know genuine industrialists. we will do it. ಇದರಲ್ಲಿ ಪೊರ್ ಫೀಚರ್ ಕ್ಲಾಸ್ ಎಲ್ಲಿದೆ ಅಧ್ಯಕ್ಷರೇ, ಒಂದು ವೇಳೆ 2000 ಎಕರೆಯನ್ನು ಕೈಗಾರಿಕೋದ್ಯಮಿ ತೆಗೆದುಕೊಳ್ಳುತ್ತಾನೆ ಅಥವಾ ಹಾರ್ಟಿಕಲ್ಚರ್‌ಗೆ ಎಂದು ತೆಗೆದುಕೊಳ್ಳುತ್ತಾನೆ ಅಥವಾplaces of worshipಎಂದು ತೆಗೆದುಕೊಳ್ಳುತ್ತಾನೆ ಅಥವಾ ವಿದ್ಯಾಸಂಸ್ಥೆಗೆ ಎಂದು ತೆಗೆದುಕೊಳ್ಳುತ್ತಾನೆ Suppose he doesn't uitlise that land, where is the forfeiture clause? ಅದನ್ನು ಹಿಂದೆ ತೆಗೆದುಕೊಳ್ಳುವಂಥ ಅಧಿಕಾರ ಇದರಲ್ಲಿದೆಯೇ ಎಂಬುದನ್ನು ದಯಮಾಡಿ ತಾವು ನೋಡಿ, ಇಷ್ಟು unbridled power ಅನ್ನು ಒಂದು ಕಾನೂನನ್ನು ಮುರಿಯಲಿಕ್ಕೆ ನೀವು ಕೊಡುವುದಾದರೆ ಅದನ್ನು ವಿರೋಧ ಮಾಡಬೇಕಾಗುತ್ತದೆ. Absolute power is given. Blank cheque is given to those industrialists, educational institutions or anybody to make use of this. ದಯಮಾಡಿ ಇದನ್ನು ಮಾಡುವುದಕ್ಕೆ ಹೋಗಬೇಡಿ, ಜಾಲಪ್ಪನವರೇ, ಈ ಕಾಯಿದೆಯನ್ನು ಪುನಃ ನೀವು ಎಕ್ಸಾಮಿನ್ ಮಾಡಿ, I can appreciate you. ಈಗ ನಾನು ಪ್ರಾರಂಭದಲ್ಲೇ ಹೇಳಿದ್ದೇನೆ, ಇದನ್ನು ತಾವು ಇನಿಷಿಯೇಟ್ ಮಾಡಿದ್ದಲ್ಲ. ಏಕೆಂದರೆ ನಿಮ್ಮ ಇಲಾಖೆಯಿಂದಲೂ ಕೂಡ ಅಲ್ಲ. Lloyds Estate ಎಂದು ಹೇಳಿ earlier amendment ಹಿಂದೆ ತರುವ ಮೊದಲೇ ಎರಡು-ಮೂರು ತಿಂಗಳ ನಿಮ್ಮ ಹೆಚ್.ಯು.ಡಿ. ಸೆಕ್ರೆಟರಿಯವರು ಲಾಯಡ್ಸ ಎಸ್ಟೇಟನವರಿಗೆ ಕಾಗದವನ್ನು ಬರೆದಿದ್ದಾರೆ. It is a Government Order. A letter transformed into a government order. I have not brought it here. I have got a copy of it. ಅದರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ನಿಮಗೆ ಯಾವ ರೀತಿ ಲ್ಯಾಂಡ್ ರೀಫಾರ್ಮ್ಸ ಅಮೆಂಡಮೆಂಟನ್ನು ತರಬೇಕೋ ಆ ರೀತಿ ಮಾಡಿ ತಂದು ನಿಮಗೆ ಅನುಕೂಲ ಮಾಡಿಕೊಂಡುತ್ತೇವೆ°{â° undertaking is contained in that Govt Order which is addressed by the HUD Secretary to the Llyods Estate. You plealse produce it here. We appeal to the Hon. Chair to bring that G.O. and plce it here. Then the malafide intention of the Government will be exposed. ಯಾರಿಗಾಗಿ

ಮಾಡುತ್ತಿದ್ದಾರೆ? It is for the Llyods Estate; and it is for the land mafia. ರಾಮಕೃಷ್ಣ ಹೆಗಡೆಯವರು ಮೇಲೆ ನಮಗೆ ಪಾಪ ಏನಿಸುತ್ತದೆ. ಏಕೆಂದರೆ ಅವರ ಮೇಲೆ ಕುಲದೀಪಸಿಂಗ್ ಆಯೋಗದ ಆ ಸರ್ಜಾಪುರದಕ್ಕೆ ಸಂಬಂಧಪಟ್ಟಂತೆ ನೇಮಕ ಮಾಡಲಾಯಿತು. ಆದರೆ ಅಂತಹ ನೂರಾರು ಸಾವಿರಾರು ಲೋಕನ್ಡ ವಾಲಾ ಪ್ರಕರಣಗಳನ್ನು ಸಕ್ರಮಗೊಳಿಸತಕ್ಕಂಥ ಪ್ರಯತ್ನ ಇದರಲ್ಲಿ ಮಾಡಿದ್ದೀರಿ. ಇದು ನಿಮಗೆ ಗೊತ್ತಿಲ್ಲ You are innocent of it, because it is not worked through your department. It is all in some other Department which you may not know. ಈ ಸದನಕ್ಕೆ ಗೌವರ್ನಮೆಂಟ್ ಆರ್ಡರ್ ಬೇಕು. The G.O. passed or a letter in the form of a Government order written to the Lloyds Estate by the Secretary of the HUD. I am very positive about it. That has to be placed on the table of this House. ಇಂಟೆನಷನ್ ಯಾರಿಗಾಗಿ ಮಾಡುತ್ತಿದ್ದಾರೆ? All this amendment is inspired by that transaction and dealings. I stand to it because I have got the document. I can produce it tomorrow. But before that, ಕಂದಾಯ ಮಂತ್ರಿಗಳು ದಯಮಾಡಿ ಸರ್ಕಾರೀ ಆದೇಶವನ್ನು ತರಿಸಬೇಕು; ಅದನ್ನು ಈ ಸದನ ನೋಡಬೇಕಾಗುತ್ತದೆ, ಯಾವ ಉದ್ದೇಶದಿಂದ ಆಗಿದೆ, ಏತಕ್ಕಾಗಿ ಆಗಿದೆ, ಇದು ಸಾಧ್ಯವೇ ಈ ಒಂದು ಇತ್ಯರ್ಥವನ್ನು ಮಾಡಲೂ ತೀರ್ಮಾನವನ್ನು ಮಾಡಲು ಇದು ಬಹಳ ಅಗತ್ಯವಿದೆ. ಆದಕಾರಣ ಮಾನ್ಯ ಅಧ್ಯಕ್ಷರು ಇವೊತ್ತು ಉಳುವವನೇ ಏನು ಹೊಲಹೊಡೆಯನಾಗಬೇಕು one man one profession, the cardinal principle of the land reforms act, Relaxation yes; exemption yes; to what extent?. It is revivalism of the reactionary forces. I must tell you this. We cannot be a party to such an amendment, and we shall not allow you to get this kind of an amendment to be passed. ಆದ್ದರಿಂದ ದಯಮಾಡಿ ಇದರ ಬಗ್ಗೆ ಕೂಲಂಕುಷವಾಗಿತಾವು ಪರಿಶೀಲಿಸಿ ವಿಚಾರ ಮಾಡಿ ಮುಂದುವರಿಸಬೇಕಾದಂಥ ಒಂದು ಅವಶ್ಯಕತೆ ಇದೆ. ಇದರಲ್ಲಿ ಹೇಳಿದಿರಿ ಎಸ್ ಸಿ ಲ್ಯಾಂಡ್ಸ ಎಲ್ಲಿ ಇನಕ್ಲೂಡ್ ಆಗುತ್ತದೆ, ಎಲ್ಲಿ ಎಕ್ಸಕ್ಲೂಡ ಆಗುತ್ತದೆ.? ave you put any proviso saying that it does not apply to the lands owned by SCs? Is it excluded? Land Reforms is an all comprehensive Act. It pertains to all lands whether tananted land or non-tenanted land; whether it is owned by SC or others. The act, which we have passed, Forfeiture Act, ಅದನ್ನು ದಯಮಾಡಿ ಇದರಲ್ಲಿ ಸೇರಿಸಬೇಕಾಗುತ್ತದೆ notwithstanding ಎಂದು ಹೇಳಿ. There should be a proviso. Provided it does not apply to the land owned by the SCs ಎಂದು ಹೇಳಬೇಕಾಗುತ್ತದೆ. ಆದ್ದರಿಂದ ಇದರಲ್ಲಿ ಅನೇಕ ರೀತಿಯ ಲೂಪ್ ಹೋಲ್ಸ್ ಇದೆ. ರೈತ ಹೆಚ್ಚು ಜಮೀನು ಪಡೆಯತಕ್ಕಂಥ ಪ್ರಶ್ನೆಯೇ ಇದರಲಿಲ್ಲ. ಆದ್ದರಿಂದ ದಯಮಾಡಿ ಮಾನ್ಯ ಅಧ್ಯಕ್ಷರೇ, This is transferring land from a farmer to the non-farmer, it is not a so simple

thing. ತಾವು ಹೇಳಿದ ಒಂದು ಮಾತನ್ನು ನಾನು ಒಪ್ಪುತ್ತೇನೆ, ಕೈಗಾರಿಕೆಗಳಿಗೆ ಜಮೀನು ಬೇಕು, ಲ್ಯಾಂಡ್ ಅಕ್ವೈರು ಮಾಡುವ ತಮ್ಮ ಮಾತನ್ನು ಒಪ್ಪುತ್ತೇನೆ, ಲ್ಯಾಂಡ್ ಅಕ್ವೈರ್ ಎಂದರೆ ಈಗ ಮಾರ್ಕೆಟ್ ವ್ಯಾಲ್ಯು ಕೊಡಬೇಕು ಎಂದು ಹೇಳಿ ಎಲ್ಲಾ ಲ್ಯಾಂಡ್ ಅಕ್ವಿಸಿಷನ್ ಆಕ್ಟನಲ್ಲಿದೆ ಪ್ರೊವೈಡ್ ಆಗಿದೆ. ಇವೊತ್ತು ರೀ-ಹ್ಯಾಬಿಲಿಟೇಷನ್ ಕಂಪಲಸರಿಯಾಗಿ ಕೊಡಬೇಕೆಂದು ಸುಪ್ರೀಂ ಕೋರ್ಟನಲ್ಲಿ ಜಡ್ಜಮೆಂಟ್ ಆಗಿದೆ. ಆದ್ದರಿಂದ ಮಾರ್ಕೆಟ ವ್ಯಾಲ್ಯೂ ಬಗ್ಗೆ ಈಗ ಹಿಂದಿನ ಹಾಗೆ ಅಲ್ಲ. ಮೂರು ಕಾಸಿಗೆ ಕೊಡತಕ್ಕಂಥದ್ದು, ಬಿಡಿ ಕಾಸಿಗೆ ಕೊಡತಕ್ಕಂಥದ್ದು ಕಾನೂನು ಪ್ರಕಾರವೂ ಕೂಡ ಆಗುವುದಿಲ್ಲ. We will have to pay the market value, to ensure market value, if the Government can stand, nothing like that. Instead of leaving the Mafia to grab the land by a G.P.A. holder ಇದರಿಂದ ಜಿ.ಪಿ.ಎ. ಹೊರಟು ಹೋಗುವುದಿಲ್ಲ, ಜಿ.ಪಿ.ಎ. ಪುನಃ ರಿವೈವ್ ಆಗುತ್ತದೆ. ಅವರು ಯಾರ್ಯಾರೋ ಮಿಡ್ಲಮ್ಯಾನ್ ಮುಖಾಂತರ ವ್ಯವಹಾರ ಮಾಡುತ್ತಾರೆ. There will not be any Government. Atleast the might Government can always come to the srescue of the weakest. It is not the land Mafia which can come to the rescue of the weakest. ಯಾವ ಪ್ರೀನ್ಸಿಪಲ್ ನೀವು ಮಾತನಾಡುತ್ತಿದ್ದೀರಿ ಮಾನ್ಯ ಜಾಲಪ್ಪನವರೇ? ಆದ್ದರಿಂದ let us have a socio economic study; please consitute a committee here. Let us go into this. In the meanwhile, ಇದೆಲ್ಲಾ ವಿಚಾರ ಮಾಡಿಕೊಂಡು ಒಂದು ವರದಿಯನ್ನು ನಮಗೆ ಕೊಡಬೇಕು, ಆ ಲಾಯಡ್ಸ ಎಸ್ಟೇಟಗೆ ಎರಡು ತಿಂಗಳ ಹಿಂದೆ ಸರ್ಕಾರದ ಮುಖಾಂತರ ಏನು ಅಂಡರಟೇಕಿಂಗ್ ಕೊಟ್ಟಿದ್ದೀರಿ ಅಮೆಂಡಮೆಂಟ್ ಮಾಡುತ್ತೇವೆಂದು ಹೇಳಿ, ಅದರ ಬಗ್ಗೆ ಇರತಕ್ಕಂಥ ಕಾಗದ ಪತ್ರಗಳನ್ನು ಸಭೆಯ ಮುಂದೆ ಇಡಿ. ಕೆಲವು ವ್ಯಕ್ತಿಗಳಿಗೆ, ಅಥವಾ ಕೆಲವು ವ್ಯಕ್ತಿಗಳ ಗುಂಪುಗಳಿಗೆ ಸಹಾಯ ಮಾಡತಕ್ಕಂಥ ಒಂದು ಕೂಟಕ್ಕೆ ಈ ಭೂ ಮಸೂದೆ ಬಲಿಯಾಗಬಾರದು ಎಂಬುದು ನನ್ನ ವಿಶೇಷವಾದ ವಿನಂತಿ. ಆದ್ದರಿಂದ ದಯವಿಟ್ಟು ಅವಸರ ಮಾಡಬೇಕು. Let us discuss tomorrow, place all these materials or records here and then coem to the conclusion. We will leave to the wisdom of the Hon.Speaker also to ponder over all these matters and then come to a correct conclusion so that we will become as legislators, the Champion for the social justice.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮೊಯ್ಲಿಯವರು ಅವಸರವಾಗಿ ಎಲ್ಲಿಗೋ ಹೋಗಬೇಕೆಂದು ಹೇಳುತ್ತಿದ್ದರು.

(ಗೊಂದಲ)

ಉತ್ತರ ನಿಮ್ಮ ಎರಡು ಪಾಯಿಂಟಗಳಿಗೆ ಮಾತ್ರ ಕೊಡುತ್ತಿದ್ದೇನೆ.

(ಗೊಂದಲ)

ಸ್ವಾಮಿ ನಾನು ಹೇಳುವುದನ್ನು ಹೇಳುತ್ತೇನೆ.1993ರಲ್ಲಿ ಒಂದು ಕೈಗಾರಿಕಾ ಪಾಲಿಸಿ ಮಾಡಿದರು, ಆಗ ಮುಖ್ಯಮಂತ್ರಿಗಳು ಯಾರಿದ್ದರು?

(ಗೊಂದಲ)

1993ರ ಕೈಗಾರಿಕಾ ಪಾಲಿಸಿಯಲ್ಲಿ ಪೇಜ್ ನಂಬರ್ 6 ರಲ್ಲಿ ಹೇಳಿದ್ದಿರಿ,

(ಗೊಂದಲ)

ಶ್ರೀ ಕೆ.ಎನ್. ನಾಗೇಗೌಡ : ಸಾರ್, ಪಾಯಿಂಟ್ ಆಫ್ ಆರ್ಡರ್, ಪಾಯಿಂಟ್ ಆಫ್ ಆರ್ಡರ್ ಸಾರ್,

MR. SPEAKER : The Hon'ble Minister wants to explain certain things with regard to the Government Order which is issued by the HUD Secretary. After all, it is not a secret order. It shall have to come to our notice. Let him have hsi say. There shall not be condition imposed on the Minister that he will have to speak on that. Let him have his say. No problem.

SRI. Y. RAMAKRISHNA : We are not questioning the intentions of the Government.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಭಾಧ್ಯಕ್ಷರೇ, ಇತ್ತೀಚಿನ ದಿವಸಗಳಲ್ಲಿ ನಮಗೇನು ಭಯ ಇದೆಯೆಂದರೆ ಶ್ರೀಮಾನ್ ವೀರಪ್ಪಮೊಯಿಲಿಯವರು ಹೇಳಿದಂತೆ, ಆ ನಾಲ್ಕು ಕಾಪಿಗಳನ್ನು ಇಶ್ಯೂ ಮಾಡಿ. ಸಚಿವರೇ ಅದನ್ನು ಆ ಕಾಪಿಗಳನ್ನು ಇಟ್ಟುಕೊಂಡರೆ ನಮಗೆ ಹೇಗೆ ಗೊತ್ತಾಗಬೇಕು? ಆ ಕಾಪಿಗಳನ್ನು ಮಾತ್ರ ಕೇಳುತ್ತಿದ್ದೇನೆ. ಇನ್ನೇನೂ ನಾನು ಡಿಮ್ಯಾಂಡ್ ಮಾಡುತ್ತಿಲ್ಲ. ಕೆಲವು ಸರ್ಕಾರಿ ಆದೇಶಗಳನ್ನು ಇಶ್ಯೂ ಮಾಡುತ್ತಿದ್ದಾರೆ. ಯಾವುದನ್ನು ಸಹ ಬಹಿರಂಗ ಮಾಡುತ್ತಿಲ್ಲ. ಅದಕ್ಕೋಸ್ಕರ ಆ ಸರ್ಕಾರಿ ಆದೇಶದ ಕಾಪಿಯನ್ನು ಕೊಡಿ ಎಂದು ಕೇಳುತ್ತಿದ್ದೇವೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಸಭಾಧ್ಯಕ್ಷರೇ, ದಯವಿಟ್ಟು ನನ್ನನ್ನು ಕ್ಷಮಿಸಬೇಕು, ಅವರು ಹೇಳುತ್ತಿರುವ ಆರೋಪಗಳನ್ನು ನಾನು ನಿರಾಕರಿಸುತ್ತೇನೆ. ನಾವು ಯಾವುದನ್ನೂ ಸಹ ಗೌಪ್ಯವಾಗಿ ಮಾಡಬೇಕಾದ ಅವಶ್ಯಕತೆಯಿಲ್ಲ. ನಾನು ಒಂದೇ ಒಂದು ವಿಷಯವನ್ನು ಕ್ಲಾರಿಫೈ ಮಾಡಿಬಿಡುತ್ತೇನೆ, ಏಕೆಂದರೆ ಮಾನ್ಯ ಮೊಯಿಲಿಯವರು ಬಹಳ ಸ್ಪಿರಿಟೆಡ್ ಭಾಷಣ ಮಾಡಿ ಹೋಗಿದ್ದಾರೆ. I am grateful for hsi commitment, for the poorer sections ಬಿಲ್ ಬಗ್ಗೆ 8 ದಿವಸ ಮಾತನಾಡಲಿ, ಒಂದು ತಿಂಗಳು ಮಾತನಾಡಲಿ I will try to convince you, But this is not way Sir, The Hon'ble Member Sri Moily has delivered a very spirited speech.

ಶ್ರೀ ವೈ. ರಾಮಕೃಷ್ಣ : ಒಂದು ನಿಮಿಷ ನನಗೆ ಮಾತನಾಡಲು ಅವಕಾಶ ಕೊಡಿ.

SRI R.L. JALAPPA : I am grateful for his commitment towards downtrodden. We are not taking away any land of downtraoddon.

ಶ್ರೀ ವೈ. ರಾಮಕೃಷ್ಣ : 20 ಎಕರೆ ಕೊಡುತ್ತೇವೆಂದು ನೀವು ಹೇಳಿದಿರಿ.

ಶ್ರೀ ಆರ್.ಎಲ್. ಜಾಲಪ್ಪ : ಯಾರಿಗೆ ಕೊಡುತ್ತನೆಂದು ಹೇಳಿದ್ದೆ?

ಶ್ರೀ ವೈ. ರಾಮಕೃಷ್ಣ : ಹರಿಜನರಿಗೆ ಕೊಡುತ್ತೇವೆಂದು ಹೇಳಿದಿರಿ. ಈಗ ಅದೇ ಜಮೀನನ್ನು ಹೋಟೆಲನವರಿಗೆ ಮತ್ತು ಉದ್ದಿಮೆಗಳನ್ನು ಸ್ಥಾಪಿಸುವವರಿಗೆ ಸ್ವಾಧೀನಪಡಿಸಿಕೊಂಡಿದ್ದಾರೆ, ಅಲ್ಲದೆ ಅವರಿಗೆ ಕೊಟ್ಟದ್ದಂಥ ಸ್ಮಶಾನ ಜಾಗವನ್ನೂ ಸಹ ಸ್ವಾಧೀನಪಡಿಸಿಕೊಂಡಿದ್ದಾರೆ. ಮತ್ತು ದೇವಸ್ಥಾನದ ಜಾಗವನ್ನು ಸ್ವಾಧೀನಪಡಿಸಿ ಕೊಂಡಿರುವ ವಿಷಯ ರಾಜ್ಯಪತ್ರದಲ್ಲಿ ಪ್ರಕಟವಾಗಿದೆ. ಆ ಬಗ್ಗೆ ನಾನು ಮಧ್ಯಮ ಮತ್ತು ಭಾರಿ ಕೈಗಾರಿಕೆ ಸಚಿವರಾದ ಸನ್ಮಾನ್ಯ ದೇಶಪಾಂಡೆಯವರ ಹತ್ತಿರ ಹೋಗಿ ಆ ಸಂಬಂಧವಾಗಿ ಪತ್ರವನ್ನು ಕೊಟ್ಟಿದ್ದು ಆ ವಿಷಯ ಈಗ ಪರಿಶೀಲನೆಯಲ್ಲಿದೆ.

ಶ್ರೀ ಆರ್. ಎಲ್. ಜಾಲಪ್ಪ : ಈ ಅಕ್ವಿಸಿಷನ್ ಕಾರ್ಯವನ್ನು ತಪ್ಪಿಸುವುದಕ್ಕೋಸ್ಕರವೇ ಈ ಕಾನೂನನ್ನು ತರುತ್ತಿರುವುದು.

ಶ್ರೀ ವೈ. ರಾಮಕೃಷ್ಣ : ಸದರಿ ಕಾನೂನು ಯಾರಿಗೆ ಅಪ್ಲೆ ಆಗುವುದಿಲ್ಲ ಎಂಬುದೆನ್ನು ಎಲ್ಲಿ ಹೇಳಿದ್ದೀರಿ? ಇದು ಏನು ಸ್ವಾಮೀ: ಹಾಗಾದರೆ ನನ್ನ ಕ್ಷೇತ್ರದಲ್ಲಿ 20 ಜನರಿಗೆ ಒಬ್ಬೊಬ್ಬರಿಗೆ ಒಂದೊಂದು ಎಕರೆಯಂತೆ ಕೊಟ್ಟುಬಿಡಿ.

ಅಧ್ಯಕ್ಷರು : ಇದು ಅತ್ಯಂತ ಸೂಕ್ಷ್ಮವಾದ ಮಸೂದೆ ಎನ್ನತಕ್ಕಂಥದರಲ್ಲಿ ಎರಡು ಅಭಿಪ್ರಾಯ ಇಲ್ಲ. ಈ ಮಸೂದೆ ಮೊದಲನೆ ಸಲ ಜಾರಿಗೆ ಬರಬೇಕಾದರೆ ಬಹಳ ದೊಡ್ಡ ಹೋರಾಟ ಇದರ ಹಿಂದೆ ನಡೆದಿದೆ. ಇದರಲ್ಲಿ ತಮ್ಮನ್ನು ತಾವೇ ಭಾವನಾತ್ಮಕವಾಗಿ ಅರ್ಪಿಸಿಕೊಂಡಂಥ ಜನ, ನಾನು ರೀತಿಗಳಲ್ಲಿ ಅರ್ಪಿಸಿಕೊಂಡಿರತಕ್ಕಂಥ ಜನ ಇದ್ದಾರೆ. ದಯಮಾಡಿ ತಮ್ಮ ಭಾವನೆಗಳನ್ನು ಕೆರಳಿಸಿಕೊಳ್ಳಬೇಡಿ. ಎಲ್ಲರೂ ಕೂಡ ಪ್ರಶಾಂತವಾಗಿ ತಮ್ಮ ತಮ್ಮ ಅಭಿಪ್ರಾಯಗಳನ್ನು ಹೇಳಿ. ಯಾವ ಕಾರಣದಿಂದಲೂ ಕೂಡ ತರಾತುರಿಯಾಗಿ ಇದನ್ನು ಮುಗಿಸಿಕೊಂಡು ಹೋಗಬೇಕು ಎನ್ನುವ ಆತುರದಲ್ಲಿ ಅವರೂ ಇಲ್ಲ. ನಾನೂ ಇಲ್ಲ. ಸ್ವಲ್ಪ ತಾಳ್ಮೆ ಇಟ್ಟುಕೊಳ್ಳಿ ದಯಮಾಡಿ. ಕೇಳೋಣ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಈಗ 1993ರಲ್ಲಿ ಒಂದು ಇಂಡಸ್ಟ್ರೀಯಲ್ ಪಾಲಿಸಿ ಮಾಡಿ ಇಂಡಸ್ಟ್ರೀಯಲಿಸ್ಟಗೆಲ್ಲಾ ಕೊಟ್ಟಿದ್ದಾರೆ. ಸನ್ಮಾನ್ಯ ಮೊಯಿಲಿಯವರೇ ಆಗ ಮಂತ್ರಿಗಳಾಗಿದ್ದರು. ಸನ್ಮಾನ್ಯ ಖರ್ಗೆಯವರು ಅದರಲ್ಲಿ ಕಂದಾಯ ಮಂತ್ರಿಗಳಾಗಿರಲಿಲ್ಲ. ಅವರು ಕೋ-ಅಪರೇಷನ್ ಮಂತ್ರಿಗಳಾಗಿದ್ದರು. ಇದರಲ್ಲಿ ಒಂದು ಹೇಳುತ್ತಾರೆ :

The `Land Reforms Act has been recently amended providing for purchase of agricultural land for industrial use upto to 2 units. This ceiling will be enhanced to 10 units by bringing in suitable amendments to the Act

and powers to permit purchase of agricultural land upto this limit would be delegated to the Deputy Commissioners of District and subsequently for a specified Agro-processing Industries which require agricultural land, Proposals would have to be made to Government for consideration on merits of each case; such enabling powers would be given to Government through suitable amendments to the relelvant statutes. Care would be taken to ensure that this relaxation is not misused and would not negate the primary objective of the Land Reforms'.

We are taking care. ಆದರೆ ನಾನು ಇಲ್ಲಿ ಇಂಪ್ರೆಸ್ ಮಾಡುತ್ತಿದ್ದೇನೆ ಎಂದರೆ ಅವರದೇ ಸರ್ಕಾರದಲ್ಲಿ ಯಾವ ಆಕ್ಟ ಕೂಡ ಅಮೆಂಡಮೆಂಟ್ ಇಲ್ಲದೆ ಇದನ್ನು ಇಂಡಸ್ಟ್ರೀಯಲಿಸ್ಟಗೆ ಕೊಟ್ಟು ಹತ್ತು ಯೂನಿಟವರೆಗೂ ಡೆಪ್ಯೂಟಿ ಕಮೀಷನರಗೇನೆ ಅಧಿಕಾರ ಕೊಡುವುದಕ್ಕೆ ಎಂದು ಅವರು ಹೇಳಿ ಹೆಚ್ಚಿನ ಜಮೀನು ಬೇಕಾದರೆ ಸರ್ಕಾರಕ್ಕೆ ಕಳುಹಿಸಬಹುದು ಎಂದು ಹೇಳಿ ಪ್ರಮೋಸಲ್ ಇದರೊಳಗೆ ಇದೆ. ನಾವು ಬರೀ ಇದನ್ನು ಕಾಪಿ ಮಾಡಿ ತಂದವರು ಅಲ್ಲ. ನಾವು ಇದನ್ನು ನೋಡಿರಲಿಲ್ಲ. ಈಚೆಗೆ ನಾವು ನೋಡಿದ್ದುದು ಇದನ್ನು. ನಾನು ಬೇರೆ ರಾಜ್ಯದ ಲ್ಯಾಂಡ್ ರಿಫಾರ್ಮ್ಸನ್ನು ತರಿಸಿದ್ದೇನೆ. ಅಲ್ಲಿ ಏನೇನು ಪ್ರಾವಿಷನ್ ಮಾಡಿದ್ದಾರೆ ಮತ್ತು ಅಲ್ಲಿನ ಡೆವಲಪಮೆಂಟ್ಸ ಏನಿದೆ ಎಂದು ನೋಡಿಕೊಂಡು ಇದನ್ನು ಆಕ್ಟ ತಂದಿದ್ದೇವೆ. ಏಕೆ ಹಾಗೆ ಹೇಳಿದೆ ಎಂದರೆ ಅವರು ಬಹಳ ಚೆನ್ನಾಗಿ ಮಾತನಾಡಿದರು. ಬಡವರ ಬಗ್ಗೆ ದಲಿತರ ಬಗ್ಗೆಯೆಲ್ಲಾ ಕಳಕಳಿ ಇದೆ. I am grateful to that commitment. ದೇವರಾಜ ಅರಸು, ದೇವರಾಜ ಅರಸು ಎಂದು ಸಾಯುವವರೆಗೂ ನಾನು ಅವರ ಜೊತೆಯೊಳಗಿದ್ದವನು. ನನಗೆ ಆ ಕಮಿಟಮೆಂಟ್ ಇದೆ. ನಾನೇನು ಮರೆತಿಲ್ಲ ಅದನ್ನು. ನನಗೂ ಇದೆ. ಇವತ್ತು ಒಂದು ದಿವಸದಲ್ಲಿ ಎರಡು ಸಾರಿಯಾದರೂ ಅವರನ್ನು ನಾನು ನನೆಸಿಕೊಳ್ಳುತ್ತೇನೆ. ಆ ಕಮಿಟಮೆಂಟ್ ಇದೆ. ಆದರೆ ಛೇಂಜ್ ಆಫ್ ಟೈಮ್ 20 ವರ್ಷದ ಗ್ಯಾಪನಲ್ಲಿ ಏನೇನು ಆಗಿದೆ ಎಂದು ನಾವು ಕನಸಿಡರ್ ಮಾಡಬೇಕಾಗುತ್ತದೆ. That I will come out when I give my reply. This is just I wanted to submit to this House.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮಂತ್ರಿಗಳು ಹೇಳಿದ್ದನ್ನು ಕೇಳಿದೆ. ನಮಗೂ ಕೂಡ we have that commitment. It is not an amendment to the Land-Reforms Act. ಆಗಿಲ್ಲ. ನಾನು ಇಂಡಸ್ಟ್ರೀ ಡಿಪಾರ್ಟಮೆಂಟ್ ಇರಲಿ, ಕೋ-ಆಪರೇಷನ್ ಡಿಪಾರ್ಟ್‌ಮೆಂಟ್ ಇರಲಿ ಹಾರ್ಟಿಕಲ್ಚರ್ ಡಿಪಾರ್ಟಮೆಂಟ್ ಇರಲಿ, ಇವೆಲ್ಲಾ ಡಿಪಾರ್ಟ್‌ಮೆಂಟ್ ರಿಕ್ವೆಸ್ಟ್ ಏನು ಇರುತ್ತವೆ, they can request the Revenue Minister or the Cabinet. ನಮಗೆ ಇಂಥಿಂಥದ್ದನ್ನು ನೀವು ಮಾಡಿಕೊಟ್ಟರೆ ಅನುಕೂಲವಾಗುತ್ತದೆ ಎನ್ನುವುದು ಇರಬಹುದು. ಆದರೆ ಎಲ್ಲಿಯವರೆಗೆ ಅದು ಕಾನೂನು ಆಗುವುದಿಲ್ಲ, ಎಲ್ಲಿಯವರೆಗೆ ಅದು ಅಮೆಂಡಮೆಂಟ್ ಆಗುವುದಿಲ್ಲ. ಎಲ್ಲಿಯವರೆಗೆ ಅದು

ಅಸ್ತಿತ್ವದಲ್ಲಿ ಬರುವುದಿಲ್ಲ. ಅಲ್ಲಿಯವರೆಗೆ ಅದನ್ನು ಕಾನೂನು ಎಂದು ಹೇಳಿ ಪರಿಗಣಿಸಿ ಆ ಕಾನೂನಿನಡಿಯಲ್ಲಿ ಕೊಡುವುದಕ್ಕೆ ಬರುವುದಿಲ್ಲ. ಅದನ್ನು ಇಂಡಸ್ಟ್ರೀಯಲ್ ಪಾಲಿಸಿಯವರು ಹೇಳಿಬಿಟ್ಟರು ಎಂದು ತಿಳಿದುಕೊಂಡು ನೀವು ಭೂಸುಧಾರಣೆ ಕಾನೂನೇ ಅಮೆಂಡಮೆಂಟ್ ಮಾಡಿ ಇದನ್ನು ತಂದರೆ ಹೇಗೆ?

MR SPEAKER : Very interesting situation. The Deputy Secretary or Secretary to Government representing Industries Department or the Revenue Department may work in isolation and may work exclusively within his department but a Minsister who holds a Portfolio does not confine to his portfolio. He is the Member of the Cabinet.

SRE M. MALLIKARUNA KHARGE : Each Department will send the proposals separately. Whether it is accepted or not it depends on the Cabinet decision. ಈಗ ಆಕ್ಟ ತರಬೇಕಾಗಿದ್ದು ಇಂಡಸ್ಟ್ರೀ ಮಿನಿಸ್ಟರ್, you are at liberty to do it. ಅವರೇನು ಹೇಳುತ್ತಾರೆ ಲ್ಯಾಂಡ್ ರಿಫಾರ್ಮ್ಸ್ ಅಮೆಂಡ್‌ಮೆಂಟ್ ಅದು ಮಾಡಿಕೊಡಿ, ಇದು ಮಾಡಿಕೊಡಿ ಎಂದು ಎಲ್ಲರೂ ಕೇಳುತ್ತಾರೆ. ಕೇಳುವಾಗ ನಮ್ಮಲ್ಲಿಗೆ ಬಂದಾಗ ಸರ್ಕಾರದ ಹತ್ತಿರ ಬಂದಾಗ, ಕ್ಯಾಬಿನೆಟ್ ಹತ್ತಿರ ಬಂದಾಗ ಕ್ಯಾಬಿನೆಟ್ ಅವರು ಇದು ಸರಿಯೋ ಇಲ್ಲವೋ ಎನ್ನುವುದನ್ನು ತಿಳಿದುಕೊಂಡು ಕಾನೂನಿಗೆ ಅಮೆಂಡಮೆಂಟ್ ಮಾಡುತ್ತಾರೆಯೇ ಹೊರತಾಗಿ ಅಲ್ಲಿಯವರೆಗೆ ಅದು ಕಾನೂನಾಗುವುದಿಲ್ಲ.ಕೇಳಬಹುದು. ಕೇಳಿದತಕ್ಷಣ ಅದು ಕಾನೂನು ಆಯಿತೇ? ಒಂದು ಪ್ರೊಸೀಡಿಂಗ್ಸ ಪಾಸ್ ಆಗುತ್ತದೆ. ಅದೇ ಆಧಾರಮೇಲೆ ನಾನು ಮಾಡಿದ್ದೇನೆ if you want to amend it you do it, ಆದರೆ ಇದನ್ನು ನಿಮಗೆ ಬೇಕಾದರೆ ಕೊಡುತ್ತೇವೆಂದು ಹೇಳಿದಿರಿ ಅದಕ್ಕಾಗಿ at the same time the Government Order relating to Lyolds & Company should be placed here.

ಅಧ್ಯಕ್ಷರು : ನಾನು ನಿಮಗೆ ಏನು ಹೇಳುತ್ತೇನೆ ಎಂದರೆ ಆ ರೀತಿ ಸರ್ಕಾರಿ ಆಜ್ಞೆ ಇದ್ದರೆ ಸದನದ ಯಾವುದೇ ಭಾಗದಿಂದ ಹಿರಿಯ ಸದಸ್ಯರಿದ್ದು ಆ ಸರ್ಕಾರಿ ಆಜ್ಞೆಯನ್ನು ಈ ಸಭೆಯಲ್ಲಿ ಇಡಬೇಕೆಂದು ಆಗ್ರಹಮಾಡಿದಾಗ ಒಂದು ಸರ್ಕಾರಿ ಆಜ್ಞೆಯನ್ನು ಇಡಲಾರದಂಥ ಪರಿಸ್ಥಿತಿಗೆ ನಾವು ಬೌದಿಲ್ಲ. ಇದನ್ನು ಮ್ಯಾನೇಜ್ ಮಾಡುವುದಕ್ಕೆ ಸಾಧ್ಯವಿಲ್ಲ. ಅಂಥಹ ಒಂದು ಸರ್ಕಾರಿ ಆಜ್ಞೆ ಇದ್ದರೆ ತರಿಸೋಣ.

ಶ್ರೀ ಎಂ. ಪಿ. ಪ್ರಕಾಶ್ : ಈಗಾಗಲೇ ತಾವು ಹೇಳಿದಂತೆ ಈ ಸರ್ಕಾರರ ಎಂಬುದು ನಿರಂತರವಾಗಿರತಕ್ಕ ಸರ್ಕಾರ. ಯಾವುದೇ ಒಂದೊಂದು ನೀತಿ ನಿರೂಪಣೆಯನ್ನು ಮಾಡುವಾಗಲೂ ಜವಾಬ್ದಾರಿಯುತವಾಗಿ ನೀತಿ ನಿಯಮಗಳಿಗನುಗುಣವಾಗಿ ನಿರ್ಣಯಗಳನ್ನು ವಿವಿಧ ಇಲಾಖೆಗಳ ಅಭಿಪ್ರಾಯಗಳನ್ನು ತೆಗೆದುಕೊಂಡು ನಂತರ ಇಂಥಹ ತಿದ್ದುಪಡಿಗಳನ್ನು ತರತಕ್ಕದ್ದು ನಿಜ. ಮಾನ್ಯ ಕಂದಾಯ ಮಂತ್ರಿಗಳು ಸದನಕ್ಕೆ ಅರಿಕೆ ಮಾಡಿಕೊಂಡಂತೆ ಹಿಂದಿನ ಸರ್ಕಾರ ಅತ್ಯಂತ

ಜವಾಬ್ದಾರಿಯುತವಾಗಿ ಬದಲಾದಂಥ ಸನ್ನಿವೇಶಗಳಿಗೆ ಅನುಗುಣವಾಗಿ 10 ಯೂನಿಟ್ಸ ಅನ್ನು ಕೊಡಬೇಕೆಂಬ ಮಾತನ್ನು ತನ್ನ ನೀತಿನಿರೂಪಣೆಯಲ್ಲಿ ಹೇಳಿದ ಮೇಲೆ ಇನ್ನೂ ಕಾಲಾವಕಾಶ ಇದ್ದಿದ್ದರೆ ಖಂಡಿತವಾಗಿ ತಿದ್ದುಪಡಿಯನ್ನು ತರುತ್ತಿದ್ದರು. ಆ ಸರ್ಕಾರ ಇಲ್ಲದೇ ಹೋದುದರಿಂದ ಆ ತಿದ್ದುಪಡಿಯನ್ನು ತರುವುದಕ್ಕೆ ಆಗಲಿಲ್ಲ. ಆದರೆ ಆ ಸರ್ಕಾರ ಈ ಸರ್ಕಾರ ಎಂದು ಹೇಳುವುದಕ್ಕೆ ಬದಲಾಗಿ ಇದು ನಿರಂತರವಾಗಿ ಇರತಕ್ಕ ಸರ್ಕಾರದಲ್ಲಿ ಈ ನೀತಿಯನ್ನು ನಾವು ಒಪ್ಪುವಂಥಾದ್ದಾಗಿದ್ದರೆ ಕೇವಲ ಕಾಂಗ್ರೆಸನವರು ಪ್ರತಿಪಾದಿಸಿದಂಥ ಔದ್ಯೋಗಿಕ ನೀತಿ ಎಂದು ನಾವು ಕಡೆಗಣಿಸಬೇಕೆಂದೇನೂ ಇಲ್ಲ. ಆದ್ದರಿಂದ ವಿವಿಧ ರಾಜ್ಯಗಳಲ್ಲಿ ಮಾಡಿರತಕ್ಕ ಕಾನೂನು ಇವತ್ತಿನ ಸಮಕಾಲೀನ ಸ್ಥಿತಿಯಲ್ಲಿ ಬೇಕಾಗಿರತಕ್ಕದ್ದು ಅಗತ್ಯ ಮತ್ತು ಹಿಂದಿನ ಸರ್ಕಾರವೇ ಮಾಡಿರತಕ್ಕ ಔದ್ಯೋಗಿಕ ನೀತಿಯನ್ನು ಅವರು ಮರೆತುಬಹಳ ಪ್ರಗತಿಪರರು ತಾವು ಎಂದು ತೋರಿಸಿಕೊಳ್ಳುವಂಥ ರೀತಿಯ ವಾದ ಏನಿದೆ ಇದು ನಿಜಕ್ಕೂ ಕೂಡ ಆಷಾಢಭೂತಿಯ ವಾದವಾಗುತ್ತದೆಯೇ ಹೊರತು ಆತ್ಮಸಾಕ್ಷಿಗನುಗುಣವಾದ ವಾದವಾಗಲಾರದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ತಿಳಿದುಕೊಳ್ಳಬೇಕು. ಬೇಕಾದರೆ ತಾವು ಪ್ರೊಸೀಡಿಂಗ್ಸನ್ನು ತೆಗೆದು ನೋಡಿ. ಈ ಇಂಡಸ್ಟ್ರೀಯಲ್ ಪಾಲಿಸಿ ಇವತ್ತು ಬಂದಿಲ್ಲ. ಇದನ್ನು ಅನೌನ್ಸ ಮಾಡಿರತಕ್ಕದ್ದು1991ರಲ್ಲಿ. ಇದು ಕೇಂದ್ರ ಸರ್ಕಾರ ಮಾಡಿರತಕ್ಕದ್ದು. ನಾನು ರೆವಿನ್ಯೂ ಮಂತ್ರಿಯಾಗಿದ್ದಾಗ ಇದೇರೀತಿ ಅನೇಕಸಾರಿ ಬಂದಾಗ ನಾನು ರೆಸಿಸ್ಟ ಮಾಡಿದ್ದೆ. ಕೊನೆಗೆ ಎಲ್ಲಿಗೆ ಬಂತು ಎಂದರೆ ಕೊನೆಪಕ್ಷ ಒಂದು ಯೂನಿಟನ್ನಾದರೂ ಸ್ಮಾಲಸ್ಕೇಲ್ ಇಂಡಸ್ಟ್ರೀಸಗೆ ಕೊಡಿ ಎಂದಾಗ ಅಷ್ಟಕ್ಕೇ ಮಾತ್ರ ಸೀಮಿತವಾಗ ಬೇಕಾಯಿತು. ಅಂದರೆ ಇದನ್ನು ರೆಸಿಸ್ಟ ಮಾಡುವುದರ ಮೇಲೆ ಹೋಗುತ್ತದೆ. ನೀವು ಪಾಲಿಸಿಯನ್ನು ಡಿಕ್ಲೇರ್ ಮಾಡಿದ್ದರೂ ಅನ್ಯಾಯವಾಗುತ್ತದೆಂದು ನೀವು ಕನ್ವಿನ್ಸ ಮಾಡಿದರೆ ಅನೇಕಸಾರಿ ವಿತಡ್ರಾ ಆಗುತ್ತದೆ. ಇದು ಒಂದು ದಿನದಲ್ಲಿ ಆಗಿರತಕ್ಕದ್ದಲ್ಲ. ತಿದ್ದುಪಡಿಗಳನ್ನು ಮಾಡುವುದಕ್ಕಾಗಿ ಒಂದು ಸಬ್ ಕಮಿಟಿಯನ್ನು ಮಾಡಿದ್ದರು. ಕೊನೆಗೆ ಅದರಲ್ಲೂ ಚರ್ಚೆ ನಡೆಯಿತು. ಏನೋ ಹೇಳುವುದು ಬೇಡ. ನೀವು ಹೇಳಿದಂತೆ ಆಷಾಢಭೂತಿತನವನ್ನೂ ಬೇಕಾದರೆ ಮಾಡೋಣ. ಇದರ ಬಗ್ಗೆ ಒಂದು ಕಮಿಟಮೆಂಟನ್ನು ಇಟ್ಟುಕೊಂಡು ನಾನು ಹೇಳುತ್ತಿದ್ದೇನೆಯೇ ಹೊರತು ಸುಮ್ಮನೇ ಏನೋ ಅಪೋಸ್ ಮಾಡಬೇಕೆಂಬ ಉದ್ದೇಶದಿಂದ ಮಾಡುತ್ತಿಲ್ಲ. ಅವತ್ತು ನಾನು ಮಂತ್ರಿಯಾಗಿದ್ದಾಗಲೂ ಅಪೋಸ್ ಮಾಡಿದ್ದೇನೆ, ಅಷ್ಟೇ ಅಲ್ಲ ರೆಗ್ಯೂಲರೈಸೇಷನ್ ಆಫ್ ಲ್ಯಾಂಡ್ ವಿಚಾರ ಬಂದಾಗಲೂ ಕೂಡ ನಾವೇ ಮೊದಲನೆ ಹೆಜ್ಜೆಯನ್ನು ಇಟ್ಟಿದ್ದೇವೆ. ನೀವು ಮಾಡದೇ ಇದ್ದುದ್ದನ್ನು ನಾವು ಮಾಡಿದ್ದೇವೆ. ಅವತ್ತು ನೀವು ಮಾಡುವುದಕ್ಕಾಗಲಿಲ್ಲ. ಸುಮಾರು 10ಲಕ್ಷ ರೈತರಿಗೆ ಸುಮಾರು 25ಲಕ್ಷ ಎಕರೆಯನ್ನು ಕೊಡುವುದಕ್ಕಾಗಿ ನಾನು ತಿದ್ದುಪಡಿಯನ್ನು ತಂದೆ. ಆಗ ನೀವು ಯಾರಾದರೂ ನನಗೆ ಹೇಳಿದ್ದಿರಾ? ಪದೇ ಪದೇ ಅದೇ ಮಾತನ್ನು ನನಗೆ ಹೇಳುವುದಕ್ಕೆ ಬರಬೇಡಿ. ಅಮೆಂಡಮೆಂಟ ಬಂದಾಗ ರೆಸಿಸ್ಟಮಾಡತಕ್ಕ ಸಂದರ್ಭ ಬಂದಾಗ ನಾವು ಮ್ಮಾಡುತ್ತೇವೆ. ನೀವು ಇರಬಹುದು, ನಾವು ಇರಬಹುದು, ಅನೇಕಸಾರಿ ಛೇರ್ ಪರ್ಸನ್ಸ ಬಂತು. ಛೇರ್ ಪರ್ಸನ್ಸ ಅಲ್ಲಿ ಸರ್ಕಾರೀ ಆದೇಶ ಬರುವುದಕ್ಕೆ ಮುಂಚೆಯೇ ನಾವು ತೆಗೆದುಕೊಳ್ಳಬೇಕೆಂದು ನಾವು ಮಾಡಿದ್ದೇವೆ. ಪಂಚಾಯಿತಿ ಎಲೆಕ್ಷನ್ಸನ್ನು ನಾವು

9521-53

ಮಾಡಲಿಲ್ಲವೇ? ಅದಾದಮೇಲೆ ನೀವು ಛೀರಪರ್ಸನ್ಸ್‌ಗೆ ಕೂಡ ರಿಸರ್ವೇಷನನ ನೀವು ಮಾಡಿದಿರಿ. ಅನೇಕಸಾರಿ ಅಲ್ಲಿರತಕ್ಕ ಒತ್ತಡಮೇಲೆ ಅಥವಾ ನಮಗೆ ಕನ್ವಿನ್ಸ ಆದರೆ ಕ್ಯಾಬಿನೆಟನಲ್ಲಾಗಲಿ, ಬೇರೆ ಎಲ್ಲಾಗಲಿ ಇದರಿಂದ ಅನ್ಯಾಯವಾಗುತ್ತದೆಂದು ಹೇಳಿದಾಗ ಅನೇಕಸಾರಿ ಕ್ಯಾಬಿನೆಟನಲ್ಲೂ ಕೂಡ ವಿತಡ್ರಾ ಮಾಡಿಕೊಳ್ಳುತ್ತಾರೆ. ಇಲ್ಲದಿದ್ದರೆ ಅದನ್ನು ರೀ-ಕನ್ಸಿಡರ್ ಮಾಡುವುದಕ್ಕೆ ಒಂದು ಉಪ-ಸಮಿತಿಯನ್ನು ನೇಮಕ ಮಾಡುತ್ತಾರೆ. ಇದೆಲ್ಲಾ ನಡೆಯುತ್ತಿರುವುದು ತಮಗೂ ಗೊತ್ತಿರುವುದರಿಂದ ನಾನು ಹೇಳಬೇಕಾಗಿಲ್ಲ ಆದರೂ ನಾವು ಅವತ್ತು ಸಾಕಷ್ಟು ರೆಸಿಸ್ಟ ಮಾಡಿದ್ದೇನೆ. ಅವರು ಹೇಳಿದಂತೆ 93ರಲ್ಲಿ ಅವರ ಅನೌನ್ಸ ಮಾಡಿರಬಹುದು. ಆದರೆ ಅದು ಕ್ಯಾಬಿನೆಟಗೆ ಬರಬೇಕಾಗಿತ್ತು. ಕ್ಯಾಬಿನೆಟನಲ್ಲಿ ಲ್ಯಾಂಡ್ ರೀಫಾರಂಸ್ ವಿಚಾರ ಬಾರದೇ ಹೋದುದರಿಂದ ಅಲ್ಲಿ ರೆಸಿಸ್ಟ ಮಾಡತಕ್ಕ ಪ್ರಶ್ನೆ ಬರಲಿಲ್ಲ. ಆದ್ದರಿಂದ ನೀವು ಆಗ ಏತಕ್ಕೆ ಮಾಡಲಿಲ್ಲ, ಈಗ ಏತಕ್ಕೆ ಮಾಡಲಿಲ್ಲ, ಎಂದು ಕೇಳಿದರೆ ಇದರಲ್ಲಿ ಯಾವುದೇ ಅರ್ಥವಿಲ್ಲ.

ಅಧ್ಯಕ್ಷರು : ಅವರು ಮಾನ್ಯ ಮೊಯಿಲಿಯವರಿಗೆ ರೆಫರ್ ಮಾಡಿ ಹೇಳಿದರು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಇಲ್ಲಿ ಸರ್ಕಾರದಲ್ಲಿ ಜಂಟಿ ಹೊಣೆಗಾರಿಕೆಯನ್ನು ಇಟ್ಟುಕೊಂಡಾಗ .....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದು ಗೊತ್ತಿದೆ.

ಶ್ರೀ ಎಂ.ಪಿ. ಪ್ರಕಾಶ್ : ಗೊತ್ತಿರುವ ಮಾತನ್ನೇ ಮತ್ತೆ ಹೇಳಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅನೇಕಸಾರಿ ನಿಮ್ಮ ನಿಮ್ಮ ಕನ್ವಿಕ್ಷನಗೆ ನಿಮ್ಮ ಕಾನಷನಗೆ, ವಿರುದ್ಧ ಆಗುತ್ತವೆ. ನನಗೆ ಎಲ್ಲವೂ ಗೊತ್ತು ಎಂದು ನೀವು ಹೇಳಿಕೊಳ್ಳುತ್ತಾ ಹೋಗಿ. ಎಲ್ಲವನ್ನೂ ಬಿಟ್ಟು ನೀವು ಲ್ಯಾಂಡ್ ರೀಫಾಂಸ್ ಆಕ್ಟನ್ನೇ ಕತ್ತರಿಸಿ ಹಾಕುತ್ತೀರಾ? ಇಂಡಸ್ಟ್ರೀಯಲ್ ಪಾಲಿಸಿಯಲ್ಲಿ ಇದನ್ನು ಇನಕ್ಲೂಡ್ ಮಾಡಿದ್ದೇವೆಂದು ಲ್ಯಾಂಡ್ ರೀಫಾರಂಸ್ ಆಕ್ಟನಲ್ಲಿರುವ ತರುತ್ತೇವೆಂದು ಹೇಳುತ್ತೀರಾ?

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ ವ್ಯಕ್ತಿಗತವಾಗಿ ತಮಗಿರುವಂಥ ಬದ್ಧತೆಯನ್ನು ಯಾರೂ ಪ್ರಶ್ನೆ ಮಾಡಿಲ್ಲ, ಮತ್ತು ಆ ರೀತಿ ಬಹಳ ಸೂಕ್ಷ್ಮವಾಗಿ ಯೋಜನೆ ಮಾಡಬೇಕಾದ ಅಗತ್ಯವೂ ಇಲ್ಲ. ಆದರೆ ನನಗೆ ಗೊತ್ತಿರುವ ವಿಷಯವನ್ನು ಪದೇ ಪದೇ ಹೇಳುವುದೇನೆಂದರೆ, ಜಂಟಿ ಹೊಣೆಗಾರಿಕೆಯ ಸಂದರ್ಭದಲ್ಲಿ ನೀತಿ ನಿರೂಪಣೆಯನ್ನು ಮಾಡುವಾಗ ಅನೇಕ ಸಂದರ್ಭದಲ್ಲಿ ಪ್ರತಿಪಾದನೆಯನ್ನು ತಾವು ಮಾಡಿರಬಹುದು. ಆದರೆ ಇವತ್ತು ಈ ವಿಚಾರದಲ್ಲಿ ಮಾತನಾಡಿದಂಥ ಮಾನ್ಯ ವೀರಪ್ಪಮೊಯಿಲಿಯವರು ಗೊತ್ತಿಲ್ಲದಂತೆಯೇ ಈ ನೀತಿ ನಿರೂಪಣೆ ಪ್ರಕಟವಾಗುತ್ತದೆಯೇ? ಮಾನ್ಯ ಮುಖ್ಯಮಂತ್ರಿಗಳಾದ ಅವರ ಗಮನಕ್ಕೇ ಬರದಂತೆ ಈ ವಿಚಾರ ಪ್ರಸ್ತಾಪಕ್ಕೆ ಬರುತ್ತದೆಯೇ? ಆ ರೀತಿ ಪ್ರಸ್ತಾಪಿಸಲ್ಪಟ್ಟಿರತಕ್ಕ ವಿಷಯ ಇದ್ದಾಗಲೂ ಕೂಡ ಅವರೇ ಈ ವಿಚಾರದಲ್ಲಿ ಪ್ರಸತ್ವ ಮಾಡಿ ಇದರಲ್ಲಿ ವಾದ ಮಾಡತಕ್ಕದ್ದು ಸರಿಯಲ್ಲ ಎಂಬುದೇ ವಿನಹ ವ್ಯಕ್ತಿಗತವಾಗಿ ನಾವು ಯಾವ ಅಭಿಪ್ರಾಯವನ್ನು ಇಟ್ಟುಕೊಂಡಿದ್ದೀರಿ ಎಂಬುದು ಬಹಳ ಮುಖ್ಯವಾದುದಲ್ಲ. ನಿಮ್ಮ ವೈಯಕ್ತಿಕವಾದಂಥ

ಬದ್ಧತೆಯನ್ನು ನಾನು ಪ್ರಶ್ನಿಸಲಿಲ್ಲ. ಏಕೆಂದರೆ ಯಾವಾಗಲೂ ತಾವು ಅದರ ಬಗ್ಗೆ ಬಹಳ ಪ್ರಗತಿಪರವಾದ ನಿಲುವನ್ನು ತಾಳಿದ್ದೀರೆಂಬುದು ನನಗೆ ಗೊತ್ತು. ಆದರೆ ಪ್ರಗತಿಪರವಾದ ನಿಲುವನ್ನು ನಾವು ತಾಳಿದ್ದೇವೆ ಎಂಬ ಕಾರಣವನ್ನು ಹೇಳುತ್ತಾ ಅಂಥಹ ಒಂದು ನೀತಿ ನಿರೂಪಣೆಗೆ ಬದ್ಧರಾಗಿ ಅದನ್ನು ಪ್ರಕಟಣೆ ಮಾಡಿದವರಾಗಿ ಮತ್ತೊಂದು ಸಂದರ್ಭದಲ್ಲಿ ಬೇರೊಂದು ಸ್ಥಾನದಲ್ಲಿ ಕುಳಿತಾಗ ಅದನ್ನು ಪ್ರಸ್ತಾಪ ಮಾಡತಕ್ಕದ್ದು ಆತ್ಮಸಾಕ್ಷಿಗನುಗುಣವಾದುದ್ದಲ್ಲವೆಂದು ನಾನು ಹೇಳಬಯಸುತ್ತೇನೆ.

MR. SPEAKER : Barring the leftist parties, we always get sandwitched between one individual commitment and the party obligations, It happens that is the irony of the situation.

SRI. M. MALLIKARJUNA KARGHE : Just because annoucement of one policy if you say you have amended the Land Reforms, I don't agree.

ಅಧ್ಯಕ್ಷರು : ಒಂದು ಪಾರ್ಟಿ ಅಂದಮೇಲೆ ಡೈವರ್ಜೆಂಟ್ ವ್ಯೂಸ್ ಇರುತ್ತವೆ. ಇಂಡಸ್ಟ್ರೀಸ್ ಡಿಪಾರ್ಟಮೆಂಟನ್ನು ನೋಡುವವರದ್ದೆ ಒಂದು ರೀತಿಯ ಅಭಿಪ್ರಾಯ ಇರುತ್ತದೆ. ರೆವಿನ್ಯೂ ಡಿಪಾರ್ಟಮೆಂಟನ್ನು ನೋಡುವವರದ್ದೇ ಒಂದುರೀತಿಯ ಅಭಿಪ್ರಾಯ ಇರುತ್ತದೆ. ಇದನ್ನು ಪಾಸ್ ಮಾಡುವುದಕ್ಕೆ ಅಷ್ಟು ಆತುರದಲ್ಲಿ ಇದರ ಹಿಂದೆ ಬಹಳ ದೊಡ್ಡ ಚರಿತ್ರೆಯೇ ಇದೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ಇಂಡಸ್ಟ್ರೀಯಲ್ ಪಾಲಿಸಿ ಮಾಡಬೇಕಾದರೆ ಎರಡು ಮೀಟಿಂಗ್ ಜೂನ್ ತಿಂಗಳಲ್ಲಿ ಆಗಿದೆ. ನಾನು ಹೇಳುತ್ತಿರುವುದು ಗೌರ್ನಮೆಂಟ್ ಆರ್ಡರ್.

MR. SPEAKER : Now, Hon. Member Agra Jnanendra. You have a special responsibility because ತಾವು ಗೋಪಾಲಗೌಡರ ಊರಿನಿಂದ ಬಂದಿರುವವರು. ನಿಮಗೆ ವಿಶೇಷವಾದ ಜವಾಬ್ದಾರಿ ಇದೆ. I am very keen on hearing you.....

+ ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಂಥ ತಮಗೆ ಮೊದಲನೆಯದಾಗಿ ಅಭಿನಂದಿಸುತ್ತೇನೆ. ಈ ಕ್ರಾಂತಿಕಾರಕವಾದಂಥ ಶಾಸನ ನಮ್ಮ ಕರ್ನಾಟಕ ರಾಜ್ಯದಲ್ಲಿ ಬರಬೇಕಾದರೆ ತಾವೇ ಪ್ರಸ್ತಾವಮಾಡಿದ್ದೀರಿ, ಇದರ ಹಿಂದೆ ಬಹಳ ದೊಡ್ಡ ಹೋರಾಟ, ಬಹಳ ದೊಡ್ಡ ಅರ್ಪಣೆ, ಬಹಳ ನೋವಿನ ಹಿನ್ನಲೆಯಲ್ಲಿ ಆದಂಥ ಒಟ್ಟಾರೆ ಫಲಿತಾಂಶದಿಂದ ಈ ಒಂದು ಕ್ರಾಂತಿಕಾರಕವಾಗಿರತಕ್ಕಂಥ ಶಾಸನ ನಮ್ಮ ಕರ್ನಾಟಕದಲ್ಲಿ ಜಾರಿಗೆ ಬಂದಿದೆ. ಉಳುವವನೇ ಹೊಲದೊಡೆಯ ಎಂದು ಬೀದಿಯಲ್ಲಿ ಕೂಗಿಕೊಂಡು ಹೋರಾಟ ಮಾಡತಕ್ಕ ಸಂದರ್ಭದಲ್ಲಿ, ಜೈಲಿಗೆ ಸೇರತಕ್ಕ ಸಂದರ್ಭದಲ್ಲಿ ನಾವೆಲ್ಲಾ ಚಿಕ್ಕವರಾಗಿ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಈ ಹೋರಾಟವನ್ನು ನೋಡುತ್ತಿದ್ದೆವು. ನನ್ನ ತಂದೆಯೂ ಸೇರಿದಂತೆ ತೀರ್ಥಹಳ್ಳಿಯ ಸಾವಿರಾರು ಸಾಮಾನ್ಯ ಮುಗ್ಧ ಜನರು ಸೆರೆಮನೆಯ ವಾಸವನ್ನು ಅನುಭವಿಸಿದ್ದಾರೆ. ಅವತ್ತು ಪೋಲೀಸರ ಲಾಠಿ ಏಟನ್ನು ತಿಂದಿದ್ದಾರೆ, ಮತ್ತು ಭೂ ಮಾಲೀಕರ ನಗೆಪಾಟಲಿಗೂ ಗುರಿಯಾಗಿದ್ದಾರೆ.

ಉಳುವವನೇ ಹೊಲದೊಡೆಯನೆಂದು ಕಾನೂನು ಮಾಡುತ್ತಾರಂತೆ, ಜಮೀನನು ಉಳುಮೆ ಮಾಡುವ ವನಿಗೇ ಆಗುತ್ತದಂತೆ ಎಂದು ಹೇಳುವಂಥ ಕುಚೋದ್ಯದ ಮಾತನ್ನೂ ಕೂಡ ನಾನು ಕೇಳಿದ್ದೇನೆ. ತತ್ಪರಿಣಾಮವಾಗಿ ಈ ಭೂಸುಧಾರಣಾ ಕಾನೂನನ್ನು ಜಾರಿಗೆ ತಂದಾಗ ಬಹಳಷ್ಟು ಗೇಣಿ ರೈತರು, ಸಾಮಾನ್ಯ ರೈತರು ನಿಟ್ಟುಸಿರುನ್ನು ಬಿಟ್ಟರು. ಯಾರು ಬೆಳಗಿನಿಂದ ಸಂಜೆಯವರೆಗೆ ಜಮೀನನಲ್ಲಿ ಬೆವರು ಸುರಿಸಿ ಅವರೂ, ಅವರ ಮಕ್ಕಳೂ, ಅವರ ಹೆಂಡತಿ, ಜಾನುವಾರುಗಳೂ ದುಡಿದು ಭೂ ಮಾಲೀಕರ ಮನೆಯ ಕಣಜವನ್ನು ತುಂಬಿಸಿ, ಈರೀತಿ ದುಡಿದ ತಾವು, ತಮ್ಮ ಕೈಗಳು, ಹೊಟ್ಟೆಗಳು ಅರೆಹೊಟ್ಟೆ ತಿಂದುನಿದ್ದೆಯನ್ನು ಮಾಡುತ್ತಿದ್ದ ಜನರ ಬದುಕಿಗೆ ಒಂದು ನೆಮ್ಮದಿಯನ್ನು ಕೊಟ್ಟಂಥ ಶಾಸನ ಇದು. ಇದನ್ನು ನಾವು ಯಾರೂ ಮರೆಯಬಾರದು. ಇಂಥ ಕ್ರಾಂತಿಕಾರಕವಾದ ಶಾಸನದಲ್ಲಿ ಕೆಲವಾರು ಬದಲಾವಣೆಗಳನ್ನು ತರಬೇಕೆಂದಾಗ ಮಾನ್ಯ ಜಾಲಪ್ಪನವರಂಥ ಹಿರಿಯರು ಮತ್ತು ತಮ್ಮ ಸರ್ಕಾರ ಇದನ್ನು ಜಾರಿಗೆ ತರುವಾಗ ಸಾಕಷ್ಟು ಆಲೋಚನೆ ಮಾಡಬೇಕು. ಇಂಥಹ ಶಾಸನವನ್ನು ಬದಲಾವಣೆ ಮಾಡುವಾಗ ಇದನ್ನು ಸಾಮಾನ್ಯವಾಗಿ, ಸಾಮಾಜಿಕವಾಗಿ ಒಂದು ಚರ್ಚೆಗೆ ಬಿಡಬೇಕಾಗಿತ್ತು. ಈ ಶಾಸನ ಸಭೆಯಲ್ಲಿ ಕುಳಿತಿರುವ ಇಷ್ಟೇ ಜನರೇ ಎಲ್ಲಾ ವಿಚಾರವನ್ನೂ ತಿಳಿದುಕೊಂಡಿದ್ದೇವೆ ಎಂದು ಇಲ್ಲ. ಇದರ ಬಗ್ಗೆ ಸಾಮಾಜಿಕ ಅಭಿಪ್ರಾಯ ಬರುವಂತೆ ಮಾಡಿದ್ದಿದ್ದರೆ ಬಹಳ ಚೆನ್ನಾಗಿ ಆಗುತ್ತಿತ್ತೆಂದು ನನ್ನ ಅಭಿಪ್ರಾಯ. ಹರಿಬರಿಯಾಗಿ ಈ ಶಾಸನಕ್ಕೆ ತಿದ್ದುಪಡಿಗಳನ್ನು ಮಾಡುವುದು ತುಂಬಾ ತಪ್ಪಾಗುತ್ತದೆ. ಜನರ ಜೀವನದ ಮೇಲೆ ತುಂಬಾ ದುಷ್ಪರಿಣಾಮವನ್ನು ಬೀರುವಂಥ ದೂರಗಾಮಿ ಪರಿಣಾಮವನ್ನು ಬೀರತಕ್ಕ ತಿದ್ದುಪಡಿ ಇವಾಗುತ್ತದೆಂದು ಹೇಳಬಯಸುತ್ತೇನೆ.

6.10 ಪಿ.ಎಂ.

ಮಾನ್ಯ ಅಧ್ಯಕ್ಷರೆ ಇಲ್ಲಿ ಇದನ್ನು ಜಾರಿಗೆ ತರುವಾಗ ಬಹಳಷ್ಟು ಹಿರಿಯರಾ ಚಿಂತನೆ ಏನಿತ್ತೆಂದರೆ, ಶ್ರಮ ಮಾಡಿ ದುಡಿಯುವವರ ಮತ್ತು ಭೂಮಿಯನಡುವೆ ಯಾರೇ ದಳ್ಳಾಳಿಗಳು ಇರಬಾರದು. ಯಾರು ದುಡಿಯುತ್ತಾರೆ, ಯಾರು ಬೆವರು ಸುರಿಸಿ ಹಗಲು ರಾತ್ರಿ ಕೆಲಸ ಮಾಡುತ್ತಾರೆ ಅಂಥವನಿಗೆ ಮತ್ತು ಅವನ ಉಳಿತಕ್ಕ ಭೂಮಿಯ ನಡುವೆ ಇನ್ನೊಬ್ಬ ದಳ್ಳಾಳಿ ಇರಬಾರದು, ಮಧ್ಯವರ್ತಿ ಇರಬಾರದೆಂಬ ಸ್ಪಷ್ಟವಾಗಿರತಕ್ಕ ಉದಾತ್ತವಾದ ಕಲ್ಪನೆ ಅವತ್ತು ಇತ್ತು. ಆಮೇಲೆ ಗೇಣಿ ರೈತನ ಬದುಕಿಗೆ ಭದ್ರತೆ ಇರಲಿಲ್ಲ. ಯಾರು ಬೇಕಾದರೂ ಯಾವತ್ತು ಬೇಕಾದರೂ ಬಿಡಿಸಬಹುದಿತ್ತು, ಏನು ಬೇಕಾದರೂ ಮಾಡಬಹುದಿತ್ತು. ಇನ್ನೊಂದು ಕೆಲಸ ಕೂಡ ಆತನಿಗೆ ಗೊತ್ತಿರಲಿಲ್ಲ. ಇದೆಲ್ಲಾ ತಮಗೆ ಗೊತ್ತಿರತಕ್ಕದ್ದು. ನಾನು ಚರ್ವಿತ ಚರ್ವಣ ಮಾಡುವುದಿಲ್ಲ. ಇವತ್ತು ತಾವು ಹೇಳುತ್ತಿದ್ದೀರಿ, ಯಾರೂ ಭೂಮಿ ಮಾರಾಟ ಮಾಡಬೇಕೆಂದು ನಾವು ಯಾರೂ ಬಲವಂತ ಮಾಡುವುದಿಲ್ಲ ಎಂಬುದನ್ನು ತಾವು ಮತ್ತು ಬೇರೆ ಬೇರೆ ಮಂತ್ರಿಗಳು ಮೊನ್ನೆಯಿಂದ ಹೇಳಿದ್ದನ್ನು ನಾನು ಕೇಳಿಸಿಕೊಳ್ಳುತ್ತಿದ್ದೇನೆ, ಆದರೆ ಮೊನ್ನೆ ದಿನ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರ ಒಂದು ಚಿಂತನೆ ಹೊರಡಿಸಿದೆ, ಪಾನನಿರೋಧ ಜಾರಿಗೆ ತರುತ್ತೇವೆ ಎಂದು. ಏತಕ್ಕೆ ತರಬೇಕೆಂದು ಗೊತ್ತಾಗುವುದಿಲ್ಲ. ಯಾರೂ ಬ್ರಾಂದಿ ಷಾಪ್ ಮಾಲೀಕರು ರಸ್ತೆಯಲ್ಲಿ ಹೋಗುವವರ ಕೈ ಹಿಡಿದುಕೊಂಡು ಹೋಗಿ ಕುಡಿಸುವುದಿಲ್ಲ. ಆದರೆ ನೀವು ಏತಕ್ಕೆ ಪಾನಿರೋಧ ಜಾರಿಗೆ ತರುತ್ತೇವೆಂದು ಹೇಳುತ್ತೀರಿ? ಇದರ ಹಿಂದೆ ಬಹಳ ದೊಡ್ಡ ಉದ್ದೇಶ ಇರುತ್ತದೆ. ನನ್ನ ಕ್ಷೇತ್ರ ಚಕ್ರ ವರಾಹ ಬಗ್ಗೆ ನಿನ್ನೆ ಪ್ರಸ್ತಾಪ ಮಾಡಿದ್ದೇನೆ. ಅನೇಕ ಜನ ರೈತರು ಜಮೀನು

ಕಳೆದುಕೊಂಡರು ಲಕ್ಷಗಟ್ಟಲೆ ಹಣ ಕೊಟ್ಟರಿ ನೀವು. ಅವರು ಏನು ಮಾಡಿದರು? ಕೆಲವರು ಉದ್ಯಮ ಮಾಡುತ್ತೇವೆಂದು ಉದ್ಯಮ್ಮಕ್ಕೆ ಹಾಕಿದರು, ಮತ್ತೆ ಕೆಲವರು ಅಡಿಕೆ ಮಂಡಿ ಇಟ್ಟರು. ಹೀಗಾಗಿ ಇವತ್ತಿನ ದಿವಸ ಪಾಪರ್ ಆಗಿ ನಿರ್ಗತಿಕರಾಗಿ ಬೀದಿ ಮೇಲೆ ಬಿದ್ದಿದ್ದಾರೆ. ರೈತರು ತಲೆತಲಾಂತರದಿಂದ ಅದನ್ನೇ ಮಾಡಿಕೊಂಡು ಬಂದಿರತಕ್ಕ ಜನ, ಅದನ್ನು ಬಿಟ್ಟರೆ ಬೇರೆ ಉದ್ಯೋಗ ಬರುವುದಿಲ್ಲ. ಸುಮಾರು ನೂರಕ್ಕೆ 80 ಜನ ಅದನ್ನು ಅವಲಂಬಿಸಿದ್ದಾರೆ. ಜಮೀನ್ದಾರಿ ರೈತರು ಭೂಮಿ ಉಳುವುದನ್ನು ಅವಲಂಬಿಸಿಕೊಂಡಿರುತ್ತಾರೆ. ಅವರಿಗೆ ಅಲ್ಟರನೇಟೀವ್ ಉದ್ಯೋಗ ಏನು ಕೊಡುತ್ತೀರಿ? ನೀವು ಹೇಳುತ್ತೀರಿ, ಕಾರ್ಖಾನೆಗಳು ಬಂದಕೂಡಲೇ ಉದ್ಯೋಗ ಸೃಷ್ಟಿಯಾಗುತ್ತದೆ ಎಂದು. ನಾನು ಡೆನ್ಮಾರ್ಕ್‌ಗೆ ಹೋಗಿ ಬಂದಿದ್ದೇನೆ. ಅಲ್ಲಿರತಕ್ಕ ನ್ಯಾಷನಲ್ ಡೈರಿಗೆ ನಾನು ಭೇಟಿ ಹೋಗಿದ್ದೆ. ಅಲ್ಲಿ 3 ಲಕ್ಷ ಲೀಟರ್ ಹಾಲನ್ನು ಪ್ರೋಸೆಸ್ ಮಾಡುತ್ತಾರೆ. ಅಲ್ಲ ಎಷ್ಟು ಜನ ಕಾರ್ಮಿಕರು ಇದ್ದಾರೆ? ಕೇವಲ 65 ಜನ ಕಾರ್ಮಿಕರು 3 ಲಕ್ಷ ಲೀಟರ್ ಹಾಲನ್ನು ಪ್ರೋಸೆಸ್ ಮಾಡುತ್ತಾರೆ. ಎಷ್ಟು ಮೊಕ್ಯಾನಿಸಂ ಇದೆ. ನಮ್ಮ ಶಿವಮೊಗ್ಗ ಡೈರಿಯಲ್ಲಿ ನಾನು ಅಧ್ಯಕ್ಷನಾಗಿದ್ದೇನೆ. ಅಲ್ಲಿ ಒಂದು ಲಕ್ಷ ಲೀಟರ್ ಹಾಲನ್ನು ಪ್ರೋಸೆಸ್ ಮಾಡುತ್ತೇನೆ, 300ಜನ ಕಾರ್ಮಿಕರು ಇದ್ದಾರೆ. ಯಾವ ಕಾರ್ಖಾನೆಗಳಲ್ಲಿ ಉದ್ಯೋಗ ಸೃಷ್ಟಿ ಮಾಡುತ್ತೀರಿ? ನೀವು ಕೊಡತಕ್ಕ ಮಲ್ಟಿ ನ್ಯಾಷನಲ್ ಕಂಪನಿಯವರು ಜನರ ಮೇಲೆ ಅವಲಂಬನೆ ಸೃಷ್ಟಿ ಮಾಡುತ್ತೇವೆಂದು ಜಮೀನು ಕಳೆದುಕೊಂಡವರಿಗೆ ಬೀದಿ ಮೇಲೆ ಬಂದಿರತಕ್ಕವರಿಗೆ ನಾಳೆ ಏನು ಮಾಡಬೇಕೆಂಬ ಯೋಚನೆ ನಾಗರೀಕ ಸರ್ಕಾರಕ್ಕೆ ಇರಬೇಕಾಗುತ್ತದೆ. ಜಮೀನು ಇವತ್ತು ರೈತನೇ ಕೊಂಡುಕೊಂಡರೆ ಅಡ್ಡಿಯಿಲ್ಲ. ನೀವು ಏನು ಹೇಳುತ್ತೀರಿ, ಎರಡು ಲಕ್ಷ ಆದಾಯ ಬರತಕ್ಕ ಕೃಷಿಯೇತರರೂ ಕೂಡ ಕೃಷಿ ಜಮೀನನ್ನು ಹೊಂದಬಹುದು. ಬೇರೆ ಬೇರೆಯವರೂ ಕೂಡ ಇದನ್ನು ಅವಲಂಬಿಸುವುದಕ್ಕೆ ಬರುತ್ತದೆ. ಎಲ್ಲರೂ ಕೂಡ ಅದನ್ನು ಅವಲಂಬಿಸುವುದಕ್ಕೆ ಬರುತ್ತದೆ. ರೈತರಿಗೆ ಸೀಲಿಂಗ್ ಲಿಮಿಟ್ ಬಗ್ಗೆ ನಿನ್ನೆಯಿಂದ ಹೇಳುತ್ತಿದ್ದಾರೆ. ಇವತ್ತು ರೈತರಿಗೆ ಸೀಲಿಂಗ್ ಲಿಮಿಟ್ ಜಾಸ್ತಿ ಮಾಡಲಿಲ್ಲವೆಂದು ಮಾನ್ಯ ವೀರಪ್ಪ ಮೊಯಿಲಿಯವರು ಹೇಳಿದರು. ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಕಾರ್ಖಾನೆಯ ಮಾಲೀಕರು ಬೇಕಾದಷ್ಟು ಜಮೀನನ್ನು ಕಾರ್ಖಾನೆಯ ಹೆಸರಿನಲ್ಲಿ.

ಶ್ರೀ ಆರ್.ಎಲ್. ಜಾಲಪ್ಪ : ಮೊದಲು ಇತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸದಸ್ಯರು ಹೊಸದಾಗಿ ಮಾತನಾಡುತ್ತಿದ್ದಾರೆ, ಅವರಿಗೆ ಮಧ್ಯೆ ಅಡ್ಡಿ ಆಗಬಾರದು. ತಾವು ಉತ್ತರ ಕೊಡುವಾಗ ಹೇಳಿ.

ಶ್ರೀ ಅರಗ ಜ್ಞಾನೇಂದ್ರ : ಹಾರ್ಟಿಕಲ್ಚರ್ ಮಿನಿಸ್ಟರ್ ಹೇಳಿದರು, ತಾಳೆ ಕೃಷಿಗೆ ಒಳ್ಳೆಯದಾಗುತ್ತದೆ ಮತ್ತು ಮೀನಿನ ಅಕ್ವಾ ಕಲ್ಚರಗೆ ಒಳ್ಳೆಯದಾಗುತ್ತದೆ ಎಂದು. ನಾನೂ ಪಶ್ಚಿಮ ಬಂಗಾಳಕ್ಕೆ ಹೋಗಿದ್ದೇನೆ. ಅಲ್ಲಿ ಕೂಡ ಬಹಳ ದೊಡ್ಡ ದೊಡ್ಡ ಇಂಡಸ್ಟ್ರೀಯ ಲಿಸಟ್ಸ ಭಾರೀ ದೊಡ್ಡ ಪ್ರಮಾಣದಲ್ಲಿ ಏನೂ ಮಾಡುತ್ತಿಲ್ಲ. ಬಹಳ ಚಿಕ್ಕ ಚಿಕ್ಕ ರೈತರು ಚಿಕ್ಕ ಚಿಕ್ಕ ಪಾಂಡಗಳನ್ನು ಕಟ್ಟಿಕೊಂಡು ಅಕ್ವಾಕಲ್ಚರ್ ಮಾಡುತ್ತಿದ್ದಾರೆ. ನಿಮ್ಮ ಫ್ಲೋರಿ ಕಲ್ಚರ್ ಮೂಲಕ ಚಿಕ್ಕ ರೈತರಿಗೆ ಏತಕ್ಕೆ ಪ್ರೋತ್ಸಾಹ ಕೊಡಬಾರದು? ಅವರಿಗೆ ಹೊಸ ಉತ್ಪಾದನೆ ಮಾಡುವುದಕ್ಕೆ ಏತಕ್ಕೆ ಮಾಡಬಾರದು? ತಾಳೆ ಬೆಳೆ ಕೃಷಿಯನ್ನು ನಮ್ಮ ಊರಿನಲ್ಲಿ ಮಾಡಿದ್ದಾರೆ. ಎರಡು ಎಕರೆ ಭೂಮಿ ಇದ್ದವರು ತಾಳೆಬೆಳೆ ಹಾಕಿದ್ದಾರೆ. ಏಕೆ ಲಾಭ

ಬರುವುದಿಲ್ಲ? ನೂರು ಎಕರೆ ನೂರೈವತ್ತು ಎಕರೆ ಇಟ್ಟುಕೊಂಡವರು ಮಾತ್ರ ತಾಳಿಬೆಳೆ ಮಾಡಬೇಕೇ? ಏನು ಮಾಡುತ್ತೀರಿ? ಏನು ಮಾಡುತ್ತೀರಿ? ರೈತರನ್ನು ಮತ್ತೆ ಜೀತ ಹಾಳುಗಳನ್ನಾಗಿ ಮಾಡುತ್ತೀರಿ. ಇವತ್ತು ಶಿವಮೊಗ್ಗದ ಸುತ್ತಮುತ್ತ ಬೆಂಗಳೂರು ಸುತ್ತಮುತ್ತ ಬಂದು ನೋಡಿ. ಬಹಳಷ್ಟು ಜನ ರೈತಾಪಿ ವ್ಯವಸಾಯ ಮಾಡಿದ್ದಾರೆ. ಇಲ್ಲಿ ಬಹಳ ದೊಡ್ಡ ದೊಡ್ಡ ವ್ಯಾಪಾರ ಮಾಡಿ ಬೇಕಾದಷ್ಟು ಹಣ ಗಳಿಸಿಕೊಂಡು ಅಥವಾ ಅಧಿಕಾರಿಗಳಾಗಿರತಕ್ಕವರು ಬೇರೆ ಬೇರೆ ಹೆಸರಿನಲ್ಲಿ ಜಮೀನು ಮಾಡಿದ್ದಾರೆ. ಏಕೆಂದರೆ ಅವರಿಗೆ ಅಲ್ಲಿ ಹೋಗಿ ಗಾಳಿ ಸೇವನೆ ಮಾಡುವುದಕ್ಕೆ ಮತ್ತು ಸುತ್ತಾಡುವುದಕ್ಕೆ ಮನಃಶಾಂತಿಗೋಸ್ಕರ ಮಾಡಿದ್ದಾರೆ. ಈ ರೀತಿ ಜನರ ಅವಶ್ಯಕತೆ ಇಲ್ಲ. ನಮ್ಮ ರೈತರಿಗೆ ನೇರವಾಗಿ ತಾವು ಇದಕ್ಕೆ ಪ್ರೋತ್ಸಾಹ ಕೊಟ್ಟರೆ ಖಂಡಿತ ಉತ್ಪಾದನೆ ಜಾಸ್ತಿಯಾಗುತ್ತದೆ ಮತ್ತು ಅವರ ಜೀವನ ಮಟ್ಟ ಜಾಸ್ತಿಯಾಗುತ್ತದೆ. ಸ್ವತಃ ಅವರು ಜಮೀನ್ದಾರರೆಂದು ಆತ್ಮವಿಶ್ವಾಸದಿಂದ ಬದುಕುವುದಕ್ಕೆ ಸಾಧ್ಯವಾಗುತ್ತದೆ. ಅವತ್ತು ಜಮೀನ್ದಾರರೇ ಒಬ್ಬರು, ಅದನ್ನು ಗೇಯ್ಯುವವರೇ ಒಬ್ಬರಾಗಿದ್ದರು. ಆದರೆ ಇವತ್ತ ಹಾಗಿಲ್ಲ. ಈಗಾಗಲೇ ಮಾನ್ಯ ಮೊಯಿಲಿಯವರು ಹೇಳಿದರು, ಹೆಚಯುಡಿ. ಸೆಕ್ರೆಟರಿಯವರು ಒಂದು ಪತ್ರ ಬರೆದಿದ್ದಾರೆ ಎಂದು. ನಾನು ಹೆಚ್ಚು ಸಮಯ ಕೊಡಲಿಲ್ಲ. ಆದರೂ ಸ್ವಲ್ಪ ಹೇಳುತ್ತಿದ್ದೇನೆ. ಇಲ್ಲಿ ಪತ್ರಿಕೆಯಲ್ಲಿ ಪ್ರಕಟವಾಗಿದೆ. "ಮುಂಬೈ ಕಂಪನಿಗೆ 300 ಎಕರೆ ಭೂಮಿ ತರಾತುರಿ ಮಂಜೂರು. ಇಂಥಹಯೋಜನೆ ಎಂದೇ ಭೂಸುಧಾರಣಾ ಶಾಸನಕ್ಕೆ ತಿದ್ದುಪಡಿ. ಜುಲೈ 18, 1995ರಲ್ಲಿ ಒಂದು ಪತ್ರ ಬರೆಯುತ್ತಾರೆ. ಅದು ಈ ರೀತಿ ಇದೆ :

"From the Principal Secretary to Government, Housing and Urban Development Department, M.S. Buildings, Bangalore, addressed to the Chairman, Lloyds House, 954, Appasab Martha Marg, Bombay``

ಇವರಿಗೆ ಪತ್ರ ಬರೆದು 40 ಸಾವಿರ ಮನೆಗಳಿರುವ ಒಂದು ದೊಡ್ಡ ನಗರವನ್ನು ನಿರ್ಮಾಣ ಮಾಡುವುದಕ್ಕೆ ಅವರ ಅನುಮತಿ ಕೇಳಿದ್ದರು. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿದ್ದಾರೆ ಮತ್ತು ಅಧಿಕಾರಿಗಳ ಮೀಟಿಂಗನ್ನು ಮಾಡಿದ್ದಾರೆ. ದಿನಾಂಕ 10-7-95ರಲ್ಲಿ ಮಾನ್ಯ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಅಧಿಕಾರಿಗಳ ಸಭೆ ಒಂದು ನಡೆದು ಸದರಿ ಸಂಸ್ಥೆಗೆ ಸರ್ಜಾಪುರ-ಹೊಸೂರು ರಸ್ತೆಯಲ್ಲಿ ಸುಮಾರು 300 ಎಕರೆ ಭೂಮಿಯನ್ನು ಕೊಡಲು ತಾತ್ವಿಕವಾಗಿ ಒಪ್ಪಿಕೊಳ್ಳಲಾಯಿತು. ಕಾನೂನು ಹಾಗೂ ಆಡಳಿತಾತ್ಮಕ ಒಪ್ಪಿಗೆಯನ್ನು ಸದರಿ ಸಂಸ್ಥೆಯು ವಿವರವಾದ ಯೋಜನೆಯನ್ನು ಬಿಡಿಎ.ಗೆ ಸಲ್ಲಿಸಿದ ನಂತರ ಕೊಡುವೆದಾಗಿ ತಿಳಿಸಿರುತ್ತಾರೆ. ಆಶ್ವಾಸನೆ ಕೊಟ್ಟು ಆಗಿದೆ. ಇವರು ಪತ್ರ ಬರೆದಿದ್ದು 18-7-95ರಲ್ಲಿ. ಅದು ಬಹಳ ಚಿಕ್ಕ ಅಕ್ಷರಗಳಿಂದ ಕೂಡಿರುವುದರಿಂದ ಅದನ್ನು ಓದುವುದು ಕಷ್ಟ. ಅದನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ, ತಾವು ನೋಡಿ: ನಂ. ಹೆಚ್. ಯು.ಡಿ 535 ಎಂ. ಎನ್ ಫೈ 95, ಕರ್ನಾಟಕ ಗೌರ್ನಮೆಂಟ್ ಸೆಕ್ರೆಟೇರಿಯೇಟ್ ಬೆಂಗಳೂರು ದಿ|| 18-7-95. ಸಹಿ ಮಾಡಿರುವವರು. ಜಿ.ವಾಸುದೇವನ್, ಆವತ್ತನ ಹೆಚ್.ಯು.ಡಿ. ಸೆಕ್ರೆಟರಿಯವರು. ಇವರು ಜೈಲಿಗೆ ಕಳುಹಿಸಿದಂತವರು. ಅವರ ಹತ್ತಿರ ಬರೆಸುತ್ತಾರೆ. ಇದೆಲ್ಲರ ಹಿಂದಕ್ಕೆ ಬಹಳ ಕಾಣದ ಕೈಗಳಿವೆ. ಯಾರು ಏನು ಬೇಕಾದರೆ ಹೇಳಬಹುದು ಮಾನ್ಯ ಜಾಲಪ್ಪನವರು ಕಮಿಟಮೆಂಟ್ ಇದ್ದಂತವರು, ಬಹಳ

ಅನುಭವಿಗಳು ಇದ್ದಾರೆ, ಹಿರಿಯರು ಇದ್ದಾರೆ. ಗೇಣಿದಾರರ ಬದುಕು, ರೈತಾಪಿ ಬದುಕು, ಹಳ್ಳಿಯ ಜೀವನ ಹೀಗೆ ಎಲ್ಲಾ ಮಾಹಿತಿ ಇರತಕ್ಕ ಮಂತ್ರಿಯವರ ಹತ್ತಿರ ಈ ರೀತಿಯ ಒಂದು ಅಮೆಂಡಮೆಂಟ್ ಅನ್ನು ಶಾಸನಸಭೆಯಲ್ಲಿ ತಂದು ಇದನ್ನು ಪಾಸ್ ಮಾಡಿಸಿಕೊಂಡು ಹೋಗುತ್ತೇನೆ ಗಡಿಬಿಡಿಯಲ್ಲಿ ಎಂದರೆ ಅರ್ಥವಿಲ್ಲ. ದಯವಿಟ್ಟು ತಾವು ದೇವರಾಜ ಅರಸು ಕಾಲದಲ್ಲಿ ಕಮಿಟಮೆಂಟ್ ಇದ್ದಂಥವರು ಈ ಛೇರ್ ನಲ್ಲಿ ತಾವು ಇದ್ದೀರಿ. ದಯಮಾಡಿ ತಮ್ಮ ಸಮ್ಮುಖದಲ್ಲಿ ಇಂಥರ ಕರಾಳ ಶಾಸನ ಈ ತಿದ್ದುಪಡಿ ಆಗುತ್ತದೆಂದರೆ ಇಡೀ ಕರ್ನಾಟಕ ರಾಜ್ಯದ ಸಾಮಾನ್ಯ ರೈತರ ಜೀವನದ ಮೇಲೆ ದುಷ್ಪರಿಣಾಮ ಬೀರತಕ್ಕ ಒಂದು ಅಮೆಂಡಮೆಂಟ್ ಆಗುತ್ತದೆ. ಖಂಡಿತವಾಗಿ ನಾವು ಯಾರೂ ಒಪ್ಪುವುದಕ್ಕೆ ಸಾಧ್ಯವಿಲ್ಲ. ಒಂದು ಬೆಂಬಲದ ಆಧಾರದ ಮೇಲೆ ಇಂಥಹ ದುಷ್ಪಪರಿಣಾಮ ಬೀರತಕ್ಕ ತಿದ್ದುಪಡಿಗಳನ್ನು ಮಾಡಲಿಕ್ಕೆ ಸಾಧ್ಯವಿಲ್ಲ. ಕರ್ನಾಟಕ ರಾಜ್ಯದ ಬಡ ಜನತೆ ನಿಮಗೆ ಶಾಪ ಹಾಕಿಯಾರು. ಅವರ ಕಣ್ಣೀರಿನ ಒಂದು ಶಾಪ ನಿಮಗೆ ತಟ್ಟದೆ ಹೋಗುವುದಿಲ್ಲ. ದಯವಿಟ್ಟು ಇದನ್ನು ಜಂಟಿ ಸಲಹಾ ಸಮಿತಿಗೆ ಒಪ್ಪಿಸಿ ಸಂಪೂರ್ಣ ಚರ್ಚೆಯಾಗಿ ಆಮೇಲೆ ಇದರ ಮೇಲೆ ಒಂದು ನಿರ್ಣಯಕ್ಕೆ ನಾವೆಲ್ಲಾ ಬರಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ತಮಗೆ ಅಭಿನಂದಿಸಿ ನನ್ನ ಮಾತ ಮುಗಿಸುತ್ತೇನೆ. ಒಂದನೇ ಉಪಪ್ರಕರಣದಲ್ಲಿ ಏನೇ ಇದ್ದರೂ ರಾಜ್ಯಸರ್ಕಾರವು ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ಲಿಖಿತದಲ್ಲಿ ಕಾರಣಗಳನ್ನು ದಾಖಲು ಮಾಡಿ ಅಧಿಸೂಚನೆ ಮೂಲಕ ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ ಯಾವುದೇ ವಿಸ್ತೀರ್ಣದ ಭೂಮಿಗೆ ವಿನಾಯಿತಿ ನೀಡಬಹುದು ಎಂದಿದೆ. ಈ ಒಂದು ಉಪಬಂಧವನ್ನು 109ರಲ್ಲಿ ತಿಳಿಸಿದ್ದರಿಂದ ರಾಜ್ಯಸರ್ಕಾರ ಯಾವುದೇ ಉದ್ದೇಶಕ್ಕೆ ಎಷ್ಟೇ ಭೂಮಿಯನ್ನು ಇವತ್ತು ತಾವು ಬರೆದುಕೊಂಡು ಕೊಡಬಹುದು ಎಂಬ ಒಂದು ಶಂಕೆ ಇದರಲ್ಲಿರುವುದರಿಂದ ಇವತ್ತು ಈ ಕಾನೂನು ತಿದ್ದುಪಡಿಯನ್ನು ಮೊದಲನೆಯದಾಗಿ ವಾಪಸ್ ಪಡೆದುಕೊಳ್ಳಬೇಕು. ಒಂದು ವೇಳೆ ವಾಪಸ್ ಪಡೆಯದಿದ್ದರೆ ಈ ಕೆಲವೊಂದು ನಿರ್ಬಂಧಗಳನ್ನು ಕಾನೂನು ಪ್ರಕಾರ ಸರ್ಕಾರಕ್ಕೆ ಖರೀದಿ ಮಾಡಿಕೊಳ್ಳುವಾಗ ನಿರ್ದಿಷ್ಟವಾದಂಥ ನಿರ್ಬಂಧಗಳನ್ನು ಹಾಕತಕ್ಕದ್ದು ಸೂಕ್ತವಿದೆ ಎಂದು ಕೂಡ ಈ ಸಂದರ್ಭದಲ್ಲಿ ಹೇಳುತ್ತಾ ಈ ಒಂದು ಕಾನೂನನ್ನು ಮುಖ್ಯವಾಗಿ ಎರಡು ಉದ್ದೇಶಗಳಿಂದ ತರಲಾಗಿತ್ತು. ಮೊದಲನೆಯದಾಗಿ 1961ರಲ್ಲಿ ಮೊದಲನೇ ಹಂತದಲ್ಲಿ 1975ರಲ್ಲಿ ಎರಡನೇ ಹಂತದಲ್ಲಿ ಕಾನೂನು ತಿದ್ದುಪಡಿ ಮಾಡಿ ಮುಂದೆ ಮೂರುನಾಲ್ಕು ಸಾರಿ ಈ ಒಂದು ಕಾನೂನು ತಿದ್ದುಪಡಿಯಾಗಿದೆ. ತಿದ್ದುಪಡಿ ಆದಾಗ ಅನೇಕ ಪ್ರಜ್ಞಾವಂತರು ಇದೊಂದು ರಾಜಕೀಯ ಕಾಲ್ಚೆಂಡಿನಂತೆ ತಿದ್ದುಪಡಿಯಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇವತ್ತು ಮುಖ್ಯವಾಗಿ ಎರಡು ಅಂಶವನ್ನು ಹೊಂದಿದಂಥದ್ದು ಅಂದರೆ ಒಂದು, ಭೂಮಾಲೀಕ ಮತ್ತು ಒಡೆತನದ ಹಕ್ಕು. ಸುಮಾರು 8 ಲಕ್ಷ ಗೇಣಿದಾರರು ಅರ್ಜಿಗಳನ್ನು ಹಾಕಿದ್ದರು. ಅದರಲ್ಲಿ 6 ಲಕ್ಷ ಗೇಣಿದಾರರಿಗೆ ಈಗಾಗಲೇ ಭೂ ಒಡೆತನದ ಹಕ್ಕನ್ನು ಕೊಟ್ಟಂತಾಗುತ್ತದೆ. ಇದರಿಂದ ಭೂಮಾಲೀಕ ಮತ್ತು ಒಡೆತನದ ಹಕ್ಕನ್ನು ಪಡೆದಿರುವುದರಿಂದ ಈ ಒಂದು ಸಂಬಂಧ ಮೊದಲನೇ ಒಂದು ಅಂಶ ಮುಖ್ಯವಾಗಿ ಮುಗಿದುಹೋಗಿದೆ. ಎರಡನೇ ಅಂಶ ಅಂದರೆ ಈ ಜಮೀನುಗಳನ್ನು ಇವತ್ತು ನಾವು ರಕ್ಷಣೆ ಮಾಡಿಕೊಂಡುಹೋಗಬೇಕು. ನಿಜವಾದ ಉದ್ದೇಶ ಎಂದರೆ ಈ ಕೃಷಿ ಜಮೀನನ್ನು ಕಾಪಾಡಿಕೊಂಡು ಹೋಗತಕ್ಕದ್ದು, ಜೊತೆಗೆ ನಗರ ಪಟ್ಟಣ

ಪ್ರದೇಶಗಳ ಸುತ್ತಮುತ್ತಲೂ ಇರತಕ್ಕ ಸ್ಥಳವನ್ನು ವಿಶೇಷವಾಗಿ ಅದರ ಬಗ್ಗೆ ಆಸ್ಥೆ ವಹಿಸಿ ಆ ಜಮೀನುಗಳು ಯಾವುದೇ ಒಂದು ಉದ್ದಿಮೆದಾರರಿಗಾಗಲೀ ಶ್ರೀಮಂತರಿಗಾಗಲೀ ಬೇರೆ ಯಾರಿಗೂ ಚಿಂತನೆಯನ್ನು ಮಾಡತಕ್ಕದ್ದು ಅತೀ ಅವಶ್ಯಕತೆ ಇದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಈ ಕಾನೂನಿನ ಬಗ್ಗೆ ಅಷ್ಟೊಂದು ಲಘುವಾಗಿ ಮತ್ತು ಶೀಘ್ರವೇ ನಿರ್ಣಯವನ್ನು ಪಡೆಯದೇ ಈಗಾಗಲೇ ಅನೇಕರು ಹೇಳಿದಂತೆ ತಮಗೂ ಕೂಡ ವಿಶೇಷವಾಗಿ ದೇವರಾಜ ಅರಸರವರು ಇದ್ದಂಥ ಒಂದು ಕಾಲದಲ್ಲಿ ಈ ಸುಧಾರಣಾ ಕಾನೂನಿಗೆ ಈ ರಾಜ್ಯದಲ್ಲಿ ಅತೀ ಮಹತ್ವ ಬಂದಿರುವುದರಿಂದ ಅದನ್ನು ಗಮನದಲ್ಲಿಟ್ಟುಕೊಂಡು ಇವತ್ತು ಸರ್ಕಾರದವರು ಈ ಒಂದು ಕಾನೂನು ತಿದ್ದುಪಡಿಯನ್ನು ಪಾಸು ಮಾಡಿಕೊಳ್ಳದೆ ಈ ಕಾನೂನನ್ನು ವಾಪಸ್ ಪಡೆಯತಕ್ಕದ್ದು ಅವಶ್ಯಕತೆ ಇದೆ ಎಂದು ಹೇಳಿ ನನಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಆಯನೂರು ಮಂಜುನಾಥ್ (ಹೊಸನಗರ) : ಸನ್ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಎರಡು ಮೂರು ಅಂಶ ಮಾತ್ರ ಜೋಡಿಸುವಂಥ ಪ್ರಯತ್ನವನ್ನು ಮಾಡುತ್ತೇನೆ. ಈ ರಾಜ್ಯದೊಳಗೆ ಬಹಳಷ್ಟು ಜನ ದೇವರಾಜ ಅರಸರ ಆದರ್ಶದಲ್ಲಿ ನಡೆಯಬೇಕು ಎನ್ನತಕ್ಕ ಬಹಳ ದೊಡ್ಡ ಕಾರ್ಯಕ್ರಮಗಳನ್ನು, ಇಲ್ಲಿ ಕುಳಿತಂಥ ಬಹಳ ಜನ ನಾಯಕರು ಸಾರ್ವಜನಿಕ ವೇದಿಕೆಯಲ್ಲಿ ದೇವರಾಜ ಅರಸರ ಸ್ಮರಣೀಯ ನೆಪದಲ್ಲಿ ದೊಡ್ಡ ದೊಡ್ಡ ಕಾರ್ಯಕ್ರಮಗಳನ್ನು ಮಾಡಿದ್ದಾರೆ. ಸಮಾಜವಾದಿ ಹೋರಾಟಗಳನ್ನು ಮಾಡಿಕೊಂಡುಬಂದಂಥ ಜನ ಇವತ್ತು ಅಧಿಕಾರದ ಚುಕ್ಕಾಣಿ ಹಿಡಿದಿದ್ದಾರೆ. ಅಧಿಕಾರದ ಗದ್ದುಗೆ ಮೇಲೆ ಕೂತತಕ್ಷಣ ಆ ಎಲ್ಲಾ ಕಲ್ಪನೆಗಳ ವಿರುದ್ಧವಾಗಿ ಒಂದು ರೀತಿಯ ಬಂಡವಾಳಶಾಹಿ ಅಥವಾ ಬಂಡವಾಳ ಪರ ಇರತಕ್ಕಂಥ ನಿಲುವನ್ನು ಹುಗರು ಕೋಟೆಡ್ ಫಿಲ್ಸ ತರಹ ಸಮಾಜಕ್ಕೆ ನುಂಗಿಸತಕ್ಕ ಒಂದು ವಿಚಿತ್ರ ಪ್ರವೃತ್ತಿ ಈ ಮಸೂದೆ ಮೂಲಕ ನಾವು ಕಾಣಬಹುದು. ನೂರಾರು ಎಕರೆಗಳನ್ನು ಅಷ್ಟು ಭೂಮಿಯನ್ನು ಡಾಕ್ಟರುಗಳು ಲಾಯರಗಳು ಮಾಡಿದ್ದಾರೆ. ತೋಟವನ್ನು ಮಾಡಿದ್ದಾರೆ. ಏಕೋ ನಮ್ಮ ಡಾಕ್ಟರು ಪಡೆದಿರುತ್ತಾರೆ. ನಾನು ಡಾಕ್ಟರಗೆ ಏತಕ್ಕೆ ಹೇಳುತ್ತೇನೆಂದರೆ ಅವರೆಲ್ಲಾ ಬಿಲ್ ಕೊಡದೇ ಹಣ ಪಡೆದಿರುತ್ತಾರೆ. ನಾನು ಡಾಕ್ಟರಗೆ ಏತಕ್ಕೆ ಹೇಳುತ್ತೇನೆಂದರೆ ಅವರೆಲ್ಲಾ ಬಿಲ್ ಕೊಡದೇ ಹಣ ಪಡೆದಿರುತ್ತಾರೆ. ಬಿಲ್ ಕೊಡದೆ ಅನಕೌಂಟೆಡ್ ಮನಿಯನ್ನು ಯಾರುಯಾರು ಸಂಪಾದನೆಯನ್ನು ಮಾಡಿದ್ದಾರೋ ಅವರೆಲ್ಲರೂ ಭೂಮಿಯ ಮೇಲೆ ಹಣವನ್ನು ತೊಡಗಿಸುತ್ತಿದ್ದಾರೆ. ಬ್ಲಾಕ್ ಮನಿ ಎಲ್ಲಿ ಶೇಖರಣೆಯಾಗುತ್ತದೆ. ಅವರಿಗೆ ಆ ಇನಕಮ್ ಟ್ಯಾಕ್ಸ ಎಗ್ಸೆಂಪಷನಗೋಸ್ಕರ ಇವತ್ತು ಭೂಮಿಯನ್ನು ದೊಡ್ಡ ಪ್ರಮಾಣದಲ್ಲಿ ಲಿಮಿಟೇಷನ್ ಇರಬೇಕಾದರೇನೆ ಮಾಡಿದಂಥವರಿಗೆ ಲಿಮಿಟೇಷನ್ ಮಾಡಿಕೊಡುವುದರಿಂದ ಮತ್ತಷ್ಟು ಕಪ್ಪು ಹಣ ಸಂಗ್ರಹಣದಾರರಿಗೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ.

ಶ್ರೀ ಬಿ.ಬಿ. ಶಿವಪ್ಪ : ಸರ್ಕ್ಯುಲೇಷನ್ ಆಗುತ್ತದಲ್ಲಾ.

ಶ್ರೀ ಆಯನರೂ ಮಂಜುನಾಥ್ : ಬಹಳಷ್ಟು ಸಂಗತಿಗಳು ಸರ್ಕ್ಯುಲೇಷನ್ ಆಗುತ್ತಾ ಇರುತ್ತವೆ. ಶಿವಪ್ಪನವರು ಯಾವಯಾವ ಸರ್ಕ್ಯುಲೇಷನ್ ಮಾಡುತ್ತಾರೋ ಗೊತ್ತಿಲ್ಲ. ಆದರೆ ಇಲ್ಲಿ ಆಗಿರುವ ಸರ್ಕ್ಯುಲೇಷನ್ ಬೇರೆ. ಈ ರೀತಿ ಕಪ್ಪುಹಣವನ್ನು ಸಂಗ್ರಹಣೆ ಮಾಡಿದಂಥವರು ಆಸ್ತಿ ಶೇಖರಣೆಗೋಸ್ಕರ ಬಡವರ ಜಮೀನನ್ನು ಅತಿ ಹೆಚ್ಚು ಬೆಲೆ ಕೊಡುತ್ತೇವೆ ಎನ್ನತಕ್ಕ ಆಮಿಷ ಒಡ್ಡಿ ಖರೀದಿ ಮಾಡಿ ಅದನ್ನು

ಭಿಕಾರಿಗಳನ್ನಾಗಿ ಮಾಡುವಂಥ ರೂಪ ಇದು. ರೈತರ ಬಗ್ಗೆ ಕಾಳಜಿ ಇರುವಂಥದ್ದು ನಿಜ ಆದರೆ ನಗರದ ವ್ಯಾಪ್ತಿಯಲ್ಲಿರತಕ್ಕ, ಕಾರ್ಪೊರೇಷನ್ ವ್ಯಾಪ್ತಿಯಲ್ಲಿರತಕ್ಕ 15-20 ವರ್ಷಗಳಿಂದ ಬಗರಹುಕುಂ ಸಾಗುವಳಿದಾರರು ಜಮೀನನ್ನು ಮಾಡಿಕೊಂಡು ಬಂದು ಅಲ್ಲಿರತಕ್ಕ ಗಿಡಕುಂಟೆಗಳನ್ನು ಕಿತ್ತು ಸರ್ಕಾರಿ ಭೂಮಿಯಲ್ಲಿ ಬಗರಹುಕುಂ ಸಾಗುವಳಿದಾರರಿಗೆ ಪಟ್ಟಾಗೋಸ್ಕರ ಕನಸನ್ನು ಕಾಣುತ್ತಿದ್ದಾನೆ ಅಂಥವರಿಗೆ 5 ಕಿಲೋಮೀಟರ್ ವ್ಯಾಪ್ತಿಯಲ್ಲಿ 10 ಕಿಲೋಮೀಟರ್ ವ್ಯಾಪ್ತಿಯಲ್ಲಿ 18 ಕಿಲೋಮೀಟರ್ ವ್ಯಾಪ್ತಿಯಲ್ಲಿ ಅವರಿಗೆ ಬಗರಹುಕುಂ ಪಟ್ಟಾವನ್ನು ಕೊಡಬಾರದು ಎನ್ನತಕ್ಕ ಕಾಯಿದೆ ನಮ್ಮ ಸರ್ಕಾರದಲ್ಲಿದೆ. ಅಂಥಹ ಬಡವರ ಕೈಗೆ ಪಟ್ಟಾವನ್ನು ಕೊಡುವ ಬದಲಾಗಿ ನಗರ ವ್ಯಾಪ್ತಿಯಲ್ಲಿ ಬರತಕ್ಕವರನ್ನು ಬಂಡವಾಳಶಾಹಿಗಳಿಗೆ ಕೈಗಾರಿಕೆಗಳವರಿಗೆ ಮಂಡಳಿಗಳ ಮೂಲಕ ವ್ಯಾಪಾರವನ್ನು ಮಾಡುವಂಥವರ ಕೈಗೆ ಕೊಡುತ್ತಿದ್ದಾರೆ. ಮತ್ತು ನನಗೆ ಅರ್ಥವಾಗುತ್ತಿಲ್ಲ, ಕಳೆದ ಒಂದು ವರ್ಷದಿಂದ ನಾನು ಇಲ್ಲಿದ್ದೇನೆ. ಯಾವುದಾದರೂ ಚರ್ಚೆಯನ್ನು ಪ್ರಾರಂಭಮಾಡಿದರೆ ಕಾಂಗ್ರೆಸ್ಸಿನ ನಾಯಕರೇನಾದರೂ ಮಾತನಾಡಿದರೆ ಕಾಂಗ್ರೆಸ್ಸಿನ ನಾಯಕರಿಗೆ ವಾಪಸ್ ಉತ್ತರ ಕೊಡುವುದು ಇಷ್ಟೆ, ನೀವು ಮಾಡಿದ್ದಿರಿ, ನೀವು ತಿದ್ದುಪಡಿ ತಂದಿದ್ದೀರಿ, ನೀವು ಅದೇ ಮಾಡಿದ್ದೀರಿ ಎಂದು. ಅವರು ಮಾಡಿದ್ದರ ಸಲುವಾಗಿಯೇ ಇಲ್ಲಿ ಬಂದು ಕೂತಿದ್ದಾರೆ. ನನಗೆ ಒಂದು ಘಟನೆ ನೆನಪಾಗುತ್ತದೆ. ಕಾಂಗ್ರೆಸ್ಸಿನವರಿಗೂ ಕೂಡ ಪಾಪ ಇವರು ಅಂದದ್ದನ್ನು ಅನ್ನಿಸಿಕೊಂಡು ಕೂರುವಂಥ ಪರಿಸ್ಥಿತಿ ಬಂದಿದೆ. ಒಬ್ಬ ತೊದಲ ವಿಧಾನಸೌಧಕ್ಕೆ ರಸ್ತೆಯನ್ನು ಕೇಳುತ್ತಿದ್ದ ವಿಧಾನಸೌಧಕ್ಕೆ ಹೋಗುವ ದಾರಿ ಯಾವುದು ಎಂದು. ಒಬ್ಬ ಸಜ್ಜನ ನಿಂತುಕೊಂಡಿದ್ದ ಸರ್ಕಲನಲ್ಲಿ. ಅವನಿಗೆ ವಿಧಾನಸೌಧಕ್ಕೆ ಹೋಗುವ ದಾರಿ ಯಾವುದು ಎಂದು ಕೇಳಿದ. ಪಾಪ, ತೊದಲ ಕೇಳುವಾಗ ಬಹಳ ಕಷ್ಟಪಟ್ಟು ಕೇಳುತ್ತಾನೆ. ವಿ. ವಿ. ವಿಧಾನಸೌಧಕ್ಕೆ ಹೋ ಹೋಗುವುದು ಹೇಗೆ ಎಂದ. ಪಾಪ ಅವನು ಕಷ್ಟಪಟ್ಟು ಕೇಳುತ್ತಿದ್ದರೂ ಅಲ್ಲಿ ನಿಂತುಕೊಂಡಿದ್ದಂಥ ಮನುಷ್ಯ ವಿಧಾನಸೌಧಕ್ಕೆ ಹೋಗುವ ದಾರಿ ತೋರಿಸುತ್ತಿಲ್ಲ. ಎರಡು ಸಾರಿ ಮೂರು ಸಾರಿ ಕೇಳಿದರೂ ತೋರಿಸದಿದ್ದಾಗ ಮ...ಮ.....ಮನುಷ್ಯ ಏನಯ್ಯ ನೀನು ಎಂದು ಹೇಳಿದ. ಆದರೂ ಇನ್ನೊಬ್ಬ ಸರ್ಕಲ್‌ನಲ್ಲಿ ನಿಂತ ಒಬ್ಬ ಮನುಷ್ಯ ಹೇಳಲೇ ಇಲ್ಲ ಇದು ವಿಧಾನಸೌಧಕ್ಕೆ ದಾರಿಯೆಂದು. ಬೈದು ಆದಮೇಲೆ ತೊದಲ ಅವನು ತನ್ನ ದಾರಿ ಹಿಡಿದುಕೊಂಡು ವಾಪಸ್ಸು ಹೊರಟು ಹೋದಮೇಲೆ, ದೂರದಲ್ಲಿದ್ದವನೊಬ್ಬ ಬಂದು ಅವನನ್ನು ಕೇಳಿದ ಮೇಲೆ ಏಕೆ ನಿನಗೆ ವಿಧಾನಸೌಧಕ್ಕೆ ದಾರಿ ಗೊತ್ತಿಲ್ಲವಾ ಎಂದು. ಅವನು ಗೊತ್ತು ಅಂದ. ಕಿವುಡನಾ ನೀನು ಅಲ್ಲ, ಮೂಗನೇನಪ್ಪ ಅಲಲ್ಲ, ಮತ್ತೆ ನೀನು ಮೂಗನೂ ಅಲ್ಲ ಕಿವುಡ ಅಲ್ಲ ನಿನಗೆ ದಾರಿ ಕೂಡ ಗೊತ್ತಿದೆ ಏಕೆ ತೋರಿಸಲಿಲ್ಲ? ಸುಮ್ಮನೆ ಅನ್ಯಾಯವಾಗಿ ಬೈಯಿಸಿಕೊಂಡಲ್ಲಪ್ಪ ಎಂದು ಕೇಳಿದರೆ ಆಗ ಅವನು ಹೇಳಿದನಂತೆ ಸರ್ಕಲ್‌ನಲ್ಲಿದ್ದವನು, ಬರೀ ಬೈಯಿಸಿಕೊಂಡೆ, ಹೇಳಿದ್ದಿದ್ದರೆ ಅಣಗಿಸುತ್ತಿದ್ದೇನೆ ಎಂದು ಅವನು ನನಗೆ ಕಪಾಳಕ್ಕೆ ಹೊಡೆದಿರೋನು ಅಂತ. ಏಕೆಂದರೆ ಅಲ್ಲೂ ಒಬ್ಬ ತೊದಲ ನಿಂತು ಕೊಂಡಿದ್ದ. ಕಾಂಗ್ರೆಸ್‌ನವರದ್ದು ಹಾಗೆ ಆಗಿಬಿಟ್ಟಿದೆ. ಅವರು ಏನಾದರೂ ಹೇಳಲಿಕ್ಕೆ ಹೋದರೆ ಬರೀ ಬೈಯಿಸಿಕೊಂಡು ಹೋಗುತ್ತಾರೆ ಹೋಗಲಿ, ಹೊಡೆದಾರೂ ಅಂತ ಇವರಿಗೆ ಹೆದರಿಕೆ. ಈ ತರಹದ ಸಂದರ್ಭವನ್ನು ಉಪಯೋಗಿಸಿಕೊಂಡು ದಳದವರು ಕಾಂಗ್ರೆಸ್(ಐ)ನವರ ಮೇಲೆ ಆಪಾದನೆ ಮಾಡಿಕೊಳ್ಳುತ್ತಾ ಈ ತರಹ ಬಿಲ್ಲನ್ನು ತಂದು ಬಡವರಿಗೆ ಅನ್ಯಾಯವನ್ನು ದಯಮಾಡಿ ಮಾಡಬೇಡಿ. ಬಡವರ ಕೂಳನ್ನು ಕಸಿದುಕೊಳ್ಳಬೇಡಿ. ಹಸಿದ

ಹೊಟ್ಟೆಗೆ ಹಣದ ಗಂಟನ್ನು ಹಿಡಿದುಕೊಂಡು ಹೋದರೆ, ಖಂಡಿತಾ ಅವನು ಭೂಮಿ ಮಾರಿಕೊಂಡು ಭಿಕಾರಿಯಾಗುತ್ತಾನೆ, ಅನ್ನುವಂತಹ ಎರಡು ಮೂರು ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತಾ, ಕಪ್ಪು ಹಣಕ್ಕೆ ಬೆಂಬಲ ಕೊಡತಕ್ಕ ಈ ಮುಸುಕಿನ ಗುತ್ತು ಬಂಡವಾಳಶಾಹಿಗಳಿಗೆ ಬೆಂಬಲ ಕೊಡತಕ್ಕ ಈ ತರಹ ಶುಗರ್ ಕೋಟೆಡ್ ಫಿಲ್ಸನಿಂದ ಈ ಸಮಾಜಕ್ಕೆ ಎಂದೂ ಒಳ್ಳೆಯದಾಗುವುದಿಲ್ಲ. ಅವರಿಗೆ ಅನ್ಯಾಯವನ್ನು ಮಾಡುತ್ತಿದ್ದೀರಿ. ಅಲ್ಲಿ ಕುಳಿತಿರತಕ್ಕವರು ಸಮಾಜವಾದದ ಹೋರಾಟ ಮಾಡಿದಂತಹ ಹೆಗ್ಗಳಿಕೆ ಇರತಕ್ಕವರೂ ಕೂಡ ತಮ್ಮ ಆತ್ಮಸಾಕ್ಷಿಯನ್ನು ಒಮ್ಮೆ ಮುಟ್ಟಿಕೊಂಡು ನೋಡಲಿ ಎನ್ನತಕ್ಕ ಮಾತನ್ನು ಹೇಳಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಅಧ್ಯಕ್ಷರು : ಕರ್ನಾಟಕ ಭೂಸುಧಾರಣೆಗಳ ತಿದ್ದುಪಡಿ ವಿಧೇಯಕದ ಮೇಲೆ ಚರ್ಚೆ ಇಲ್ಲಿಗೆ ಮುಕ್ತಾಯವಾಯಿತು. ನಾಳೆ ಬೆಳಿಗ್ಗೆ ಮಾನ್ಯ ಕಂದಾಯಮಂತ್ರಿಗಳು ಉತ್ತರ ಕೊಡಲಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ. ನಾನು ಒಂದು ಸಲಹೆ ಕೊಡುತ್ತೇನೆ. ವಿಷಯ ಸದನ ಸಮಿತಿಯಲ್ಲಿ ನಾವು ಕೊಟ್ಟಿದ್ದೇವೆ. ದಯಮಾಡಿ ನೀವು ತಿದ್ದುಪಡಿಯನ್ನು ಸದನಕ್ಕೆ ಯಾವುದೇ ದೃಷ್ಟಿಯಿಂದ ತಂದಿದ್ದರೂ ತುಂಬಾ ಸಲಹೆ ಮಾಡುವಂತಹ ಅಗತ್ಯವಿದೆ. ತಾವು ಒಪ್ಪಿಕೊಂಡು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸುವುದಾದರೆ ಬಹುಶಃ ನಾಳೆ ಉತ್ತರ ಕೊಡುವ ಪ್ರಶ್ನೆ ಬರುವುದಿಲ್ಲ. ನಮ್ಮೆಲ್ಲರನ್ನೂ ದಯಮಾಡಿ ಕಾನ್ಫಿಡೆನ್ಸ್‌ಗೆ ತೆಗೆದುಕೊಳ್ಳುವುದು ಒಳ್ಳೆಯದೆಂದು ನಾನು ಈವೊಂದು ಸಲಹೆಯನ್ನು ಕೊಡುತ್ತಿದ್ದೇನೆ ಅಷ್ಟೆ.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ, ಈಗ ಅವರಿಗೆ ಒಳ್ಳೆಯ ಗ್ರಾಸ ಸಿಕ್ಕಿದೆ. ಕಾಂಗ್ರೆಸ್‌ನವರಿಗೆ ಮತ್ತು ನಮ್ಮ ವಿರೋಧಪಕ್ಷದ ನಾಯಕರಿಗೆ. ಇನ್ನೇನು ಎರಡು ತಿಂಗಳೊಳಗೆ ಚುನಾವಣೆ ನಮ್ಮ ಮುಂದಿದೆ. ಇದೆಲ್ಲಾ ಹೇಳಲಿ ನಾಳೆ ಉತ್ತರವನ್ನು ನಾನೇ ಕೊಡುತ್ತೇನೆ. ನಾಳೆ ನಾನೇ ಉತ್ತರ ಕೊಡುತ್ತೇನೆ, ಯಾರ್‍ಯಾರು ಏನೇನು ಮಾಡಿದ್ದಾರೆ ಮಾನ್ಯ ವೀರಪ್ಪಮೊಯಿಲಿಯವರು ಏನು ಮಾಡಿದ್ದಾರೆ, ನಾವೇನು ಮಾಡಿದ್ದೇವೆ ಯಾವ್ಯಾವ ಕಾಲದಲ್ಲಿ ಏನೇನು ನಡೆದಿದೆ. ದಯಮಾಡಿ ಸ್ವಲ್ಪ ಅವಕಾಶ ಕೊಡಿ. ಇದೆಲ್ಲವನ್ನೂ ಜನಗಳ ಮುಂದಿಡೋಣ. ಉತ್ತರ ಜನ ಕೊಡಲಿ. ಬಡವರ ಪರವಾಗಿ ಯಾರಿದ್ದಾರೆ ಶ್ರೀಮಂತರ ಪರವಾಗಿ ಯಾರಿದ್ದಾರೆ ಎಂಬ ಬಗ್ಗೆ ನಾಳೆ ನಾನು ಈ ಸಭೆಯಲ್ಲಿ ಉತ್ತರ ಕೊಡುತ್ತೇನೆ. ಆಮೇಲೆ ಸಭೆ ತೀರ್ಮಾನ ಮಾಡಲಿ.

ಅಧ್ಯಕ್ಷರು : ಈಗ ಸಭೆಯನ್ನು ಮುಂದೂಡಲಾಗಿದೆ. ಸಭೆ ನಾಳೆ ಪುನಃ 10 ಗಂಟೆಗೆ ಸೇರುತ್ತದೆ.

ಸಭೆಯು 6 ಗಂಟೆ 34 ನಿಮಿಷಗಳಿಗೆ ಮುಂದೂಡಲ್ಪಟ್ಟು ನಾಳೆ ಬೆಳಿಗ್ಗೆ 10 ಗಂಟೆಗೆ ಸೇರಲು ತೀರ್ಮಾನಿಸಿಲಾಯಿತು.

(+ ಈ ಚಿಹ್ನೆಯನ್ನು ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)